ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಏಪ್ರಿಲ್ 3 ಗುರುವಾರ 2025

ಸಂಪುಟ: 45 | ಸಂಚಿಕೆ: 343 | ಪುಟಗಳು: 12


₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

ವಕ್ಫ್ ತಿದ್ದುಪಡಿ ಮಸೂದೆಗೆ ಲೋಕಸಭೆಯಲ್ಲಿ ಅಂಗೀಕಾರ

- ಪರವಾಗಿ 288, ವಿರುದ್ಧವಾಗಿ 232 ಮತ ಚಲಾವಣೆ
- ವಕ್ಫ್ ಅಗ್ನಿಪರೀಕ್ಷೆ ಗೆದ್ದ ಪ್ರಧಾನಿ ಮೋದಿ
- ವಕ್ಫ್ ಈಗ 'ಉಮೀದ್'!



ಕೇಂದ್ರ ಸಚಿವ ಕಿರಣ್ ರಿಜಿಜು ವಕ್ಫ್ ತಿದ್ದುಪಡಿ ಮಸೂದೆ ಮಂಡಿಸಿದರು.

ನವದೆಹಲಿ, ಏ.2– ದೇಶಾದ್ಯಂತ ಭಾರಿ ಚರ್ಚೆಗೆ ಗ್ರಾಸವಾಗಿದ್ದ ವಕ್ಫ್ (ತಿದ್ದುಪಡಿ) ಮಸೂದೆ ಲೋಕಸಭೆಯಲ್ಲಿ ಬುಧವಾರ ಸರಿರಾತ್ರಿ ಅಂಗೀಕಾರವಾಯಿತು.

ಲೋಕಸಭೆಯಲ್ಲಿ ಪ್ರಶ್ನೋತ್ತರ ಅವಧಿ ಮುಗಿದ ನಂತರ ಮಧ್ಯಾಹ್ನ ಕೇಂದ್ರ ಸಚಿವ ಕಿರಣ್ ರಿಜಿಜು ವಕ್ಫ್ ತಿದ್ದುಪಡಿ ಮಸೂದೆಯನ್ನು ಮಂಡಿಸಿದರು. ಚರ್ಚೆಗೆ ಸ್ಪೀಕರ್ ಓಂ ಬಿರ್ಲಾ ಅವರು 8 ಗಂಟೆಗಳ ಕಾಲಾವಕಾಶ ನೀಡಿದ್ದರಾದರೂ, ಚರ್ಚೆಯು 11 ಗಂಟೆಗಳ ಕಾಲ ನಡೆಯಿತು. ಈ ವೇಳೆ ಇಂಡಿಯಾ ಮೈತ್ರಿಕೂಟ ಮಸೂದೆಗೆ ತೀವ್ರ ವಿರೋಧ ವ್ಯಕ್ತಪಡಿಸಿತು. ಅಲ್ಪಸಂಖ್ಯಾತರನ್ನು ಹತ್ತಿಕ್ಕುವ ಉದ್ದೇಶದಿಂದ ಈ ಮಸೂದೆಯನ್ನು ತರಲಾಗುತ್ತಿದೆ ಎಂದು ವಾಗ್ದಾಳಿ ನಡೆಸಿದರು. ಇದಕ್ಕೆ ಸಮರ್ಥ ಜವಾಬು ನೀಡಿದ ಸಚಿವ ಕಿರಣ್ ರಿಜಿಜು, ಇದು ಸದುದ್ದೇಶದಿಂದ ಕೂಡಿದೆ ಎಂದು ಬಲವಾಗಿ ಸಮರ್ಥಿಸಿಕೊಂಡರು. ಸುದೀರ್ಘ ಚರ್ಚೆ ಬಳಿಕ ಸ್ಪೀಕರ್ ಓಂ ಬಿರ್ಲಾ ಮಸೂದೆಯನ್ನು ಮತಕ್ಕೆ ಹಾಕಿದಾಗ ಪರವಾಗಿ 288 ಹಾಗೂ ವಿರುದ್ಧವಾಗಿ 232 ಮತ ಚಲಾವಣೆಯಾದವು. ಇದರೊಂದಿಗೆ ಲೋಕಸಭೆಯಲ್ಲಿ ಮಸೂದೆ ಅಂಗೀಕಾರವಾಯಿತು.

ಇದಕ್ಕೂ ಮುನ್ನ ಇಂಡಿಯಾ ಮೈತ್ರಿಕೂಟ ಮತ್ತು ಇತರ ಪಕ್ಷಗಳ ತೀವ್ರ ವಿರೋಧದ ನಡುವೆ, ವಕ್ಫ್ ತಿದ್ದುಪಡಿ ಮಸೂದೆಗೆ ಕೇಂದ್ರ ಸರ್ಕಾರ ಹೊಸ ಹೆಸರನ್ನು ಇಟ್ಟಿದೆ. ಈ ಸಂಬಂಧ ಲೋಕಸಭೆಯಲ್ಲಿ ■6ನೇ ಪುಟಕ್ಕೆ

ಮಸೂದೆಯಲ್ಲಿ ಆಗಿರುವ ಬದಲಾವಣೆ

ನವದೆಹಲಿ: ವಿಪಕ್ಷಗಳು ಮತ್ತು ಮುಸ್ಲಿಮರ ವಿರೋಧದ ನಡುವೆ ಲೋಕಸಭೆಯಲ್ಲಿ ವಕ್ಫ್ ತಿದ್ದುಪಡಿ ಮಸೂದೆಯನ್ನು ಮಧ್ಯಾಹ್ನ ಕೇಂದ್ರ ಸಂಸದೀಯ ವ್ಯವಹಾರಗಳ ಖಾತೆಯ ಸಚಿವ ಕಿರಣ್ ರಿಜಿಜು ಮಂಡಿಸಿದ್ದಾರೆ.

ಈ ಹಿಂದೆ ಏನಿತ್ತು? ಈಗ ಏನಾಗಿದೆ ಎಂಬುದರ ವಿವರ

ವಕ್ಫ್ ಆಸ್ತಿಗಳ ಸರ್ವೆ ಮತ್ತು ನಿಯಂತ್ರಣ

ಹಿಂದಿನ ಕಾನೂನು: ಸರ್ವೆಯನ್ನು ರಾಜ್ಯ ಸರ್ಕಾರ ನೇಮಿಸಿದ ಸರ್ವೆ ಆಯುಕ್ತರು ನಡೆಸುತ್ತಿದ್ದರು. ಈ ಪ್ರಕ್ರಿಯೆಯಲ್ಲಿ ಸರ್ಕಾರದ ನೇರ ಹಸ್ತಕ್ಷೇಪ ಕಡಿಮೆ ಇತ್ತು.

ಹೊಸ ತಿದ್ದುಪಡಿ: ಸರ್ವೆಗಳನ್ನು ಡಿಸಿಗಳಿಗೆ ವರ್ಗಾಯಿಸಲಾಗಿದೆ. ಡಿಸಿಗಳ ಮೇಲ್ವಿಚಾರಣೆಯಲ್ಲಿ ರಾಜ್ಯದ ಕಂದಾಯ ಕಾನೂನುಗಳಿಗೆ ಅನುಗುಣವಾಗಿ ಸರ್ವೆ ನಡೆಯಲಿದೆ. ಇದರಿಂದ ಸರ್ಕಾರಕ್ಕೆ ವಕ್ಫ್ ಆಸ್ತಿಗಳ ಮೇಲೆ ಹೆಚ್ಚಿನ ನಿಯಂತ್ರಣ ಸಿಗಲಿದೆ.

ವಕ್ಫ್ ಘೋಷಣೆಗೆ ಷರತ್ತುಗಳು

ಹಿಂದಿನ ಕಾನೂನು: ವಕ್ಫ್ ಘೋಷಿಸಲು ಯಾವುದೇ ನಿರ್ದಿಷ್ಟ ಅವಧಿಯ ಷರತ್ತು ಇರಲಿಲ್ಲ. ಯಾರಾದರೂ ಮುಸ್ಲಿಂ ವ್ಯಕ್ತಿ ತಮ್ಮ ಆಸ್ತಿಯನ್ನು ವಕ್ಫ್ ಆಗಿ ಘೋಷಿಸಬಹುದಿತ್ತು.

ಹೊಸ ತಿದ್ದುಪಡಿ: ಇಸ್ಲಾಂ ಧರ್ಮವನ್ನು ಕನಿಷ್ಠ 5 ವರ್ಷ ಪಾಲಿಸಿದ ವ್ಯಕ್ತಿಯೊಬ್ಬರಿಗೆ ಮಾತ್ರ ವಕ್ಫ್ ಘೋಷಿಸುವ ಅಧಿಕಾರ ನೀಡಲಾಗಿದೆ. ಇದರಿಂದ ದುರುಪಯೋಗ ತಡೆಗಟ್ಟುವ ಉದ್ದೇಶವಿದೆ.

ಮಹಿಳೆಯರಿಗೆ ಆಸ್ತಿ ಹಕ್ಕು

ಹಿಂದಿನ ಕಾನೂನು: ಮಹಿಳೆಯರಿಗೆ ಹಕ್ಕುಗಳನ್ನು ಸ್ಪಷ್ಟವಾಗಿ ಖಾತ್ರಿಪಡಿಸುವ ನಿರ್ದಿಷ್ಟ ಉಲ್ಲೇಖ ಇರಲಿಲ್ಲ.

ಹೊಸ ತಿದ್ದುಪಡಿ: ಮಹಿಳೆಯರಿಗೆ ಸಮಾನ ಹಕ್ಕುಗಳನ್ನು ಖಾತ್ರಿಪಡಿಸುವ ನಿಬಂಧನೆ ಸೇರಿಸಲಾಗಿದೆ. ಇದು ಲಿಂಗ ಸಮಾನತೆಯತ್ತ ಒಂದು ಹೆಜ್ಜೆ ಎಂದು ಪರಿಗಣನೆ.

ವಕ್ಫ್ ಮಂಡಳಿಯ ರಚನೆ

ಹಿಂದಿನ ಕಾನೂನು: ಕೇಂದ್ರ, ರಾಜ್ಯ ವಕ್ಫ್ ಮಂಡಳಿಗಳಲ್ಲಿ ಮಹಿಳೆಯರು ಅಥವಾ ಮುಸ್ಲಿಮೇತರ ಸದಸ್ಯರನ್ನು ಸೇರಿಸುವ ಕಡ್ಡಾಯ ನಿಯಮ ಇರಲಿಲ್ಲ.

ಹೊಸ ತಿದ್ದುಪಡಿ: ಕೇಂದ್ರ ವಕ್ಫ್ ಮಂಡಳಿಯಲ್ಲಿ ಕನಿಷ್ಠ ಇಬ್ಬರು ಮಹಿಳೆಯರು, ಇಬ್ಬರು ಮುಸ್ಲಿಮೇತರ ಸದಸ್ಯರನ್ನು ನೇಮಿಸುವುದು ಕಡ್ಡಾಯ. ಇದೇ ರೀತಿ ರಾಜ್ಯ ವಕ್ಫ್ ಮಂಡಳಿಗಳಲ್ಲಿಯೂ ಈ ಬದಲಾವಣೆ ತರಲಾಗಿದೆ.

ಲೆಕ್ಕಪರಿಶೋಧನೆ

ಹಿಂದಿನ ಕಾನೂನು: ವಕ್ಫ್ ಮಂಡಳಿಗಳ ಖಾತೆಗಳ ಲೆಕ್ಕಪರಿಶೋಧನೆಯನ್ನು ಮಂಡಳಿಯೇ ನೇಮಿಸಿದ ಲೆಕ್ಕಪರಿಶೋಧಕರು ಮಾಡುತ್ತಿದ್ದರು. ರಾಜ್ಯ ಸರ್ಕಾರಕ್ಕೂ ಆಡಿಟ್ ಮಾಡುವ ಅವಕಾಶ ಇತ್ತು.

ಹೊಸ ತಿದ್ದುಪಡಿ: ರಾಜ್ಯ ಸರ್ಕಾರವು ರಚಿಸುವ ಲೆಕ್ಕಪರಿಶೋಧಕರ ಸಮಿತಿಯೇ ಆಡಿಟ್ ನಡೆಸಬೇಕು. ಇದರಿಂದ ಸರ್ಕಾರದ ಮೇಲ್ವಿಚಾರಣೆ ಹೆಚ್ಚಾಗಲಿದೆ.

ಆಸ್ತಿ ನೋಂದಣಿ ಮತ್ತು ಪಾರದರ್ಶಕತೆ

ಹಿಂದಿನ ಕಾನೂನು: ವಕ್ಫ್ ಆಸ್ತಿಗಳ ನೋಂದಣಿ ಮತ್ತು ವಿವರಗಳ ಸಲ್ಲಿಕೆಗೆ ಕಡ್ಡಾಯ ಸಮಯ ಮಿತಿ ಇರಲಿಲ್ಲ.

ಹೊಸ ತಿದ್ದುಪಡಿ: ಎಲ್ಲಾ ವಕ್ಫ್ ಆಸ್ತಿಗಳನ್ನು ಕಾಯಿದೆಯಡಿ ನೋಂದಾಯಿಸುವುದು ಕಡ್ಡಾಯ. ಆರು ತಿಂಗಳೊಳಗೆ ವಿವರ ಸಲ್ಲಿಸಬೇಕು. ಪ್ರತಿ ಐದು ವರ್ಷಕ್ಕೊಮ್ಮೆ ಸರ್ವೆ ನಡೆಸಬೇಕು.

ಅಮಿತ್ ಶಾ ಉಲ್ಲೇಖಿಸಿದ ವಕ್ಫ್ ಮಂಡಳಿ ಭೂಕಬಳಿಕೆ ಉದಾಹರಣೆಗಳು!

ವಕ್ಫ್ ಮಂಡಳಿಯ ಒಡೆತನದ 500 ಕೋಟಿ ರೂ. ಮೌಲ್ಯದ ಪ್ರಮುಖ ಭೂಮಿಯನ್ನು ಪಂಚತಾರಾ ಹೋಟೆಲ್‌ಗೆ ತಿಂಗಳಿಗೆ ಕೇವಲ 12,000 ರೂ. ಬಾಡಿಗೆಗೆ ನೀಡಲಾಗಿದ್ದು, ಇದು ದುರುಪಯೋಗ ಮತ್ತು ಪಕ್ಷಪಾತದ ಬಗ್ಗೆ ಕಳವಳವನ್ನು ಹುಟ್ಟುಹಾಕಿದೆ.

ಕರ್ನಾಟಕದ ಮಣಿಪ್ಪಾಡಿ ಸಮಿತಿಯು ಸುಮಾರು 29,000 ಎಕರೆ ವಕ್ಫ್ ಭೂಮಿಯನ್ನು ವಿದೇಶಿ ಸಂಸ್ಥೆಗಳಿಗೆ ಗುತ್ತಿಗೆ ನೀಡಲಾಗಿದೆ ಎಂದು ವರದಿ ಮಾಡಿದೆ. ಇದು ಗಮನಾರ್ಹ ಆದಾಯ ನಷ್ಟಕ್ಕೆ ಕಾರಣವಾಗಿದೆ.



2001 ಮತ್ತು 2012ರ ನಡುವೆ 2 ಲಕ್ಷ ಕೋಟಿ ರೂ. ಮೌಲ್ಯದ ವಕ್ಫ್ ಆಸ್ತಿಗಳನ್ನು ಖಾಸಗಿ ಸಂಸ್ಥೆಗಳಿಗೆ 100 ವರ್ಷಗಳ ಅವಧಿಗೆ ಗುತ್ತಿಗೆ ನೀಡಲಾಗಿದ್ದು, ಈ ಸ್ವತ್ತುಗಳ ದೀರ್ಘಾವಧಿಯ ನಿಯಂತ್ರಣ ಮತ್ತು ಸರಿಯಾದ ಬಳಕೆ ಬಗ್ಗೆ ಕಳವಳಗಳನ್ನು ಹುಟ್ಟುಹಾಕಿದೆ.

ಕರ್ನಾಟಕ ಹೈಕೋರ್ಟ್ ಮಧ್ಯ ಪ್ರವೇಶಿಸಿ ಧಾರ್ಮಿಕ ಟ್ರಸ್ಟ್‌ಗಳನ್ನು ಒಳಗೊಂಡ ಕಾನೂನು ಹೋರಾಟಗಳು ಮತ್ತು ಭೂ ವಿವಾದಗಳನ್ನು ಎತ್ತಿ ತೋರಿಸಿತು. ಕರ್ನಾಟಕದ ವಿಜಯಪುರದ ■6ನೇ ಪುಟಕ್ಕೆ

ಮುಡಾ ನಿವೇಶನ ಅಕ್ರಮ ಮಂಜೂರಾತಿ ಪ್ರಕರಣ

ಲೋಕಾಯುಕ್ತ ವರದಿ ತಿರಸ್ಕರಿಸುವಂತೆ ಕೋರ್ಟ್‌ಗೆ ಇಡಿ ತಕರಾರು ಅರ್ಜಿ

ಬೆಂಗಳೂರು,ಏ.2(ಕೆಎಂಶಿ)–ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ (ಮುಡಾ) ವತಿಯಿಂದ ಬಿಡಿ ನಿವೇಶನಗಳ ಹಂಚಿಕೆಗೆ ಸಂಬಂಧಿಸಿದಂತೆ ಲೋಕಾಯುಕ್ತ ನೀಡಿರುವ ವರದಿಯನ್ನು ತಿರಸ್ಕರಿಸಿ ಎಂದು ಜಾರಿ ನಿರ್ದೇಶನಾಲಯ (ಇ.ಡಿ.) ನ್ಯಾಯಾಲಯಕ್ಕೆ ತಕರಾರು ಅರ್ಜಿ ಸಲ್ಲಿಸಿದೆ.

ಮುಡಾ ವತಿಯಿಂದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಕುಟುಂಬ 14 ನಿವೇಶನಗಳನ್ನು ಪಡೆದುಕೊಳ್ಳುವಲ್ಲಿ ಅನೇಕ ತಪ್ಪುಗಳನ್ನು ಎಸಗಿದೆ. ಅದಕ್ಕೆ ಸಂಬಂಧಪಟ್ಟಂತೆ ನಮ್ಮ ಬಳಿ ದಾಖಲೆಗಳಿವೆ ಎಂದು ಜನಪ್ರತಿನಿಧಿಗಳ ನ್ಯಾಯಾಲಯಕ್ಕೆ ಇ.ಡಿ. ಸಲ್ಲಿಸಿರುವ ಅರ್ಜಿಯಲ್ಲಿ ತಿಳಿಸಿದೆ.

ನಮ್ಮ ತನಿಖೆಯಿಂದ ತಪ್ಪುಗಳು ಸಾಬೀತಾಗಿದೆ. ಹೀಗಿದ್ದರೂ ಅವರು ತಪ್ಪು ಮಾಡಿಲ್ಲ ಎಂಬುದಾಗಿ ಲೋಕಾಯುಕ್ತ ಬಿ ರಿಪೋರ್ಟ್ ನೀಡಿರುವುದು ಸರಿಯಲ್ಲ. ಹೀಗಾಗಿ ಲೋಕಾಯುಕ್ತ ವರದಿ ತಿರಸ್ಕರಿಸಿ ಮುಂದಿನ ವಿಚಾರಣೆಗೆ ಅವಕಾಶ ಮಾಡಿಕೊಡುವಂತೆ ಇ.ಡಿ. ಮನವಿ ಮಾಡಿದೆ.



ಬಿಡಿ ನಿವೇಶನಗಳ ಹಂಚಿಕೆಗೆ ಸಂಬಂಧಿಸಿದಂತೆ ಇ.ಡಿ. ಸಿದ್ಧಪಡಿಸಿದ್ದ ಎಂಟು ಪುಟಗಳ ಅರ್ಜಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿದೆ. ಮುಡಾದಿಂದ ಕೋಟ್ಯಾಂತರ ರೂ. ಮೌಲ್ಯದ ಬಿಡಿ ನಿವೇಶನಗಳನ್ನು ಮುಖ್ಯಮಂತ್ರಿ ಅವರ ಕುಟುಂಬ ಪಡೆದುಕೊಂಡಿತ್ತು. ಈ ಬಗ್ಗೆ ಸಿದ್ದರಾಮಯ್ಯ ಮತ್ತಿತರರ ವಿರುದ್ಧ ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡುವಂತೆ ಸಾಮಾಜಿಕ ಕಾರ್ಯಕರ್ತೆ ಸ್ನೇಹಮಯಿ ಕೃಷ್ಣ ರಾಜ್ಯಪಾಲರ ಮೊರೆ ಹೋಗಿದ್ದರು. ■6ನೇ ಪುಟಕ್ಕೆ

ಇಡಿ ತನಿಖೆಗೆ ಹೈಕೋರ್ಟ್ ಅನುಮತಿ

ಸಿದ್ದರಾಮಯ್ಯರಿಗೆ ಮತ್ತೆ ಸಂಕಷ್ಟ



ಬೆಂಗಳೂರು: ಮುಡಾ ನಿವೇಶನ ಹಂಚಿಕೆ ಪ್ರಕರಣಕ್ಕೆ ಸಂಬಂಧಿಸಿದಂತೆ ಮಾಜಿ ಆಯುಕ್ತ ಡಿ.ಬಿ.ನಟೇಶ್ ಹೊರತುಪಡಿಸಿ ಉಳಿದ ಎಲ್ಲಾ ಆರೋಪಿಗಳ ವಿರುದ್ಧ ತನಿಖೆ ನಡೆಸಲು ಕರ್ನಾಟಕ ಹೈಕೋರ್ಟ್ ಬುಧವಾರ ಜಾರಿ ನಿರ್ದೇಶನಾಲಯಕ್ಕೆ(ಇಡಿ) ಅನುಮತಿ ನೀಡಿದೆ. ಮುಡಾ ಮಾಜಿ ಆಯುಕ್ತ ಡಿ.ಬಿ.ನಟೇಶ್ ಅವರಿಗೆ ನೀಡಲಾಗಿದ್ದ ಸಮನ್ಸ್ ರದ್ದುಗೊಳಿಸಿದ್ದ ಹೈಕೋರ್ಟ್ ಏಕಸದಸ್ಯ ಪೀಠದ ಆದೇಶಕ್ಕೆ ತಡೆ ಕೋರಿ ಇಡಿ ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಎನ್.ವಿ.ಅಂಜಾರಿಯಾ ಮತ್ತು ನ್ಯಾಯಮೂರ್ತಿ ■6ನೇ ಪುಟಕ್ಕೆ

ಬೆಲೆ ಏರಿಕೆ ವಿರೋಧಿಸಿ ಬಿಜೆಪಿ ಅಹೋರಾತ್ರಿ ಧರಣಿ

- ಪಕ್ಷದ ನಾಯಕರಿಂದ ಸರ್ಕಾರದ ವಿರುದ್ಧ ಟೀಕಾಪ್ರಹಾರ
- ಅತ್ತ ಬಿಜೆಪಿ ಹೋರಾಟಕ್ಕೆ ತಲೆ ಕೆಡಿಸಿಕೊಳ್ಳದೆ ಸಿಎಂ, ಸಚಿವರು ದೆಹಲಿ ಯಾತ್ರೆ!

ಬೆಂಗಳೂರು, ಏ.2(ಕೆಎಂಶಿ)–ಬೆಲೆ ಏರಿಕೆ ಹಿಂಪಡೆಯುವಂತೆ ಒತ್ತಾಯಿಸಿ ಬಿಜೆಪಿ ಅಹೋರಾತ್ರಿ ಧರಣಿ ನಡೆಸಿದೆ.

ಬಡವರು ಮತ್ತು ಮಧ್ಯಮ ವರ್ಗದವರ ಮೇಲೆ ನಡೆಸುತ್ತಿರುವ ಬೆಲೆ ಏರಿಕೆ ದಬ್ಬಾಳಿಕೆಯನ್ನು ಕೂಡಲೇ ನಿಲ್ಲಿಸಬೇಕೆಂದು ಆಗ್ರಹಿಸಿ ಪಕ್ಷದ ಶಾಸಕರು, ಸಂಸದರು, ಮುಖಂಡರು ನಗರದ ಫ್ರೀಡಂ ಪಾರ್ಕ್‌ನಲ್ಲಿ ಪ್ರತಿಭಟನೆ ನಡೆಸುವ ಮೂಲಕ ಸರ್ಕಾರದ ಕಣ್ತೆರೆಸಲು ಪ್ರಯತ್ನಿಸಿದರು.

ಬಿಜೆಪಿಯ ಕೂಗಿಗೆ ಯಾವ ಕಿಮ್ಮತ್ತೂ ನೀಡದ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಸಚಿವರು, ಇಂದಿನಿಂದ ದೆಹಲಿ ಯಾತ್ರೆ ಕೈಗೊಂಡಿದ್ದಾರೆ. ಪ್ರತಿಪಕ್ಷ ಬಿಜೆಪಿ ಅಹೋರಾತ್ರಿ ಧರಣಿಗೆ ಕರೆ ನೀಡುತ್ತಿದ್ದಂತೆ ಸರ್ಕಾರ ಡೀಸೆಲ್ ಮೇಲಿನ ಸೆಸ್ ಅನ್ನು 2 ರೂ. ಹೆಚ್ಚಿಸಿ ಸವಾಲೆಸೆದಿದೆ.

ಫ್ರೀಡಂ ಪಾರ್ಕ್‌ನಲ್ಲಿ ಅಹೋರಾತ್ರಿ ಧರಣಿ ನಡೆಸುವುದಕ್ಕೂ ಮುನ್ನ ವಿಧಾನ ಮಂಡಲದ ಪ್ರತಿಪಕ್ಷ ನಾಯಕರಾದ ಆರ್.ಅಶೋಕ್, ಛಲವಾದಿ ನಾರಾಯಣಸ್ವಾಮಿ, ಪಕ್ಷದ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ನೇತೃತ್ವದಲ್ಲಿ ಬಿಜೆಪಿಯ ಉಭಯ ಸದನಗಳ ಸದಸ್ಯರು ವಿಧಾನಸೌಧದ ಮುಂದೆ ಧರಣಿ ನಡೆಸಿ ಸರ್ಕಾರದ ವಿರುದ್ಧ ಟೀಕಾಪ್ರಹಾರ ಮಾಡಿದ್ದಲ್ಲದೆ, ಹೆಚ್ಚಳ ಮಾಡಿರುವ ದರಗಳನ್ನು ಇಳಿಸುವಂತೆ ಒತ್ತಾಯಿಸಿದರು. ಬಡವರು ಮತ್ತು ಮಧ್ಯಮ ವರ್ಗದವರಿಗೆ ನ್ಯಾಯ ಕೊಡಿಸುವಲ್ಲಿ ಹೋರಾಟ ಆರಂಭಿಸಿರುವುದಾಗಿ ಹೇಳಿರುವ ನಾಯಕರು, ಈ ಹೋರಾಟವನ್ನು ರಾಜ್ಯಾದ್ಯಂತ ನಡೆಸುವುದಾಗಿಯೂ ಎಚ್ಚರಿಕೆ ನೀಡಿದ್ದಾರೆ. ಗ್ಯಾರಂಟಿ ಹೆಸರಿನಲ್ಲಿ ಒಂದೆಡೆ ಯೋಜನೆ ಅನುಷ್ಠಾನಗೊಳಿಸಿ ಮತ್ತೊಂದೆಡೆ ■6ನೇ ಪುಟಕ್ಕೆ



ಬಿಜೆಪಿ ಮುಖಂಡರು ಅಹೋರಾತ್ರಿ ಧರಣಿ ನಡೆಸುತ್ತಿರುವುದು.

ಏಪ್ರಿಲ್ 7ರಿಂದ ಜನಾಕ್ರೋಶ ಯಾತ್ರೆ ಪ್ರಾರಂಭಿಸಲಿದ್ದೇವೆ, ಸರ್ಕಾರಿ ಕಾಮಗಾರಿಗಳಲ್ಲಿ ಮುಸ್ಲಿಂ ಸಮುದಾಯಕ್ಕೆ ಕಾನೂನುಬಾಹಿರವಾಗಿ ಶೇ.4 ಮೀಸಲಾತಿ ನೀಡಿ, ಮತ್ತೊಂದೆಡೆ ಪರಿಶಿಷ್ಟ ಜಾತಿ, ಪಂಗಡಗಳ ಅಭಿವೃದ್ಧಿಗೆ ಮೀಸಲಿಟ್ಟ ಎಸ್‌ಇಪಿ, ಟಿಎಸ್‌ಪಿ ಹಣ ದುರುಪಯೋಗ ಮಾಡಲಾಗುತ್ತಿದೆ. ಇದು ಭ್ರಷ್ಟರ ಸರ್ಕಾರ, ಭ್ರಷ್ಟಾಚಾರದ ಗ್ಯಾರಂಟಿ ನೀಡುವ ಸರ್ಕಾರ, ಸಿದ್ದರಾಮಯ್ಯ ಹೆಸರಿಗಷ್ಟೇ ಮುಖ್ಯಮಂತ್ರಿ, ಅವರೀಗ ನಿದ್ದೆರಾಮಯ್ಯ, ಜನರ ಪಾಲಿಗೆ ಕಾಂಗ್ರೆಸ್ ಸರ್ಕಾರ ಸತ್ತು ಹೋಗಿದೆ. **–ಬಿಜೆಪಿ ಮುಖಂಡರು**

ಬಿಜೆಪಿಯ ಏಕಾಂಗಿ ಹೋರಾಟ ಸರಿಯಲ್ಲ

ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಸುರೇಶ್‌ಬಾಬು ಆಕ್ಷೇಪ

ಬೆಂಗಳೂರು, ಏ.2– ಬೆಲೆ ಏರಿಕೆ ವಿರುದ್ಧ ಬಿಜೆಪಿ ನಡೆಸುತ್ತಿರುವ ಏಕಾಂಗಿ ಹೋರಾಟಕ್ಕೆ ಜೆಡಿಎಸ್ ಆಕ್ಷೇಪ ವ್ಯಕ್ತಪಡಿಸಿದೆ. ಜೆಡಿಎಸ್ ಶಾಸಕಾಂಗ ನಾಯಕ ಸುರೇಶ್ ಬಾಬು ಬಿಜೆಪಿ ವಿರುದ್ಧ ಆಕ್ರೋಶ ಹೊರ ಹಾಕಿದ್ದು, ಬಿಜೆಪಿ ನಡೆ ಸರಿಯಲ್ಲ ಎಂದು ಕಿಡಿಕಾರಿದರು.

ವಿಧಾನಸೌಧದಲ್ಲಿ ಮಾತನಾಡಿದ ಅವರು, ಬಿಜೆಪಿ ಇಂದಿನಿಂದ ಅಹೋರಾತ್ರಿ ಧರಣಿ ಮಾಡುತ್ತಿದೆ. ಆದರೆ, ಜೆಡಿಎಸ್‌ಗೆ ಮೇಲುಗೈ ಆಗುತ್ತದೆ ಎಂದು ಬಿಜೆಪಿ ನಮ್ಮನ್ನು ಕರೆದಿಲ್ಲ. ಮುಡಾ ಪಾದಯಾತ್ರೆಯಲ್ಲಿ ಹೀಗೆ ಆಯಿತು. ಈಗಲೂ ಹೀಗೆ ಆಗಿದೆ. ಬಿಜೆಪಿ ನಾಯಕರಿಗೆ ಮನವಿ ಮಾಡುತ್ತೇವೆ. ಒಟ್ಟಾಗಿ ಹೋರಾಟ ಮಾಡಬೇಕು. ರಾಜ್ಯದಲ್ಲಿ ಸಮನ್ವಯ ಸಾಧಿಸಲು ಒಂದು ಸಮಿತಿ ರಚಿಸಬೇಕು ಎಂದು ಆಗ್ರಹಿಸಿದರು.



ಮೊದಲಿಂದಲೂ ನಾವು ಸಮನ್ವಯ ಸಮಿತಿ ಮಾಡಿ ಎಂದು ಹೇಳುತ್ತಿದ್ದೇವೆ. ಒಟ್ಟಾಗಿ ಹೋರಾಟ ಮಾಡಿದರೆ ಪ್ರಬಲವಾಗಿರುತ್ತದೆ, ಸರ್ಕಾರಕ್ಕೆ ಭಯ ಇರುತ್ತದೆ. ಬಿಜೆಪಿ ಹೋರಾಟದ ಬಗ್ಗೆ ನಮಗೆ ಯಾವುದೇ ಮಾಹಿತಿ ಕೊಟ್ಟಿಲ್ಲ. ದೇವೇಗೌಡ, ಕುಮಾರಸ್ವಾಮಿ ಅವರಿಗೂ ಹೇಳಿಲ್ಲ. ಇದು ಸರಿಯಾದ ಬೆಳವಣಿಗೆ ಅಲ್ಲ. ಇಬ್ಬರು ಒಟ್ಟಾಗಿ ಹೋಗಬೇಕು. ಈ ನಿಟ್ಟಿನಲ್ಲಿ ಎರಡು ಪಕ್ಷಗಳು ಕೂತು ಚರ್ಚಿಸಬೇಕು ಎಂದರು.

ಸಮನ್ವಯದ ಕೊರತೆ ಬಗ್ಗೆ ಕೇಂದ್ರದ ನಾಯಕರಿಗೆ ಗೊತ್ತಿಲ್ಲ ಅನ್ನಿಸುತ್ತದೆ. ರಾಜ್ಯ ನಾಯಕರು ಇದನ್ನು ಮಾಡುತ್ತಿದ್ದಾರೆ. ನಿಖಿಲ್, ಬಿಜೆಪಿ ಅವರು ಘೋಷಣೆ ಮಾಡಿದರು ಎಂದು ನಾವು ಹೋರಾಟ ಮಾಡುತ್ತೇವೆ ಅಂತ ಹೇಳಿದ್ದಾರೆ. ವಿಜಯೇಂದ್ರ ಅವರು ನಾವು ಪ್ರತ್ಯೇಕ ಹೋರಾಟ ಮಾಡುತ್ತೇವೆ ಎಂದು ಹೇಳಿದ್ದಾರೆ. ಇದು ಅವರ ಮನಸ್ಥಿತಿ ತೋರಿಸುತ್ತದೆ. ಎರಡು ಪಕ್ಷಗಳು ಪ್ರತ್ಯೇಕವಾಗಿ ಹೋರಾಟ ಮಾಡುವುದು ಸರಿಯಲ್ಲ ಎಂದು

ಮುಖ್ಯಮಂತ್ರಿ ಸಿದ್ದರಾಮಯ್ಯ ಕರ್ನಾಟಕವನ್ನು ಬರ್ಬಾತ್ ಮಾಡ್ತಾರೆ...!

ವಿಧಾನಪರಿಷತ್ ಸದಸ್ಯ ಹೆಚ್.ವಿಶ್ವನಾಥ್ ಆತಂಕದ ನುಡಿ

- ಈ ತನಕ 7.60 ಲಕ್ಷ ಕೋಟಿ ಸಾಲ
- ಹೊಸ ಸಾಲ ಹಳೆ ಸಾಲಕ್ಕೆ ಜಮಾ
- ಖರ್ಚು ವೆಚ್ಚದ ಬಗ್ಗೆ ಸಿದ್ದರಾಮಯ್ಯಗೆ ಪಾಠ ಮಾಡಿಸಬೇಕು
- ಸಿದ್ದರಾಮಯ್ಯ ಕೂತಾಯ್ತು; ಎದ್ದೇಳುವುದು ಬಹಳ ಕಷ್ಟ



ಹೆಚ್.ವಿಶ್ವನಾಥ್

ಮೈಸೂರು, ಏ.2(ಬಿಎಲ್‌ಯು)–ಕಾಂಗ್ರೆಸ್ ಸರ್ಕಾರದ ಗ್ಯಾರಂಟಿ ಯೋಜನೆ ಸೇರಿದಂತೆ ಇತರೆ ಅವೈಜ್ಞಾನಿಕ ನಿರ್ಣಯದಿಂದ ರಾಜ್ಯದ ಆರ್ಥಿಕ ಪರಿಸ್ಥಿತಿ ಹದಗೆಟ್ಟಿದ್ದು, 16ನೇ ಲೂಯಿ ಮನಸ್ಥಿತಿಯ ಮುಖ್ಯಮಂತ್ರಿ ಸಿದ್ದರಾಮಯ್ಯ, ಕರ್ನಾಟಕವನ್ನು ಬರ್ಬಾತ್ ಮಾಡುತ್ತಾರೆ ಎಂದು ವಿಧಾನ ಪರಿಷತ್ ಸದಸ್ಯ ಹೆಚ್.ವಿಶ್ವನಾಥ್ ಆತಂಕ ವ್ಯಕ್ತಪಡಿಸಿದ್ದಾರೆ.

ನಗರದ ಜಲದರ್ಶಿನಿ ಅತಿಥಿ ಗೃಹದಲ್ಲಿ ಇಂದು ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 16 ಬಾರಿ ಬಜೆಟ್ ಮಂಡಿಸಿ ಇತಿಹಾಸ ನಿರ್ಮಿಸಿರುವುದಾಗಿ ಸಿದ್ದರಾಮಯ್ಯ ಹೇಳುತ್ತಾರೆ. ಆದರೆ ಇವರ ಅವೈಜ್ಞಾನಿಕ ಯೋಜನೆಗಳು ರಾಜ್ಯವನ್ನು ಸಾಲದ ಕೂಪಕ್ಕೆ ದೂಡಿದೆ ಎಂದು ಆರೋಪಿಸಿದರು.

ಕರ್ನಾಟಕ ಇಡೀ ದೇಶದಲ್ಲೇ ಹೆಚ್ಚು ಸಾಲ ಮಾಡಿರುವ ಎರಡನೇ ರಾಜ್ಯವಾಗಿದೆ. ಇಲ್ಲಿವರೆಗೆ 7.60 ಲಕ್ಷ ಕೋಟಿ ಸಾಲ ಮಾಡಿದ್ದಾರೆ. ಈಗ ಮತ್ತೆ 2 ಲಕ್ಷಕ್ಕೂ ಮೀರಿ ಸಾಲ ಮಾಡುತ್ತಿದ್ದಾರೆ. ಹೊಸದಾಗಿ ಮಾಡುತ್ತಿರುವ ಸಾಲ ಹಿಂದಿನ ಸಾಲದ ಮರು ಪಾವತಿಗೆ ಸರಿಹೊಂದಲಿದೆ. ಈಗ ತರುವ ಸಾಲದಿಂದ ಯಾವುದೇ ಅಭಿವೃದ್ಧಿ ಮಾಡಲು ಸಾಧ್ಯವಿಲ್ಲ. ಇದು ಕರ್ನಾಟಕದ ಆರ್ಥಿಕ ಪರಿಸ್ಥಿತಿಯ ವಾಸ್ತವ ಚಿತ್ರಣ ಎಂದರು.

ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ದಿನದಿಂದ ಇಲ್ಲಿವರೆಗೆ ಯಾವುದೇ ಅಭಿವೃದ್ಧಿ ಕಾರ್ಯಗಳು ಆಗಿಲ್ಲ. ಗ್ಯಾರಂಟಿ ಯೋಜನೆ ಬಿಟ್ಟರೆ ಈ ಸರ್ಕಾರದ ಸಾಧನೆ ಶೂನ್ಯ. ಗ್ಯಾರಂಟಿ ಯೋಜನೆಗೆ 70 ಸಾವಿರ ಕೋಟಿ ರೂಪಾಯಿ ವೆಚ್ಚ ಮಾಡಲಾಗಿದೆ ಎಂದು ಹೇಳಿದ್ದಾರೆ. ಆದರೆ ಇದರಿಂದ ರಾಜ್ಯದ ಆರ್ಥಿಕ ಪರಿಸ್ಥಿತಿ ಮೇಲ್ಮುಖವಾಗಿ ಸಾಗದೆ ಪಾತಾಳ ಸೇರುತ್ತಿದೆ ಎಂದು ವಿಶ್ವನಾಥ್ ಆಪಾದಿಸಿದರು. ರಾಜಕೀಯ ಸಲಹೆಗಾರ, ಆರ್ಥಿಕ ಸಲಹೆಗಾರ, ಕಾನೂನು ಸಲಹೆಗಾರ ಸೇರಿದಂತೆ 260 ಕ್ಯಾಬಿನೆಟ್ ಹುದ್ದೆಗಳನ್ನು ಸೃಷ್ಟಿಸಿದ್ದಾರೆ. ಇವರಿಗೆಲ್ಲಾ ಸರ್ಕಾರದ ಕಾರು ಸೇರಿದಂತೆ ಇತರೆ ಖರ್ಚು–ವೆಚ್ಚ ನೀಡಲಾಗುತ್ತಿದೆ. ಅನವಶ್ಯಕವಾಗಿ ಇಂತಹ ವೆಚ್ಚದಿಂದ ಕರ್ನಾಟಕ ಉದ್ಧಾರ ಆಗುವ ಬದಲು ಲೂಟಿಯಾಗುತ್ತಿದೆ. ಇದರಿಂದ ಕರ್ನಾಟಕದ ಆರ್ಥಿಕ ಶಿಸ್ತು ಹಳ್ಳ ಹಿಡಿದಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಸಂಸಾರಸ್ಥ ಹೆಣ್ಣು ಮಗಳಿಂದ ಪಾಠ: ತಿಂಗಳಿಗೆ ಬರುವ ಸಂಪಾದನೆಯಲ್ಲಿ ಸಂಸಾರಸ್ಥ ಹೆಣ್ಣು ಮಗಳು ಖರ್ಚು–ವೆಚ್ಚ ಸರಿದೂಗಿಸಿಕೊಂಡು ಉಳಿತಾಯ ಮಾಡುತ್ತಾಳೆ. ಇದೇ ಮಾದರಿ ಉಳಿತಾಯದ ಮೂಲಕ ಯಾವ ರೀತಿ ಸರ್ಕಾರ ನಡೆಸಬೇಕು ಎಂಬ ಬಗ್ಗೆ ಹಣಕಾಸು ಖಾತೆ ಹೊಂದಿರುವ ಸಿದ್ದರಾಮಯ್ಯ ಅವರಿಗೆ ಸಂಸಾರಸ್ಥ ಹೆಣ್ಣು ಮಗಳಿಂದ ಪಾಠ ಮಾಡಿಸಬೇಕು ಎಂದು ಅಭಿಪ್ರಾಯಪಟ್ಟರು.

ಅಧಿಕಾರ ಹಿಡಿಯಬೇಕು ಎಂಬ ಒಂದೇ ಕಾರಣಕ್ಕೆ ಅವೈಜ್ಞಾನಿಕವಾದ ಗ್ಯಾರಂಟಿ ಯೋಜನೆ ಜಾರಿ ಮಾಡಿದರು. ಆದರೆ, ಈ ಯೋಜನೆಯಿಂದ ಅನುಕೂಲಕ್ಕಿಂತ ಅನಾನುಕೂಲವೇ ಹೆಚ್ಚಾಗಿದೆ. ಗ್ಯಾರಂಟಿ ಯೋಜನೆಗೆ ಹಣ ಹೊಂದಿಸಲು ನಿತ್ಯ ಬಳಕೆ ವಸ್ತುಗಳ ಬೆಲೆ ಗಗನಕ್ಕೆ ಮುಟ್ಟಿಸಿದ್ದಾರೆ. ಅಲ್ಲದೆ ಈ ಯೋಜನೆಯ ಫಲಾನುಭವಿಗಳ ಸಂಸಾರಗಳಲ್ಲಿ ಒಡಕು ಮೂಡಿದೆ. ಆದ ಕಾರಣ ಈಗಲಾದರೂ ಗ್ಯಾರಂಟಿ ಯೋಜನೆಗಳ ಬಗ್ಗೆ ಸರ್ವೆ ಮಾಡಿಸಿ ಯಾವ ಮಾನದಂಡದ ಮೇಲೆ ■6ನೇ ಪುಟಕ್ಕೆ

ನಾನು ಕಾಂಗ್ರೆಸ್‌ನ ಹಿರಿಯ ನಾಯಕ! ಬಿಜೆಪಿಯ ಕಿರಿಯ ಮುಖಂಡ!!

ನಾನು ಕಾಂಗ್ರೆಸ್ ಪಕ್ಷದ ಹಿರಿಯ ನಾಯಕ, ಹಾಗೆಯೇ ಬಿಜೆಪಿಯ ಕಿರಿಯ ಮುಖಂಡ ಎಂದು ವಿಶ್ವನಾಥ್ ತಮ್ಮ ಈಗಿನ ರಾಜಕೀಯ ಪರಿಸ್ಥಿತಿಯನ್ನು ವ್ಯಾಖ್ಯಾನಿಸಿದರು. ಕಾಂಗ್ರೆಸ್ ಸರಿಯಾಗಿ ಆಡಳಿತ ನಡೆಸುತ್ತಿಲ್ಲ ಎಂದು ಆಡಳಿತ ಪಕ್ಷದ ವಿರುದ್ಧ ವಾಗ್ದಾಳಿ ನಡೆಸಿದ ವಿಶ್ವನಾಥ್, ವಿರೋಧ ಪಕ್ಷವಾಗಿ ಬಿಜೆಪಿ ಕೂಡ ಪರಿಣಾಮಕಾರಿಯಾಗಿ ಹೋರಾಟ ಮಾಡುತ್ತಿಲ್ಲ ಎಂದು ದೂರಿದರು. ಎರಡೂ ಪಕ್ಷವನ್ನು ಟೀಕೆ ಮಾಡುವ ನೀವು ಈಗ ಯಾವ ಪಕ್ಷದಲ್ಲಿದ್ದೀರಾ ಎಂಬ ಪತ್ರಕರ್ತರ ಪ್ರಶ್ನೆಗೆ, ನಾನು ಕಾಂಗ್ರೆಸ್ ಪಕ್ಷದ ಹಿರಿಯ ನಾಯಕ, ಹಾಗೆಯೇ ಬಿಜೆಪಿಯ ಕಿರಿಯ ಮುಖಂಡ ಎಂದರು. ನನಗಿಂತ ಹಿರಿಯರಾದ ವಿಶ್ವನಾಥ್ ಮುಖ್ಯಮಂತ್ರಿ ಆಗಲಿಲ್ಲ, ನಾನು ಸಿಎಂ ಸ್ಥಾನ ಅಲಂಕರಿಸಿದೆ ಎಂದು ವಿಧಾನಸಭೆಯ ಅಧಿವೇಶನದಲ್ಲಿ ಸಿದ್ದರಾಮಯ್ಯ ನೀಡಿದ ಹೇಳಿಕೆಗೆ ತೀಕ್ಷ್ಣ ಪ್ರತಿಕ್ರಿಯೆ ನೀಡಿದ ವಿಶ್ವನಾಥ್, ■6ನೇ ಪುಟಕ್ಕೆ

ಚಾಲಕ ಹೃದಯಾಘಾತದಿಂದ ಸಾವು; ನಿಯಂತ್ರಣ ಕಳೆದುಕೊಂಡ ಬಸ್ ಡಿಕ್ಕಿ ಹೊಡೆದು ಪಾದಚಾರಿ ಮಹಿಳೆ ಸಾವು

ಹೆಚ್.ಡಿ.ಕೋಟೆ, ಏ.2–ಚಲಿಸುತ್ತಿದ್ದ ಕೆಎಸ್‌ಆರ್‌ಟಿಸಿ ಬಸ್ ಚಾಲಕನಿಗೆ ಹೃದಯಾಘಾತ! ಪರಿಣಾಮ, ನಿಯಂತ್ರಣ ಕಳೆದುಕೊಂಡ ಬಸ್ ಪಾದಚಾರಿ ಮಹಿಳೆಗೆ ಡಿಕ್ಕಿ ಹೊಡೆದಿದೆ. ಕೊನೆಗೆ ಬಸ್ ಚಾಲಕ ಹಾಗೂ ಪಾದಚಾರಿ ಮಹಿಳೆ ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ. ಈ ದುರಂತ ಮೈಸೂರು–ಮಾನಂದವಾಡಿ ಮುಖ್ಯ ರಸ್ತೆಯ ತಾಲೂಕಿನ ದಮ್ಮನಕಟ್ಟೆ ಸಫಾರಿ ಕೇಂದ್ರದ ಬಳಿ ಬುಧವಾರ ನಡೆದಿದೆ. ಕೆ.ಆರ್.ನಗರ ತಾಲೂಕಿನ ಗನ್ನಹಳ್ಳಿ ಗ್ರಾಮದ ನಿವಾಸಿ ಮುಕುಂದರಾವ್ ಪುತ್ರ, ಬಸ್ ಚಾಲಕ ಸುನೀಲ್‌ಕುಮಾರ್(29) ಹಾಗೂ ದಮ್ಮನಕಟ್ಟೆ ಗ್ರಾಮದ ನಿವಾಸಿ ಲಕ್ಷ್ಮಮ್ಮ ಸಾವನ್ನಪ್ಪಿದವರು.

ವಿವರ: ಮೈಸೂರು ಡಿಪೋಗೆ ಸೇರಿದ ಸಾರಿಗೆ ಬಸ್ ಕೇರಳದ ಮಾನಂದವಾಡಿಯಿಂದ ಮೈಸೂರು ಕಡೆಗೆ ಬರುತ್ತಿತ್ತು. ತಾಲೂಕಿನ ದಮ್ಮನಕಟ್ಟೆ ಬಳಿ ಬಸ್ ಚಾಲಕ ಸುನೀಲ್ ಕುಮಾರ್‌ಗೆ ಎದೆನೋವು ಕಾಣಿಸಿಕೊಂಡಿದೆ. ಈ ವೇಳೆ ನಿಯಂತ್ರಣ ಕಳೆದುಕೊಂಡ ಬಸ್, ರಸ್ತೆ ಬದಿ ನಡೆದುಕೊಂಡು ಹೋಗುತ್ತಿದ್ದ ಲಕ್ಷ್ಮಮ್ಮ ಅವರಿಗೆ ಡಿಕ್ಕಿ ಹೊಡೆದಿದೆ. ಬಳಿಕ ಜಮೀನಿಗೆ ನುಗ್ಗಿ ವಿದ್ಯುತ್ ಕಂಬಕ್ಕೆ ಡಿಕ್ಕಿ ಹೊಡೆದು ನಿಂತಿದೆ. ತೀವ್ರವಾಗಿ ಗಾಯಗೊಂಡ ಲಕ್ಷ್ಮಮ್ಮ ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ. ಅತ್ತ ಸುನೀಲ್‌ಕುಮಾರ್ ಬಸ್‌ನ ಸ್ಟೇರಿಂಗ್ ಮೇಲೆ ತಲೆ ಇಟ್ಟು ಮಲಗಿರುವುದನ್ನು ■6ನೇ ಪುಟಕ್ಕೆ

ಮೈಸೂರಲ್ಲಿ ಅರ್ಥಪೂರ್ಣ ಪೊಲೀಸ್ ಧ್ವಜ ದಿನ ಆಚರಣೆ

ಮೈಸೂರು, ಏ. 2(ಆರ್‌ಕೆ)– ಮೈಸೂರಿನ ಸಿಎಆರ್ ಮೈದಾನದಲ್ಲಿ ಇಂದು ಪೊಲೀಸ್ ಧ್ವಜ ದಿನವನ್ನು ಅರ್ಥಪೂರ್ಣವಾಗಿ ಆಚರಿಸಲಾಯಿತು.

ಮೈಸೂರು ನಗರ, ಜಿಲ್ಲಾ ಪೊಲೀಸ್ ಘಟಕ, ಕರ್ನಾಟಕ ಪೊಲೀಸ್ ಅಕಾಡೆಮಿ (ಕೆಪಿಎ), ಕೆಎಸ್‌ಆರ್‌ಪಿ, ಸಿಎಆರ್ ಹಾಗೂ ಮೌಂಟೆಡ್ ಪೊಲೀಸ್ ಘಟಕಗಳ ವತಿಯಿಂದ ಆಯೋಜಿಸಿದ್ದ ಧ್ವಜ ದಿನಾಚರಣೆ ಕಾರ್ಯಕ್ರಮದಲ್ಲಿ ನಿವೃತ್ತ ಎಸ್ಪಿ ಪುಟ್ಟಮಾದಯ್ಯ ಅವರು ಮುಖ್ಯ ಅತಿಥಿಗಳಾಗಿ ಪಾಲ್ಗೊಂಡು ಪಥಸಂಚಲನ ವೀಕ್ಷಿಸಿದರು.

ಈ ಸಂದರ್ಭ ಮಾತನಾಡಿದ ಅವರು, ಕರ್ನಾಟಕ ಏಕೀಕರಣದ ನಂತರ ಮೈಸೂರು ರಾಜ್ಯದಲ್ಲಿ ಪೊಲೀಸ್ ಧ್ವಜಗಳು ವಿಭಿನ್ನವಾಗಿದ್ದವು. 1960ರಲ್ಲಿ ಅದನ್ನು ಮಾರ್ಪಡಿಸಿ ರಾಜ್ಯ ಪೊಲೀಸ್ ಕಾಯ್ದೆ ಜಾರಿಗೊಳಿಸಿದ ಬಳಿಕ ಪೊಲೀಸರ ಕಲ್ಯಾಣ ನಿಧಿ ಆರಂಭಿಸಲಾಯಿತು ಎಂದರು.

ಬೇರೆ ಇಲಾಖೆಗಳಿಗಿಂತ ವಿಭಿನ್ನವಾಗಿರುವ ಪೊಲೀಸ್ ಇಲಾಖೆಯಲ್ಲಿ ಕರ್ತವ್ಯಕ್ಕೆ ನಿರ್ದಿಷ್ಟ ಸಮಯವಿಲ್ಲ. ದಿನದ 24 ಗಂಟೆಯೂ ಸಿದ್ಧರಿರಬೇಕಾದ್ದರಿಂದ ಸಹಜವಾಗಿ ಒತ್ತಡವಿರುತ್ತದೆ. ಅದೇ ರೀತಿ ಬೇಗ ಆರೋಗ್ಯದ ಸಮಸ್ಯೆಗಳೂ ಬರುತ್ತವೆ ಎಂದ ಅವರು, ಕಾಲ ಕಾಲಕ್ಕೆ ಆರೋಗ್ಯ ತಪಾಸಣೆ ಮಾಡಿಸಿಕೊಂಡು ಸದೃಢವಾಗಿರುವಂತೆಯೂ ಸಲಹೆ ನೀಡಿದರು.

ನಿವೃತ್ತಿ ಎಂಬುದು ಕರ್ತವ್ಯಕ್ಕೇ ಹೊರತು ಜೀವನಕ್ಕಲ್ಲ. ಇತ್ತೀಚೆಗೆ ವಿಜ್ಞಾನ–ತಂತ್ರಜ್ಞಾನ ಮುಂದುವರೆದಂತೆಲ್ಲಾ ಸೈಬರ್ ಮಾದರಿಯ ಅಪರಾಧಗಳು ಹೆಚ್ಚುತ್ತಿದ್ದು, ಅವುಗಳನ್ನು ಭೇದಿಸುವ ಸಾಮರ್ಥ್ಯ ಬೆಳೆಸಿಕೊಳ್ಳಬೇಕು ಹಾಗೂ ನಿವೃತ್ತ ಪೊಲೀಸ್ ಅಧಿಕಾರಿಗಳು ಮತ್ತು ಸಿಬ್ಬಂದಿಗಳನ್ನು ಗೌರವದಿಂದ ಕಾಣಬೇಕು ಎಂದು ಪುಟ್ಟಮಾದಯ್ಯ ಇದೇ ವೇಳೆ ಕಿವಿಮಾತು ಹೇಳಿದರು.

ಇದೇ ವೇಳೆ 15 ಮಂದಿ ನಿವೃತ್ತ ಪೊಲೀಸ್ ಅಧಿಕಾರಿಗಳು ಹಾಗೂ ಸಿಬ್ಬಂದಿಯನ್ನು ಸನ್ಮಾನಿಸಿ ಪೊಲೀಸ್ ಧ್ವಜ ದಿನಾಚರಣೆ ಪ್ರಯುಕ್ತ ಗೌರವಿಸಲಾಯಿತು.

ನಿವೃತ್ತ ಪೊಲೀಸ್ ಅಧಿಕಾರಿಗಳು, ಸಿಬ್ಬಂದಿಗೆ ಅಭಿನಂದನೆ

ದಕ್ಷಿಣ ವಲಯ ಡಿಐಜಿ ಡಾ.ಎಂ.ಬಿ. ಬೋರಲಿಂಗಯ್ಯ, ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್, ಎಸ್ಪಿ ಎನ್. ವಿಷ್ಣುವರ್ಧನ, ಕೆಪಿಎ ನಿರ್ದೇಶಕ ಎಸ್.ಎಲ್.ಚನ್ನಬಸವಣ್ಣ, ಡಿಸಿಪಿ ಎಂ.ಮುತ್ತುರಾಜ್, ಎಸ್.ಜಾಹ್ನವಿ, ಶೈಲೇಂದ್ರ ಸೆಸ್ಕಾಂ ಎಸ್ಪಿ ಸವಿತಾ ಹೂಗಾರ, ಅಡಿಷನಲ್ ಎಸ್ಪಿಗಳಾದ ನಾಗೇಶ, ಸಿ.ಮಲ್ಲಿಕ ಸೇರಿದಂತೆ ಹಲವು ಪೊಲೀಸ್ ಅಧಿಕಾರಿಗಳು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು. ಪ್ರಧಾನ ದಳಪತಿಯಾದ ಸಹಾಯಕ ಕಮಾಂಡೆಂಟ್ ಎಂ.ರಾಜು ನೇತೃತ್ವದಲ್ಲಿ ನಡೆದ ಪಥಸಂಚಲನದಲ್ಲಿ ಸಿವಿಲ್, ಸಿಎಆರ್, ಡಿಎಆರ್, ಸಂಚಾರ ವಿಭಾಗ, ಅಶ್ವಾರೋಹಿದಳ, ಕೆಎಸ್‌ಆರ್‌ಪಿ ತುಕಡಿಗಳು ಪಾಲ್ಗೊಂಡಿದ್ದವು.




ಮೈಸೂರಿನ ಸಿಎಆರ್ ಮೈದಾನದಲ್ಲಿ ಬುಧವಾರ ನಡೆದ ಪೊಲೀಸ್ ಧ್ವಜ ದಿನಾಚರಣೆ ಕಾರ್ಯಕ್ರಮದಲ್ಲಿ ಡಿಐಜಿಪಿ ಡಾ. ಎಂ.ಬಿ. ಬೋರಲಿಂಗಯ್ಯ ಅವರು ಮುಖ್ಯ ಅತಿಥಿ ನಿವೃತ್ತ ಪೊಲೀಸ್ ಅಧಿಕಾರಿ ಪುಟ್ಟಮಾದಯ್ಯ ಅವರಿಗೆ ಪೊಲೀಸ್ ಧ್ವಜಧಾರಣೆ ಮಾಡಿದರು. ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್, ಎಸ್ಪಿ ಎನ್. ವಿಷ್ಣುವರ್ಧನ, ಕೆಪಿಎ ನಿರ್ದೇಶಕ ಎಸ್.ಎಲ್.ಚನ್ನಬಸವಣ್ಣ ಮತ್ತಿತರನ್ನು ಚಿತ್ರದಲ್ಲಿ ಕಾಣಬಹುದು. ಮತ್ತೊಂದು ಚಿತ್ರದಲ್ಲಿ ನಿವೃತ್ತ ಪೊಲೀಸ್ ಅಧಿಕಾರಿಗಳು ಹಾಗೂ ಸಿಬ್ಬಂದಿಯನ್ನು ಸನ್ಮಾನಿಸಿರುವುದನ್ನು ಕಾಣಬಹುದು.

ಬೇಸಿಗೆ ಕ್ರಿಕೆಟ್ ಶಿಬಿರ

ಮೈಸೂರು,ಏ.2–ಮೈಸೂರು ಜಿಮ್‌ಖಾನ ವತಿಯಿಂದ 16 ವರ್ಷದ ಕೆಳಗಿನ ಬಾಲಕರಿಗೆ 42ನೇ ಬೇಸಿಗೆ ಕ್ರಿಕೆಟ್ ಶಿಬಿರವನ್ನು ರೈಲ್ವೆ ಮೈದಾನ (ರೈಲ್ವೆ ಮ್ಯೂಸಿಯಂ ಹತ್ತಿರ, ಕೆ.ಆರ್.ಎಸ್. ರಸ್ತೆ); ಮಹಾರಾಜ ಕಾಲೇಜು ಮೈದಾನ (ಸ್ಪೋರ್ಟ್ಸ್ ಪೆವಿಲಿಯನ್ ಪಕ್ಕ) ಹಾಗೂ ಮಾನಸ ಗಂಗೋತ್ರಿ ಮೈದಾನ (ಮೌಲ್ಯ ಮಾಪನ ಭವನ ಹಿಂಭಾಗ) ಹಮ್ಮಿಕೊಳ್ಳಲಾಗಿದೆ. ಶಿಬಿರವು ಏ.6ರಂದು ಬೆಳಗ್ಗೆ 8.30ಕ್ಕೆ ರೈಲ್ವೆ ಮೈದಾನದಲ್ಲಿ ಉದ್ಘಾಟನೆಗೊಳ್ಳಲಿದೆ. ಶಿಬಿರದ ಅರ್ಜಿಗಳು ಕೋಚಿಂಗ್ ಮೈದಾನದಲ್ಲಿ ಬೆಳಗ್ಗೆ 6.30 ರಿಂದ 8.30 ರವರೆಗೆ ಹಾಗೂ ಸಂಜೆ 4 ರಿಂದ 6 ರವರೆಗೆ ದೊರೆಯಲಿದೆ. ಹೆಚ್ಚಿನ ಮಾಹಿತಿಗೆ ಮೊ. 9380172355, 7019475181 ಸಂಪರ್ಕಿಸಬಹುದು.

ವಾಲಿಬಾಲ್ ತರಬೇತಿ ಶಿಬಿರ

ಮೈಸೂರು,ಏ.2–ಮೈಸೂರಿನ ವಿವೇಕಾನಂದ ವಾಲಿಬಾಲ್ ಕ್ಲಬ್‌ನ ತರಬೇತುದಾರ ಡಾ.ಎಂ.ಪಿ.ಧರ್ಮೇಶ್ ಅವರು ವಿವೇಕಾನಂದ ಕ್ರೀಡಾಂಗಣದಲ್ಲಿ ಮೇ 1 ರವರೆಗೆ 8 ವರ್ಷದಿಂದ 25 ವರ್ಷದವರಿಗೆ ವಾಲಿಬಾಲ್ ತರಬೇತಿ ಹಮ್ಮಿಕೊಳ್ಳಲಾಗಿದೆ. ಹೆಚ್ಚಿನ ಮಾಹಿತಿಗೆ ಮೊ. 9900628268, 9343202414.

ರಂಗೋಲಿ ನಮ್ಮ ದೇಶದ ಸಂಸ್ಕೃತಿ ಪ್ರತೀಕ



ಮೈಸೂರು, ಏ.2(ಬಿಎಲ್‌ಯು)– ರಂಗೋಲಿ ನಮ್ಮ ದೇಶದ ಸಂಸ್ಕೃತಿಯ ಪ್ರತೀಕವಾಗಿದ್ದು, ಮಹಿಳೆಯರಿಗೆ ದಿನದ ಆರಂಭ ರಂಗೋಲಿ ಇಡುವುದರಿಂದ ಚಾಲನೆಗೊಳ್ಳುತ್ತದೆ. ಇಂತಹ ಅಪರೂಪದ ಸಂಪ್ರದಾಯ ಉಳಿಸಿ ಬೆಳೆಸುವುದು ಎಲ್ಲರ ಹೊಣೆ ಎಂದು ಸಮಾಜ ಸೇವಕಿ ಕಾವ್ಯ ಸಲಹೆ ನೀಡಿದರು.

ಯುಗಾದಿ ಹಬ್ಬದ ಅಂಗವಾಗಿ ನಗರದ ತ್ಯಾಗರಾಜ ರಸ್ತೆಯ ಅಕ್ಕನ ಬಳಗ ಶಾಲೆಯಲ್ಲಿ ಶ್ರೀ ದುರ್ಗಾ ಫೌಂಡೇಶನ್ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ರಂಗೋಲಿ ಸ್ಪರ್ಧೆಯಲ್ಲಿ ವಿಜೇತರಾದವರಿಗೆ ಬಹುಮಾನ ವಿತರಿಸಿ ಈ ಅಭಿಪ್ರಾಯ ವ್ಯಕ್ತಪಡಿಸಿದರು.

ನಂತರ ಮಾತನಾಡಿದ ವಕೀಲೆ ಬಿ.ಡಿ.ಜ್ಯೋತಿ, ಮನೆ ಮುಂದೆ ಬಿಡಿಸುವ ರಂಗೋಲಿ ಶುಭ ಸೂಚನೆಯ ಸಂಕೇತ, ರಂಗೋಲಿ ದಾಟಿ ಹೊರಗೆ ಹೋದರೆ ಶುಭವಾಗುತ್ತದೆ ಎಂಬ ಮಾತಿದೆ ಎಂದರು.

ತಮ್ಮ ಮನೆ ಮುಂದೆ ಬಿಡಿಸಿದ್ದ ರಂಗೋಲಿ ಭಾವಚಿತ್ರವನ್ನು ಆನ್‌ಲೈನ್ ಮೂಲಕ ಸ್ಪರ್ಧಿಗಳು ರವಾನೆ ಮಾಡಿದ್ದರು. ಇದರಲ್ಲಿ ವಿಜೇತರಾದ ಜೆ.ಪಿ. ನಗರದ ವಾಸಿ ಉಷಾ, ಉದಯಗಿರಿಯ ಕೋಮಲ, ಶ್ರೀರಾಂಪುರದ ಅಶ್ವಿನಿ, ಕುಂಬಾರಕೊಪ್ಪಲ್‌ನ ವಿಜಯಲಕ್ಷ್ಮಿ, ಇಟ್ಟಿಗೆಗೂಡಿನ ಗೀತಾ, ಶ್ರೀನಗರದ ಅನನ್ಯ, ಬೋಗಾದಿಯ ರೂಪ, ಅಗ್ರಹಾರದ ಸೌಮ್ಯ ಜೈನ್ ಮತ್ತು ಸುಜಾತ, ವಿದ್ಯಾರಣ್ಯಪುರಂನ ಸುಶೀಲಾ ಬಹುಮಾನ ಪಡೆದರು.

ಜೀವದಾರ ರಕ್ತನಿಧಿ ಕೇಂದ್ರದ ನಿರ್ದೇಶಕ ಗಿರೀಶ್, ಜೆಡಿಎಸ್ ಕಾರ್ಯಾಧ್ಯಕ್ಷ ಎಸ್.ಪ್ರಕಾಶ್, ಶ್ರೀ ದುರ್ಗಾ ಫೌಂಡೇಶನ್ ಅಧ್ಯಕ್ಷೆ ರೇಖಾ ಶ್ರೀನಿವಾಸ್ ಹಾಗೂ ಇತರರು ಈ ವೇಳೆ ಹಾಜರಿದ್ದರು.

ಡಾ.ಶಿವಕುಮಾರ ಸ್ವಾಮಿಗಳ ಜಯಂತಿ



ಶ್ರೀ ಸಿದ್ಧಗಂಗಾ ಸೇವಾ ಸಂಘದ ವತಿಯಿಂದ ನಡೆದಾಡುವ ದೇವರು, ಕರ್ನಾಟಕ ರತ್ನ, ತ್ರಿವಿಧ ದಾಸೋಹಿ, ಡಾ.ಶ್ರೀ ಶಿವಕುಮಾರ ಮಹಾಸ್ವಾಮಿಗಳವರ 118ನೇ ವರ್ಷದ ಜಯಂತಿಯನ್ನು ಅಗ್ರಹಾರದ 101 ಗಣಪತಿ ದೇವಸ್ಥಾನದ ಸಮೀಪ ಆಚರಿಸಲಾಯಿತು. ಸೇವಾ ಸಂಘದ ಅಧ್ಯಕ್ಷ ಚಿಕ್ಕಳ್ಳಿ ಸ್ವಾಮಿ, ನಿಕಟಪೂರ್ವ ವೀರಶೈವ ಮಹಾಸಭಾ ರಾಜ್ಯ ಕೋಶಾಧ್ಯಕ್ಷ ವರುಣ ಮಹೇಶ್, ಬಸವ ಜಯಂತಿ 2025 ಅಧ್ಯಕ್ಷ ಬಿ.ಕೆ.ನಾಗರಾಜು, ಸದಸ್ಯರಾದ ಯಡಹಳ್ಳಿ ಶಿವಪಾದು, ಬೀರಿಹುಂಡಿ ಮಲ್ಲೇಶ್, ದಾರಿಪುರ ಡಿ.ಚಂದ್ರಶೇಖರ್, ಮನುಗನಹಳ್ಳಿ ಮಂಜುನಾಥ್, ಅಗ್ರಹಾರ ಅಶೋಕ, ಚೌಕಿ ಮಠದ ಮಂಜುನಾಥ್, ಬಸಹಳ್ಳಿಹುಂಡಿ ಮೂರ್ತಿ ಇನ್ನಿತರರು ಉಪಸ್ಥಿತರಿದ್ದರು.

ಶಿಷ್ಯ ವೇತನಕ್ಕಾಗಿ ಅರ್ಜಿ ಆಹ್ವಾನ

ಮೈಸೂರು,ಏ.2– IISC, IIT, & NIT ಸಂಸ್ಥೆಗಳ ಮೂಲಕ Artifical Inteligence and Machine Learning ವೃತ್ತಿಪರ ತರಬೇತಿ ಶಿಷ್ಯ ವೇತನಕ್ಕಾಗಿ ಅರ್ಜಿಯನ್ನು ಆಹ್ವಾನಿಸಲಾಗಿದೆ. IISC, IIT, & NIT ಸಂಸ್ಥೆಗಳ ಮೂಲಕ Artifical Inteligence and Machine Learning ವೃತ್ತಿಪರ ತರಬೇತಿ ಕೋರ್ಸ್‌ಗಳಲ್ಲಿ ಭಾಗವಹಿಸುವ ಪರಿಶಿಷ್ಟ ಪಂಗಡದ 200 ಇಂಜಿನಿಯರಿಂಗ್ ಪದವೀಧರರಿಗೆ ಶಿಷ್ಯ ವೇತನ, ತರಬೇತಿ ನೀಡುವ ಸಂಬಂಧ ಮಾಸಿಕ ರೂ.15.000 ಗಳಂತೆ ಶಿಷ್ಯ ವೇತನವನ್ನು ನೀಡಲು ಅರ್ಜಿ ಅಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸಲು ಇಚ್ಛಿಸುವ ಅರ್ಹ ಪರಿಶಿಷ್ಟ ಪಂಗಡದ ಅಭ್ಯರ್ಥಿಗಳು ಅರ್ಜಿ ನಮೂನೆಯನ್ನು ಒದಗಿಸಿ ಹಾಗೂ ಸ್ವೀಕೃತವಾದ ಅರ್ಜಿಗಳನ್ನು ಕ್ರೋಢೀಕರಿಸಿ ಅಗತ್ಯ ದಾಖಲೆಗಳೊಂದಿಗೆ ಯೋಜನಾ ಸಮನ್ವಯಾಧಿಕಾರಿಗಳ ಕಚೇರಿಗೆ ಏ.8ರೊಳಗೆ ಅರ್ಜಿ ಸಲ್ಲಿಸಬೇಕು ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಕಣ್ಣಿನ ಉಚಿತ ತಪಾಸಣೆ, ಶಸ್ತ್ರಚಿಕಿತ್ಸಾ ಶಿಬಿರ

ಮೈಸೂರು,ಏ.2–ಅಮೃತಾಂಶು ಟ್ರಸ್ಟ್, ಮೈಸೂರು ಮತ್ತು ನಾರಾಯಣ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆ, ಜಿಲ್ಲಾ ಅಂಧತ್ವ ನಿಯಂತ್ರಣ ಸಂಸ್ಥೆ, ಮೈಸೂರು ಜಿಲ್ಲಾ ಸಂಚಾರಿ ನೇತ್ರ ಚಿಕಿತ್ಸಾ ಘಟಕ ಮತ್ತು ಕೆ.ಆರ್.ಆಸ್ಪತ್ರೆ ಸಂಯುಕ್ತಾಶ್ರಯದಲ್ಲಿ ಏ.7ರಂದು ಬೆಳಗ್ಗೆ 10ರಿಂದ ಮಧ್ಯಾಹ್ನ 1ರವರೆಗೆ ನಂ.2767, ಪಾಂಚಜನ್ಯ, 5ನೇ ಮುಖ್ಯ ರಸ್ತೆ, ಮೇದರಕೇರಿ, ಚಾಮುಂಡಿಪುರಂ ಇಲ್ಲಿ ಕಣ್ಣಿನ ಉಚಿತ ತಪಾಸಣೆ, ಶಸ್ತ್ರಚಿಕಿತ್ಸಾ ಶಿಬಿರ ಏರ್ಪಡಿಸಲಾಗಿದೆ. ಶಿಬಿರದಲ್ಲಿ ಕಣ್ಣಿನ ಪೊರೆ, ಹತ್ತಿರ ಮತ್ತು ದೂರದೃಷ್ಟಿ, ಗ್ಲೋಕೋಮಾ, ವಾರೆಕಣ್ಣು, ನೀರು ಸೋರುವಿಕೆ, ಕಣ್ಣಿನಲ್ಲಿ ಬಿರುಕು ಉಂಟಾಗುವುದು, ರಾತ್ರಿ ಕುರುಡುತನ ಸಮಸ್ಯೆಗಳನ್ನು ಪರೀಕ್ಷಿಸಲಾಗುವುದು. ಮಾಹಿತಿಗೆ ಮೊ.9945270646, 9742634110 ಸಂಪರ್ಕಿಸಿ.

ನಿಧನ

ಬೊಕ್ಕಳ್ಳಿ ಶ್ರೀಕಂಠಸ್ವಾಮಿ



ಸುತ್ತೂರು, ಏ.2– ನಂಜನಗೂಡು ತಾಲೂಕು ಬೊಕ್ಕಳ್ಳಿ ಗ್ರಾಮದ ಶ್ರೀಕಂಠಸ್ವಾಮಿ (65) ಬುಧವಾರ ನಿಧನರಾದರು. ಮೃತರು ಅಪಾರ ಬಂಧು ವರ್ಗ ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ನಾಳೆ (ಏ.3) ಮಧ್ಯಾಹ್ನ 12 ಗಂಟೆಗೆ ಸ್ವಗ್ರಾಮದಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ. ಮೃತರ ನಿಧನಕ್ಕೆ ಜಿಲ್ಲಾ ರೈತ ಸಂಘದ ಮುಖಂಡರಾದ ಬೊಕ್ಕಳ್ಳಿ ನಂಜುಂಡ ಸ್ವಾಮಿ ಹಾಗೂ ಗ್ರಾಮದ ರೈತ ಸಂಘದ ಮುಖಂಡರು ಸಂತಾಪ ಸೂಚಿಸಿದ್ದಾರೆ.

ಶ್ರೀಮತಿ ಹಾಜಿಯ ಫಾತಿಮುನ್ನೀಸಾ

ಮೈಸೂರಿನ ಲಷ್ಕರ್ ಮೊಹಲ್ಲಾದ ಸಾಡೇ ರಸ್ತೆ ನಿವಾಸಿ ದಿವಂಗತ ಗುಲಾಂ ಮುಸ್ತಫಾ ಅವರ ಪತ್ನಿ ಶ್ರೀಮತಿ ಹಾಜಿಯ ಫಾತಿಮುನ್ನೀಸಾ (87) ಸೋಮವಾರ ಸಂಜೆ ವಯೋಸಹಜ ಕಾಯಿಲೆಯಿಂದ ನಿಧನರಾದರು. ಮೃತರು ಓರ್ವ ಪುತ್ರಿ, ಏಳು ಮಂದಿ ಪುತ್ರರು ಸೇರಿದಂತೆ ಅಪಾರ ಬಂಧು ವರ್ಗ ಅಗಲಿದ್ದಾರೆ. ಮೈಸೂರಿನ ಟಿಪ್ಪು ಸರ್ಕಲ್‌ನಲ್ಲಿರುವ ಮುಸ್ಲಿಮರ ರುದ್ರಭೂಮಿಯ ಗೇಟ್ ನಂ.8ರಲ್ಲಿ ಮೃತರ ಅಂತ್ಯಸಂಸ್ಕಾರ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಲಾರಿ ಮಾಲೀಕರಿಗೆ ಯುಗಾದಿ, ರಂಜಾನ್ ಕೊಡುಗೆ ಬೆಲೆ ಏರಿಕೆ

ಡೀಸೆಲ್ ದರ, ರಸ್ತೆ ತೆರಿಗೆ, ಟೋಲ್ ದರ, ನವೀಕರಣ, ನೋಂದಣಿ ದರ ಏರಿಕೆ: ಲಾರಿ ಮಾಲೀಕರಿಗೆ ಸಂಕಷ್ಟ



ಮೈಸೂರಿನ ಬನ್ನಿಮಂಟಪದಲ್ಲಿ ಬುಧವಾರ ಲಾರಿ ಮಾಲೀಕರ ಸಂಘದಿಂದ ಬೆಲೆ ಏರಿಕೆ ವಿರುದ್ಧ ಸಭೆ ನಡೆಸಲಾಯಿತು.

ಮೈಸೂರು, ಏ.2(ಜಿಎ)–ಲಾರಿ ಮಾಲೀಕರಿಗೆ ಯುಗಾದಿ ಹಾಗೂ ರಂಜಾನ್‌ಗೆ ಕೊಡುಗೆಯಾಗಿ ಡೀಸೆಲ್ ದರ 2 ರೂ. ಏರಿಕೆ ಸೇರಿದಂತೆ ನಿತ್ಯ ಬಳಕೆ ವಸ್ತುಗಳ ಬೆಲೆ ಏರಿಕೆಗಳನ್ನು ಮಾಡಿರುವುದು ಖಂಡನೀಯ ಎಂದು ಮೈಸೂರು ಜಿಲ್ಲಾ ಮಾಲೀಕರ ಸಂಘದ ಅಧ್ಯಕ್ಷ ಬಿ.ಕೋದಂಡರಾಮ ಆಕ್ರೋಶ ವ್ಯಕ್ತಪಡಿಸಿದರು.

ಮೈಸೂರಿನ ಬನ್ನಿಮಂಟಪದಲ್ಲಿ ಲಾರಿ ಮಾಲೀಕರ ಸಂಘದ ಸಭೆಯಲ್ಲಿ ಮಾತನಾಡಿದ ಅವರು, ಲಾರಿಯ ತ್ರೈಮಾಸಿಕ ರಸ್ತೆ ತೆರಿಗೆ 300 ರೂ.ಹೆಚ್ಚಿಸಲಾಗಿದೆ. ಇದರೊಟ್ಟಿಗೆ ಟೋಲ್ ದರ ಸಹ ಏರಿಕೆ ಮಾಡಿದ್ದಾರೆ. ವಾಹನಗಳ ನವೀಕರಣ, ನೋಂದಣಿ ಐದು ಪಟ್ಟು ಹೆಚ್ಚಳ ಮಾಡಿದ್ದಾರೆ. ಹೀಗೆ ಅನೇಕ ವಿಧವಾದ ಏರಿಕೆಗಳಿಂದ ಲಾರಿ ಮಾಲೀಕರು ಕಂಗಾಲಾಗಿ ಪರದಾಡುವ ಪರಿಸ್ಥಿತಿ ನಿರ್ಮಾಣ ಆಗಿದೆ ಎಂದು ತಿಳಿಸಿದರು.

ಡೀಸೆಲ್‌ಗಿಂತಲೂ ಹೆಚ್ಚು ಟೋಲ್‌ಗೆ ಹಣ ನೀಡಬೇಕಾದ ಸ್ಥಿತಿಯಿದೆ. ಮೈಸೂರಿನಲ್ಲಿ 9 ಸಾವಿರ ಲಾರಿಗಳಿದ್ದು, ಬೆಲೆ ಏರಿಕೆ ವಿರುದ್ಧ ಯಾವ ರೀತಿ ಹೋರಾಟ ಮಾಡಬಹುದು ಎಂಬುದರ ಕುರಿತು ಶನಿವಾರ ಬೆಂಗಳೂರಿನಲ್ಲಿ ರಾಜ್ಯದ ಎಲ್ಲರೂ ಸಭೆ ನಡೆಸಿ ಮುಂದಿನ ಹೋರಾಟದ ರೂಪುರೇಷೆ ಸಿದ್ಧಪಡಿಸಲಾಗುವುದು ಎಂದರು.

ಕೆಎಸ್‌ಆರ್‌ಟಿಸಿ ಬಸ್‌ಗೆ ಇರುವ ನಿಯಮಗಳಂತೆ ನಮಗೂ ನಿಯಮ ರೂಪಿಸಿ, ಸಾಕಷ್ಟು ನ್ಯೂನತೆ ಹಾಗೂ ಅವೈಜ್ಞಾನಿಕ ನಿಯಮಗಳ ಮೂಲಕ ನಮ್ಮನ್ನು ಅತಂತ್ರ ಮಾಡಲು ಹೊರಟಿವೆ. ಹೀಗಾಗಿ ಮುಂದಿನ ಹೋರಾಟದ ಪೂರ್ವಭಾವಿ ಸಭೆ ನಡೆಸಿದ್ದು, ಶೀಘ್ರವೇ ರಾಜ್ಯಾದ್ಯಂತ ದೊಡ್ಡ ಮಟ್ಟದ ಹೋರಾಟ ಮಾಡಲಾಗುತ್ತದೆ ಎಂದರು. ಗೂಡ್ಸ್ ಶೆಡ್ ಲಾರಿ ಸಂಘದ ಕಾರ್ಯದರ್ಶಿ ಹಾಗೂ ಜಿಲ್ಲಾ ಉಪಾಧ್ಯಕ್ಷರಾದ ಅಬ್ದುಲ್ ಖಾದರ್ ಶಾಹೀದ್, ಪ್ರಕಾಶ್ ಪೆರೆರಾ, ಅಕ್ರಮ ಖಾನ್, ಚಾಲಕರ ಸಂಘದ ಅಧ್ಯಕ್ಷ ನಂಜುಂಡಪ್ಪ, ಗೂಡ್ಸ್ ಶೆಡ್ ಮುರುಗೇಶ್ ಮತ್ತಿತರರು ಉಪಸ್ಥಿತರಿದ್ದರು.

ನಾಳೆ ರಾಜ್ಯಾದ್ಯಂತ 'ಬೆಂಕಿಯ ಬಲೆ ಪ್ರೀತಿಯ ಕೊಲೆ' ಚಲನಚಿತ್ರ ಬಿಡುಗಡೆ

ಮೈಸೂರು, ಏ.2(ಜಿಎ)–ಶಿವಾಜಿ ಪಿಕ್ಚರ್ಸ್ ಅಡಿ ನಿರ್ಮಿಸಿರುವ 'ಬೆಂಕಿಯ ಬಲೆ ಪ್ರೀತಿಯ ಕೊಲೆ' ಚಲನಚಿತ್ರವು ಏ.4ರಂದು ರಾಜ್ಯಾದ್ಯಂತ ಬಿಡುಗಡೆಯಾಗಲಿದೆ ಎಂದು ಚಿತ್ರದ ನಟ, ನಿರ್ಮಾಪಕ ಶಿವಾಜಿ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಇದು ಉತ್ತಮ ಸಂದೇಶ ನೀಡುವ ಚಿತ್ರವಾಗಿದೆ. ಈ ಚಲನಚಿತ್ರ ಗ್ರಾಮೀಣ ಸೊಗಡಿನಿಂದ ಕೂಡಿದೆ. ಸ್ತ್ರೀ ಶೋಷಣೆ, ಗ್ರಾಮೀಣ ಪ್ರದೇಶಗಳಲ್ಲಿ ಯುವಜನತೆ ದುಶ್ಚಟಗಳಿಗೆ ದಾಸರಾಗಿ ಕ್ಯಾನ್ಸರ್‌ಗೆ ಬಲಿಯಾಗುವುದೇ ಮೊದಲಾದ ಎಳೆಗಳ ಮೇಲೆ ಕಥೆ ಸಾಗುತ್ತದೆ ಎಂದರು.

ಪ್ರಮುಖ ಪಾತ್ರದಲ್ಲಿ ಮಂಡ್ಯ ರಮೇಶ್, ಜ.ಬಿ.ಎಸ್.ಸಿದ್ದೇಗೌಡ ಮಾತ್ರವಲ್ಲದೆ, ಅನೇಕ ಹೊಸ ಪ್ರತಿಭೆಗಳಿಗೆ ಅವಕಾಶ ನೀಡಲಾಗಿದೆ. ಈ ಚಿತ್ರದ ಪೋಸ್ಟರ್ ಪ್ರಧಾನಿ ನರೇಂದ್ರ ಮೋದಿ ಅವರ ಸಹೋದರ ದಾಮೋದರ್ ಪ್ರಹ್ಲಾದ್ ಮೋದಿ ಬಿಡುಗಡೆಗೊಳಿಸಿ ಶುಭ ಹಾರೈಸಿದ್ದಾರೆ. ಮೈಸೂರಿನ ಲಿಡೋ ಚಿತ್ರಮಂದಿರದಲ್ಲಿ ಸಂಜೆ 4.30 ಮತ್ತು 7.30ಕ್ಕೆ ಹಾಗೂ ಭಾನುವಾರ ಮಧ್ಯಾಹ್ನ 1.30ಕ್ಕೆ ವಿಶೇಷ ಪ್ರದರ್ಶನವಿರಲಿದೆ. ಸಿನಿ ರಸಿಕರು ಚಿತ್ರವನ್ನು ವೀಕ್ಷಿಸುವ ಮೂಲಕ ಪ್ರೋತ್ಸಾಹ ನೀಡಿ ಎಂದು ಮನವಿ ಮಾಡಿದರು. ಸುದ್ದಿಗೋಷ್ಠಿಯಲ್ಲಿ ಕೃಷ್ಣ, ರಾಜು, ರಾಮಚಂದ್ರು, ಮಂಜು ಮತ್ತಿತರರು ಉಪಸ್ಥಿತರಿದ್ದರು.

ಅಹೋರಾತ್ರಿ ಧರಣಿಯಲ್ಲಿ ಭಾಗಿ



ಅಗತ್ಯ ವಸ್ತುಗಳ ದರ ಏರಿಕೆ ಖಂಡಿಸಿ ಕಾಂಗ್ರೆಸ್ ಸರ್ಕಾರದ ವಿರುದ್ಧ ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ನಡೆದ ಬೃಹತ್ ಅಹೋರಾತ್ರಿ ಧರಣಿಯಲ್ಲಿ ಮಾಜಿ ಸಿಎಂ ಬಿ.ಎಸ್.ಯಡಿಯೂರಪ್ಪ, ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಅವರೊಂದಿಗೆ ಮಾಜಿ ಮೇಯರ್ ಸಂದೇಶ್‌ಸ್ವಾಮಿ ಭಾಗವಹಿಸಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

3.04.2025 ಗುರುವಾರ, ಮಳೆ ನಕ್ಷತ್ರ: ರೇವತಿ 31.03.2025 ರಿಂದ 12.04.2025
ವಿಶ್ವವಸು ನಾಮಸಂವತ್ಸರ, ಉತ್ತರಾಯಣ, ವಸಂತ ಋತು, ಚೈತ್ರ ಮಾಸ, ಶುಕ್ಲ ಪಕ್ಷ,
ತಿಥಿ: ಷಷ್ಠಿ, ನಕ್ಷತ್ರ: ರೋಹಿಣಿ, ರಾಹುಕಾಲ: ಮಧ್ಯಾಹ್ನ 1.30 ರಿಂದ 3 ಗಂಟೆಯವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಕುತ್ತಿಗೆ ಹಾಗೂ ಬೆನ್ನು ನೋವಿಗೆ ಆಕ್ಯೂಪಂಕ್ಚರ್ ಮತ್ತು ಯೋಗ ಶಿಬಿರ, ಅಧಿಕ ರಕ್ತದೊತ್ತಡ ಚಿಕಿತ್ಸಾ ಶಿಬಿರ, ಬೊಜ್ಜು ನಿವಾರಣಾ ಚಿಕಿತ್ಸಾ ಶಿಬಿರ,. ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿ ರಸ್ತೆ, ಆಲನಹಳ್ಳಿ, ಬೆಳಗ್ಗೆ 9 ರಿಂದ.

■ **ರಾಮ್‌ಸನ್ಸ್ ಪ್ರತಿಷ್ಠಾನ :** ಬೊಂಬೆ ಮನೆ, ದಸರೆ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, 91, ಆಮ್ರಪಾಲಿ ಸೀರೆ ಮಳಿಗೆ ಮೇಲೆ, ನಜರ್‌ಬಾದ್ ಮುಖ್ಯರಸ್ತೆ, ಬೆಳಗ್ಗೆ 10ಕ್ಕೆ.

■ **ಶಾರದಾ ವಿಲಾಸ ಫಾರ್ಮಸಿ ಕಾಲೇಜು :** ಪದವೀಧರರ ದಿನಾಚರಣೆ, ಉದ್ಘಾಟನೆ : ಕೊಡಗು ವಿವಿ ಕುಲಪತಿ ಡಾ. ಅಶೋಕ್ ಎಸ್.ಆಲೂರು, ಮುಖ್ಯ ಅತಿಥಿಗಳು : ಶಾರದಾ ವಿಲಾಸ ಎಜುಕೇಷನಲ್ ಇನ್‌ಸ್ಟಿಟ್ಯೂಷನ್ಸ್ ಅಧ್ಯಕ್ಷ ಡಾ.ಬಿ.ಎಂ.ಸುಬ್ರಾಯ, ಶ್ರೀ ಜಯದೇವ ಹೃದ್ರೋಗ ಆಸ್ಪತ್ರೆ ವೈದ್ಯಕೀಯ ಅಧೀಕ್ಷಕ ಡಾ.ಕೆ.ಎಸ್.ಸದಾನಂದ, ಶಾರದಾ ವಿಲಾಸ ಶಿಕ್ಷಣ ಸಂಸ್ಥೆ ವಿಶ್ರಾಂತ ಕುಲಪತಿ ಪ್ರೊ. ಟಿ.ಕೆ. ಉಮೇಶ್, ಕಾರ್ಯದರ್ಶಿ ಆರ್.ದಿನೇಶ್, ಅಧ್ಯಕ್ಷತೆ: ಶಾರದಾ ವಿಲಾಸ ಫಾರ್ಮಸಿ ಕಾಲೇಜು ಪ್ರಿನ್ಸಿಪಾಲ್ ಡಾ.ಹನುಮಂತಾಚಾರ್ ಜೋಷಿ, ಸ್ಥಳ: ಶಾರದಾ ವಿಲಾಸ ಶತಮಾನೋತ್ಸವ ಭವನ, ಬೆಳಗ್ಗೆ 10.30ಕ್ಕೆ.

■ **ತ್ರಯೀನ್ಯಾಸ್ ಶ್ರೀವಿದ್ಯಾ ಫೌಂಡೇಷನ್ :** 16ನೇ ವರ್ಷದ ವಸಂತ ನವರಾತ್ರಿ ಮಹೋತ್ಸವ, ಬೆಳಗ್ಗೆ 8.30 ರಿಂದ ಮಹಾಭಿಷೇಕ, ಸಪ್ತಶತಿ ಪಾರಾಯಣ, ಲಲಿತೋಪಾಖ್ಯಾನ ಪಾರಾಯಣ, ಶ್ರೀ ನವಾವರಣ ಪೂಜೆ, ಶ್ರೀಚಕ್ರಾರ್ಚನೆ, ಸಂಜೆ 5.30 ರಿಂದ ಶ್ರೀ ದಶವಾರಾಹಿ ಹೋಮ ಮತ್ತು ಶ್ರೀ ಸುಬ್ರಹ್ಮಣ್ಯ ಆವರಣಾಂಗ ಹೋಮ, ಸ್ಥಳ: ತ್ರಯೀನ್ಯಾಸ್, ಜಯಲಕ್ಷ್ಮಿಪುರಂ.

■ **ಶ್ರೀರಾಮಮಂದಿರ :** ಶ್ರೀ ರಾಮಚಂದ್ರಸ್ವಾಮಿಗಳವರ 50ನೇ ವರ್ಧಂತ್ಯುತ್ಸವ, ಸೀತಾ ಕಲ್ಯಾಣ, ಶ್ರೀರಾಮ ಪಟ್ಟಾಭಿಷೇಕ, ಹನುಮಂತೋತ್ಸವ, ಕುಂಭಾಭಿಷೇಕ ಮಹೋತ್ಸವ, ಬೆಳಗ್ಗೆ 9ಕ್ಕೆ ಶ್ರೀ ಸುಬ್ರಹ್ಮಣ್ಯ ಹೋಮ, ಸಂಜೆ 6.30 ರಿಂದ ಶಿವರಾಂ ಮತ್ತು ಶ್ರೀಮತಿ ಡಾ. ಸುಮನಾ ಶಿವರಾಂ ಅವರಿಂದ ಮ್ಯಾಂಡೋಲಿನ್ ಮತ್ತು ವೇಣು ವಾದನ, ಸ್ಥಳ: ಶ್ರೀರಾಮಮಂದಿರ, ಜಯನಗರ.

■ **ಅಮೃತ ವಿಶ್ವ ವಿದ್ಯಾಪೀಠಂ :** ಬೆಳಗ್ಗೆ 9.30 ರಿಂದ ಸಿನಿರಮಾ–2025, 7ನೇ ರಾಷ್ಟ್ರೀಯ ಕಿರು ಚಲನಚಿತ್ರೋತ್ಸವ, ಉದ್ಘಾಟನೆ : ಖ್ಯಾತ ಚಲನಚಿತ್ರ ನಿರ್ದೇಶಕ ಟಿ.ಎನ್. ಸೀತಾರಾಮ್, ಉಪಸ್ಥಿತರು: ಅಮೃತ ವಿಶ್ವ ವಿದ್ಯಾಪೀಠಂ ಅಸೋಸಿಯೇಟ್ ಡೀನ್ ಪ್ರೊ. ಶೇಖರ್ ಬಾಬು, ಪ್ರಿನ್ಸಿಪಾಲ್ ಪ್ರೊ.ಜಿ. ರವೀಂದ್ರನಾಥ್, ನಿರ್ದೇಶಕ ಅನಂತನಂದ ಚೈತನ್ಯ, ಕರೆಸ್ಪಾಂಡೆಂಟ್ ಮುಕ್ತಿದಾಮೃತಾ ಚೈತನ್ಯ; ಸಂಜೆ 5.30ಕ್ಕೆ ಸಮಾರೋಪ ಮತ್ತು ಪ್ರಶಸ್ತಿ ಪ್ರದಾನ ಸಮಾರಂಭ, ಉಪಸ್ಥಿತರು : ಕನ್ನಡ ಚಲನಚಿತ್ರ ನಟಿ ಮಿಲನ ನಾಗರಾಜ್, ಡಿಆರ್‌ಸಿ ಮಲ್ಟಿಪ್ಲೆಕ್ಸ್ ಸಿನಿಮಾಸ್ ಮಾಲೀಕರಾದ ಶ್ರೀಮತಿ ವೈಶಾಲಿ ಹನುಮಂತ್ ಮತ್ತು ಸಿ.ಆರ್. ಹನುಮಂತ್, ಸ್ಥಳ: ಅಮೃತ ವಿಶ್ವ ವಿದ್ಯಾಪೀಠಂ, ಬೋಗಾದಿ.

■ **ಶ್ರೀರಾಮ ಸೇವಾ ಮಂಡಲಿ ಚಾರಿಟಬಲ್ ಟ್ರಸ್ಟ್:** 31ನೇ ಶ್ರೀ ರಾಮನವಮಿ ಸಂಗೀತೋತ್ಸವ, ಸಂಜೆ 5.15 ರಿಂದ ತನ್ಮಯಿ ಕಿಶೋರ್–ಶ್ರೀವತ್ಸ–ಶುಭಾಂಗ್ ಅವರಿಂದ ಗಾಯನ, ಸಂಜೆ 6.15 ರಿಂದ ಡಾ. ಜ್ಯೋತಿ ಶಂಕರ್ ಅವರಿಂದ ರಾಮಾಯಣದಲ್ಲಿನ ಮೌಲಿನ್ಯ ಗುಣಗಳು ಕುರಿತು ಪ್ರವಚನ, ಸ್ಥಳ: ಶ್ರೀ ಪ್ರಸನ್ನ ಪಾರ್ವತಿ ಕಲ್ಯಾಣ ಮಂಟಪ, ವಿ.ವಿ.ಮೊಹಲ್ಲಾ.

■ **ಪ್ರೀತಿ ಕ್ಯಾನ್ಸರ್ ಸೆಂಟರ್:** ಉಚಿತ ಕ್ಯಾನ್ಸರ್ ತಪಾಸಣಾ ಶಿಬಿರ, ಸ್ಥಳ: ಪ್ರೀತಿ ಕ್ಯಾನ್ಸರ್ ಸೆಂಟರ್, ಲಕ್ಷ್ಮೀಪುರಂ, ಬೆಳಗ್ಗೆ 10 ರಿಂದ ರಾತ್ರಿ 8 ಗಂಟೆಯವರೆಗೆ

■ **ರೆಸ್ಪಾನ್ಸಿಬಲ್ ಸಿಟಿಜನ್ಸ್ ವಾಯ್ಸ್:** ಸಾಮಾಜಿಕ ಸೌಹಾರ್ದತೆ ಮತ್ತು ಸೋದರತ್ವದ ಕಡೆಗೆ, ಉಪಸ್ಥಿತರು: ಉಸ್ಮಾನ್ ಬೇಗ್ ಸಾಬ್, ಪತ್ರಕರ್ತ ಬಿ.ಎಂ.ಹನೀಫ್, ಶಾಸಕ ತನ್ವೀರ್ ಸೇಠ್, ಶಾಸಕ ಎ.ಹೆಚ್. ವಿಶ್ವನಾಥ್, ಇತಿಹಾಸ ತಜ್ಞ ಪ್ರೊ.ನಂಜರಾಜ ಅರಸ್, ಪಿಯುಸಿಎಲ್‌ನ ಕಮಲ್ ಗೋಪಿನಾಥ್, ಬರಹಗಾರ ನಾ.ದಿವಾಕರ, ಬೆಟ್ಟಯ್ಯ ಕೋಟೆ, ಬಸವಲಿಂಗಯ್ಯ, ಕೆ.ಆರ್.ಗೋಪಾಲಕೃಷ್ಣ, ಸವಿತಾ ಪ. ಮಲ್ಲೇಶ್, ಸ್ಥಳ: ಹೋಟೆಲ್ ಓಸಿಯನ್ ಡಿಲೈಟ್ (ಜೈಕಾ), ಹೈವೇ ಸರ್ಕಲ್, ಸಂಜೆ 6ಕ್ಕೆ

■ **ಜೆಎಸ್‌ಎಸ್ ಮಹಿಳಾ ಕಾಲೇಜು :** ಸ್ಪಾರ್ಟೆಕ್‌ತ್ರಾ–2025, ಸಾನ್ನಿಧ್ಯ : ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಉಪಸ್ಥಿತರು : ಮೈಸೂರು ವಿವಿ ವಿಶ್ರಾಂತ ಕುಲಪತಿ ಪ್ರೊ. ಜಿ. ಹೇಮಂತ್‌ಕುಮಾರ್, ಉದ್ಘಾಟನೆ : ಇನ್ಫೋಸಿಸ್ ಅಸೋಸಿಯೇಟ್ ವೈಸ್‌ಪ್ರೆಸಿಡೆಂಟ್ ಮಹಾಲಿಂಗೇಶ್ವರ ಎಸ್. ದಾಹೇದ್, ಉಪಸ್ಥಿತರು : ಡಾ. ಡಿ.ಎಸ್. ಗುರು, ಬಿ. ನಿರಂಜನಮೂರ್ತಿ, ಸ್ಥಳ: ಕಾಲೇಜು ಆವರಣ, ಸರಸ್ವತಿಪುರಂ, ಬೆಳಗ್ಗೆ 10.30ಕ್ಕೆ.

■ **ಜೆಎಸ್‌ಎಸ್ ವಾಕ್ ಮತ್ತು ಶ್ರವಣ ಸಂಸ್ಥೆ :** ಜೆಎಸ್‌ಎಸ್ ವಾಕ್–ಶ್ರವಣ ಅಂತರರಾಷ್ಟ್ರೀಯ ಸಮ್ಮೇಳನ, ವಿಶ್ರುತ–2, ಮುಖ್ಯ ಅತಿಥಿಗಳು : ರಿಯಾಬಿಲಿಟೇಷನ್ ಕೌನ್ಸಿಲ್ ಆಫ್ ಇಂಡಿಯಾ ಸದಸ್ಯ ಕಾರ್ಯದರ್ಶಿ ವಿಕಾಸ್ ತ್ರಿವೇದಿ, ಅಧ್ಯಕ್ಷತೆ : ಜೆಎಸ್‌ಎಸ್ ಕಾರ್ಯನಿರ್ವಾಹಕ ಕಾರ್ಯದರ್ಶಿ ಡಾ. ಸಿ.ಜಿ. ಬೆಟಸೂರ ಮಠ, ವೈದ್ಯಕೀಯ ಶಿಕ್ಷಣ ವಿಭಾಗದ ನಿರ್ದೇಶಕ ಆರ್. ಮಹೇಶ್, ಸ್ಥಳ: ಶ್ರೀ ರಾಜೇಂದ್ರ ಶತಮಾನೋತ್ಸವ ಸಭಾಂಗಣ, ಜೆಎಸ್‌ಎಸ್ ಆಸ್ಪತ್ರೆ, ಬೆಳಗ್ಗೆ 11ಕ್ಕೆ.

■ **ಕರ್ನಾಟಕ ಬಯಲಾಟ ಅಕಾಡೆಮಿ, ಬಾಗಲಕೋಟೆ, ರಂಗಾಯಣ:** ಮೂಡಲಪಾಯ ಬಯಲಾಟ ಪರಂಪರೆ, ವಿಚಾರ ಸಂಕಿರಣ ಮತ್ತು ಪ್ರದರ್ಶನ, ಬೆಳಗ್ಗೆ 11ಕ್ಕೆ ಉದ್ಘಾಟನೆ: ಮೈಸೂರು ವಿವಿ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್, ಅಧ್ಯಕ್ಷತೆ: ಕರ್ನಾಟಕ ಬಯಲಾಟ ಅಕಾಡೆಮಿ ಅಧ್ಯಕ್ಷ ಪ್ರೊ.ಕೆ.ಆರ್. ದುರ್ಗಾದಾಸ್, ಮುಖ್ಯ ಅತಿಥಿಗಳು: ರಂಗಾಯಣ ನಿರ್ದೇಶಕ ಸತೀಶ್ ತಿಪಟೂರು, ಮಹಾರಾಜ ಕಾಲೇಜು ಪ್ರಿನ್ಸಿಪಾಲ್ ಪ್ರೊ.ಎಚ್.ಸಿ.ದೇವರಾಜೇಗೌಡ, ಆಡಳಿತಾಧಿಕಾರಿ ಪ್ರೊ.ಕೆ.ತಿಮ್ಮಯ್ಯ, ರಂಗಾಯಣ ಉಪನಿರ್ದೇಶಕ ಡಾ. ಎಂ.ಡಿ. ಸುದರ್ಶನ್; ಸಂಜೆ 6ಕ್ಕೆ ಮೂಡಲಪಾಯ ಬಯಲಾಟ ಪ್ರದರ್ಶನಗಳ ಉದ್ಘಾಟನೆ, ಉದ್ಘಾಟನೆ : ರಂಗಾಯಣ ನಿರ್ದೇಶಕ ಸತೀಶ್ ತಿಪಟೂರು, ಅಧ್ಯಕ್ಷತೆ: ಕರ್ನಾಟಕ ಬಯಲಾಟ ಅಕಾಡೆಮಿ ಅಧ್ಯಕ್ಷ ಪ್ರೊ.ಕೆ.ಆರ್.ದುರ್ಗಾದಾಸ್, ಮುಖ್ಯ ಅತಿಥಿಗಳು: ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್.ಮಲ್ಲಿಕಾರ್ಜುನಸ್ವಾಮಿ, ರಂಗಾಯಣ ಉಪನಿರ್ದೇಶಕ ಡಾ.ಎಂ.ಡಿ.ಸುದರ್ಶನ್, ಅಕಾಡೆಮಿ ರಿಜಿಸ್ಟ್ರಾರ್ ಕೆ.ಕರ್ಣಕುಮಾರ, ಸ್ಥಳ: ಭೂಮಿಗೀತ, ರಂಗಾಯಣ.

ಮೈಸೂರು ಆಕಾಶವಾಣಿ




ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಹೆಣ್ಣು ಮನಸು ಮಾಡಿದರೆ ಸಾಧಕ ಮಹಿಳೆಯರ ಪರಿಚಯ ಮಾಲಿಕೆ, ಪ್ರಸ್ತುತಿ: ಪ್ರೊಫೆಸರ್. ಸಿ.ನಾಗಣ್ಣ, ನಿರ್ಮಾಣ–ಜಾಂಪಣ್ಣ ಆಶೀಹಾಳ್, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ–ನಿತಿನ್ ರಾಜಾರಾಂ ಶಾಸ್ತ್ರಿ, ಕೆ.ಟಿ.ಉದಯಕಿರಣ್, ವ್ಯಾಖ್ಯಾನ–ಡಾ. ಬಿ.ವಿ. ವಸಂತಕುಮಾರ್, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು, 8.30 ಯೋಗ ಕುರಿತ ವಿಶೇಷ ಸರಣಿ –ಮಹಾಯೋಗ, 8.35 ಕನ್ನಡ ಚಿತ್ರಗೀತೆಗಳು, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ : ಎಂ. ರಾಘವೇಂದ್ರ – ಹಾಡುಗಾರಿಕೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ–ಕಾಡಿನಲ್ಲಿನ ಕಥೆಗಳು, ಪ್ರಸ್ತುತಿ : ಜಿ. ಶಾಂತಕುಮಾರ್

ಮಧ್ಯಾಹ್ನ: 12.35 ದೇವರನಾಮ, 12.45 ಚಿತ್ರಗೀತೆಗಳು, 1.00 ಪ್ರಗತಿ ಪಥ – ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು–ಅಮೂಲ್ಯ. ಎಂ, 2.40 ಕನ್ನಡ ಚಿತ್ರಗೀತೆಗಳು, 4.00 ಹಳ್ಳಿಹಾಡು, ಭಾಗವಹಿಸುತ್ತಾರೆ–ಜಾನಪದ ವಿದ್ವಾಂಸ ಡಾ.ಪಿ.ಕೆ. ರಾಜಶೇಖರ್ ಮತ್ತು ಸಂಗಡಿಗರು ನಾಲ್ಕನೇ ಭಾಗ, ಪ್ರಸ್ತುತಿ : ಡಾ. ಮೈಸೂರು ಉಮೇಶ್, 4.30 ಸಂಧ್ಯಾರಾಗ, 6.50 ಕೃಷಿರಂಗ–ಕಿಸಾನ್‌ವಾಣಿ, ಪ್ರಾಯೋಜಕರು : ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ ನಂ ಕಂಪನಿ ರೈತ ಉತ್ಪಾದಕ ಸಂಸ್ಥೆಗಳ ಸಬಲೀಕರಣ ಕುರಿತ ಬಾನುಲಿ ಸರಣಿ ಅಕ್ಕಿ ಹಾಗೂ ಖಾದ್ಯ ತೈಲ ಮಾರಾಟ ಈ ಕುರಿತು ಮಂಡ್ಯ ತಾಲ್ಲೂಕು ದುದ್ದ ಗ್ರಾಮದ ಜಯಚಾಮರಾಜೇಂದ್ರ ಒಡೆಯರ್ ರೈತ ಉತ್ಪಾದಕ ಕಂಪನಿಯ ಅಧ್ಯಕ್ಷರಾದ ಎಂ.ಎಲ್. ಶಂಕರಲಿಂಗೇಗೌಡ ಅವರೊಂದಿಗೆ ಸಂದರ್ಶನ, ಸಂದರ್ಶಕರು : ಎನ್. ಕೇಶವಮೂರ್ತಿ, 7.45 ಕನ್ನಡ ಚಿತ್ರಗೀತೆಗಳು, 8.00 ಸಂಸತ್ ಸಮೀಕ್ಷಾ, 8.15 ಯುವವಾಣಿ–ಯುವಪ್ರತಿಭೆ–ಇತ್ತೀಚೆಗೆ ಜರುಗಿದ ಮೈಸೂರು ವಿಶ್ವವಿದ್ಯಾಲಯದ 105 ಘಟಿಕೋತ್ಸವದಲ್ಲಿ ಬಿ.ಎ. ಪದವಿಯ ಸಂಸ್ಕೃತ ಭಾಷಾ ವಿಷಯದಲ್ಲಿ ಪ್ರಥಮ ರ್‍ಯಾಂಕ್‌ನೊಂದಿಗೆ 2 ಚಿನ್ನದ ಪದಕ ಹಾಗೂ ನಗದು ಪುರಸ್ಕಾರ ಗಳಿಸಿದ ಮೈಸೂರಿನ ಶ್ರೇಯಾ. ಸಿ.ಎಸ್. ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ: ಬೇದ್ರೆ ಮಂಜುನಾಥ್, 9.30 ಕರ್ನಾಟಕ ಶಾಸ್ತ್ರೀಯ ಸಂಗೀತ : ದೆಹಲಿ. ವಿ. ಮುತ್ತುಕುಮಾರ್ – ಹಾಡುಗಾರಿಕೆ, 10.00 ಸಂಸತ್ತಿನ ಪ್ರಶ್ನೋತ್ತರ ಕಲಾಪಗಳ ಧ್ವನಿಮುದ್ರಣದ ಪ್ರಸಾರ

ಚಾಮುಂಡಿಬೆಟ್ಟ ರಸ್ತೆಗೂ ವ್ಯಾಪಿಸಿದ ಫುಟ್‌ಪಾತ್ ವ್ಯಾಪಾರ!

ಪ್ರವಾಸಿಗರು, ಭಕ್ತರ ದೇವಿಯೇ ಕಾಪಾಡಬೇಕು!!





ಮೈಸೂರು, ಏ.2– ಮೈಸೂರಿನ ಬಹುತೇಕ ಕಡೆ ಈಗಾಗಲೇ ವಾಹನ ಚಾಲಕರು, ಸವಾರರು ಹಾಗೂ ಪಾದ ಚಾರಿಗಳಿಗೆ ಕಂಟಕಪ್ರಾಯವಾಗಿ ಪರಿಣಮಿಸಿರುವ ಫುಟ್‌ಪಾತ್ ಅತಿಕ್ರಮಣ ಹಾಗೂ ವ್ಯಾಪಾರ ಈಗ ಪ್ರಸಿದ್ಧ ಧಾರ್ಮಿಕ ಸ್ಥಳ ಚಾಮುಂಡಿಬೆಟ್ಟ ರಸ್ತೆಗೂ ವ್ಯಾಪಿಸಿದೆ. ಇನ್ನು ಈ ರಸ್ತೆಯಲ್ಲಿ ಹಾದು ಹೋಗುವ ಪ್ರವಾಸಿಗರು ಹಾಗೂ ತನ್ನ ಭಕ್ತರನ್ನ ದೇವಿಯೇ ಕಾಪಾಡಬೇಕಿದೆ.

ಮೈಸೂರಿನೆಲ್ಲೆಡೆ ಈಗಾಗಲೇ ಆವರಿಸಿರುವ ಫುಟ್‌ಪಾತ್ ವ್ಯಾಪಾರ–ವಹಿವಾಟು ಹೋಟೆಲ್ ಉದ್ಯಮಕ್ಕೆ ಕಂಟಕವಾಗಿ ಪರಿಣಮಿಸಿದೆ. ಸ್ವಚ್ಛತೆಗೂ ಸವಾಲಾಗಿದೆ. ವಾಹನ ಹಾಗೂ ಪಾದಚಾರಿಗಳ ಸಂಚಾರಕ್ಕೆ ಸಂಚಕಾರ ತಂದೊಡ್ಡಿದೆ.

ಇದರ ಬಗ್ಗೆ ಮೈಸೂರು ನಗರಪಾಲಿಕೆ ಅಧಿಕಾರಿ ವರ್ಗ ಹಾಗೂ ನಗರ ಸಂಚಾರ ಪೊಲೀಸರು ಕ್ರಮ ಕೈಗೊಳ್ಳಲು ಮುಂದಾಗದೇ ಇರುವುದನ್ನು ಮನಗಂಡೇ, ಈಗ ಪ್ರಸಿದ್ಧ ಧಾರ್ಮಿಕ ಸ್ಥಳ ಚಾಮುಂಡಿಬೆಟ್ಟ ರಸ್ತೆಗೂ ಫುಟ್‌ಪಾತ್ ವ್ಯಾಪಾರಿಗಳು ಪಾದ ಬೆಳೆಸಿದ್ದಾರೆ.

ಬೆಟ್ಟದ ರಸ್ತೆಯಲ್ಲಿ ಈಗಾಗಲೇ ನಡೆಯುತ್ತಿರುವ ವ್ಯಾಪಾರ–ವಹಿವಾಟುಗಳಿಂದ ವಾಹನ ಸಂಚಾರಕ್ಕೆ ಅಡ್ಡಿಯಾಗುತ್ತಿತ್ತು. ಈಗ ಫುಟ್‌ಪಾತ್ ವ್ಯಾಪಾರಿಗಳು ರಸ್ತೆ ಅಂಚಿನಲ್ಲೇ ವಹಿವಾಟಿಗಿಳಿದಿರುವುದರಿಂದ, ಅಲ್ಲಿ ಖರೀದಿಗೆ ಮುಂದಾಗುವ ಗ್ರಾಹಕರು ರಸ್ತೆಯಲ್ಲೇ ವಾಹನ ನಿಲ್ಲಿಸುತ್ತಿದ್ದಾರೆ. ಮೊದಲೇ ಸದಾ ವಾಹನ ದಟ್ಟಣೆಯಿಂದ ಕೂಡಿರುವ ಈ ರಸ್ತೆಯಲ್ಲಿ ಪ್ರವಾಸಿಗರು ಹಾಗೂ ಸಾರ್ವಜನಿಕರ ವಾಹನಗಳ ಸಂಚಾರಕ್ಕೆ ತೀವ್ರ ರೀತಿಯಲ್ಲಿ ಅಡಚಣೆಯಾಗುತ್ತಿದೆ.

ಪ್ರವಾಸ ಸ್ನೇಹಿ ವಾತಾವರಣ ಕಲ್ಪಿಸುವುದಾಗಿ ಬೊಗಳೆ ಬಿಡುವ ನಮ್ಮ ಅಧಿಕಾರಿ ವರ್ಗ, ಸೂಕ್ತ ಸಂದರ್ಭದಲ್ಲಿ ಕ್ರಮ ಕೈಗೊಂಡಿದ್ದರೆ ಫುಟ್‌ಪಾತ್ ವ್ಯಾಪಾರದ ಹಾವಳಿ ಇಷ್ಟು ಸಮಸ್ಯೆ ತಂದೊಡ್ಡುತ್ತಿರಲಿಲ್ಲ. ಈಗ ಪ್ರವಾಸಿ ತಾಣವೂ ಆದ ಚಾಮುಂಡಿಬೆಟ್ಟ ರಸ್ತೆಗೂ ಇದು ಆವರಿಸಿರುವುದರಿಂದ ಇನ್ನು ಮುಂದೆ ಅಪಘಾತಗಳ ಸಂಖ್ಯೆ ಹೆಚ್ಚಾಗುವ ಸಾಧ್ಯತೆ ಇದೆ. ಇಲ್ಲಿ ಐಸ್‌ಕ್ರೀಂ, ನಾನಾ ತಿಂಡಿ ಪದಾರ್ಥಗಳ ವ್ಯಾಪಾರಕ್ಕಿಳಿದಿರುವವರು ಹೊರ ರಾಜ್ಯದವರು. ಅವರಿಗೂ ನಮ್ಮಲ್ಲಿನ ಆಡಳಿತ ಲೋಪ ಮನವರಿಕೆ ಆಗಿರುವುದರಿಂದಲೇ ಈ ರೀತಿ ರಸ್ತೆ ಅಂಚಿನಲ್ಲಿ ವ್ಯಾಪಾರಕ್ಕಿಳಿಯುವ ಧೈರ್ಯ ಮಾಡಿದ್ದಾರೆ. ಮೈಸೂರಿನಗೆ ಬಂದಂತಹ ಪ್ರವಾಸಿ ಗರು ಸುರಕ್ಷಿತ ಹಾಗೂ ಸಂತೋಷದಿಂದ ಕಾಲ ಕಳೆದು, ಸಿಹಿ ಅನುಭವದೊಂದಿಗೆ ಮರಳಿದರೆ ಪ್ರವಾಸೋದ್ಯಮದ ಬೆಳವಣಿಗೆ ತಾನೇ ತಾನಾಗಿ ಸಾಧ್ಯವಾಗುತ್ತದೆ. ಅದಕ್ಕಾಗಿ ಯಾವ ಸರ್ಕಸ್ ಅಗತ್ಯವಿಲ್ಲ. ಇದು ನಮ್ಮ ಅಧಿಕಾರಿ ವರ್ಗಕ್ಕೆ ಮನವರಿಕೆ ಆಗುವುದು ಯಾವಾಗ?

ಕೌಶಲದತ್ತ ಹೆಣ್ಣು ಮಕ್ಕಳು ಹೆಚ್ಚೆಚ್ಚು ಗಮನ ಹರಿಸುವುದು ಅವಶ್ಯ

ಉದ್ಯಮಿ ರಚನಾ ಮಹೇಶ್ ಕಿವಿಮಾತು



ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯಲ್ಲಿ ಮಹಿಳಾ ಉದ್ಯಮಿ ರಚನಾ ಮಹೇಶ್ ಮಾತನಾಡಿದರು.

ಮೈಸೂರು, ಏ.2(ಎಂಕೆ)– ಹೆಣ್ಣು ಮಕ್ಕಳು ಅಧ್ಯಯನದ ಜೊತೆಗೆ ಕೌಶಲದ ಕಡೆ ಹೆಚ್ಚೆಚ್ಚು ಗಮನ ಹರಿಸಬೇಕು. ನಾವು ಮಾಡುವ ಸಾಧನೆ ಇತರರಿಗೆ ಸ್ಫೂರ್ತಿ ಹಾಗೂ ಪ್ರೇರಣೆಯಾಗಿರಬೇಕು ಎಂದು ಮಹಿಳಾ ಉದ್ಯಮಿ ರಚನಾ ಮಹೇಶ್ ಹೇಳಿದರು.

ಮೈಸೂರು ವಿಶ್ವವಿದ್ಯಾನಿಲಯ ಮಾನಸ ಗಂಗೋತ್ರಿಯ ಇಎಂಆರ್‌ಸಿ ಸಭಾಂಗಣದಲ್ಲಿ ಸಮಾಜಕಾರ್ಯ ಅಧ್ಯಯನ ವಿಭಾಗ ಹಾಗೂ ಸಮಾಗಮ ವೆಲ್ಫೇರ್ ಫೌಂಡೇಶನ್ ವತಿಯಿಂದ ಆಯೋಜಿಸಿದ್ದ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಸ್ಪರ್ಧಾತ್ಮಕ ಜಗತ್ತಿನಲ್ಲಿ ಹೆಣ್ಣು ಮಕ್ಕಳು ತಮಗೆ ಆಸಕ್ತಿ ಇರುವ ಕ್ಷೇತ್ರದ ಕಡೆಗೆ ಹೆಚ್ಚು ಸಮಯವನ್ನು ನೀಡಿ, ಸಾಧನೆಯನ್ನು ಮಾಡಿ ಎಂದು ಕಿವಿಮಾತು ಹೇಳಿದರು.

ಸಮಾಜಕಾರ್ಯ ಅಧ್ಯಯನ ವಿಭಾಗದ ಪ್ರಾಧ್ಯಾಪಕರಾದ ಡಾ.ಹೆಚ್.ಪಿ. ಜ್ಯೋತಿ ಮಾತನಾಡಿ, ಮಹಿಳೆಯರ ಸಾಧನೆಗಳನ್ನು ಗುರುತಿಸಿ ಗೌರವಿಸುವಂತಹ ದಿನವೇ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯಾಗಿದೆ. ಸಮಾನ ಅವಕಾಶದಿಂದ ವಂಚಿತರಾಗಿದ್ದ ಮಹಿಳೆಯರಿಗೆ ಇಂದು ಕಾನೂನು ಎಲ್ಲಾ ಕ್ಷೇತ್ರಗಳಲ್ಲಿಯೂ ಸೂಕ್ತ ಹಾಗೂ ಸಮಾನ ಅವಕಾಶ ಕಲ್ಪಿಸಿದೆ. ದೊರೆತ ಅವಕಾಶಗಳನ್ನು ಸದುಪಯೋಗ ಮಾಡಿಕೊಂಡು ಸ್ವಾವಲಂಬಿಗಳಾಗಿ ಗೌರವದ ಜೀವನ ಕಟ್ಟಿಕೊಳ್ಳುವಂತೆ ಸಲಹೆ ನೀಡಿದರು. ಸಮಾಜಕಾರ್ಯ ಅಧ್ಯಯನ ವಿಭಾಗದ ಅಧ್ಯಕ್ಷ ಡಾ.ಚಂದ್ರಮೌಳಿ, ಸಮಾಗಮ ಫೌಂಡೇಶನ್ ಸಂಸ್ಥಾಪಕ ಎಸ್.ಪಾಂಡು, ನಿರ್ದೇಶಕಿ ಸುಮಿತ್ರ ಮತ್ತಿತರರು ಉಪಸ್ಥಿತರಿದ್ದರು.

ಗುಣಾಂಬ ಮೆಟರ್ನಿಟಿ ಅಂಡ್ ಚೈಲ್ಡ್ ವೆಲ್ಫೇರ್ ಟ್ರಸ್ಟ್‌ನಿಂದ

ಚೆಲುವಾಂಬ ಆಸ್ಪತ್ರೆಗೆ ಮಾನಿಟರ್ ಸಹಿತ ಹತ್ತು ರೇಡಿಯಂಟ್ ವಾರ್ಮರ್ ಕೊಡುಗೆ

ರಾಜವಂಶಸ್ಥರೂ ಆದ ಟ್ರಸ್ಟ್ ಅಧ್ಯಕ್ಷರಾದ ಪ್ರಮೋದಾದೇವಿ ಒಡೆಯರ್ ಹಸ್ತಾಂತರ

ಮೈಸೂರು, ಏ.2(ಎಂಕೆ)– ಮೈಸೂರಿನ ಚೆಲುವಾಂಬ ಆಸ್ಪತ್ರೆಯ ನವಜಾತ ಶಿಶುಗಳ ತೀವ್ರ ನಿಗಾ ಘಟಕ (ಎನ್‌ಐಸಿಯು)ಕ್ಕೆ ಗುಣಾಂಬ ಮೆಟರ್ನಿಟಿ ಅಂಡ್ ಚೈಲ್ಡ್ ವೆಲ್ಫೇರ್ ಟ್ರಸ್ಟ್ ವತಿಯಿಂದ ಮಾನಿಟರ್ ಸಹಿತ ಹತ್ತು ರೇಡಿಯಂಟ್ ವಾರ್ಮರ್‌ಗಳನ್ನು ಹಸ್ತಾಂತರಿಸಲಾಯಿತು.

ಚೆಲುವಾಂಬ ಆಸ್ಪತ್ರೆಗೆ ಬುಧವಾರ ಭೇಟಿ ನೀಡಿದ ಗುಣಾಂಬ ಮೆಟರ್‌ನಿಟಿ ಅಂಡ್ ಚೈಲ್ಡ್ ವೆಲ್ಫೇರ್ ಟ್ರಸ್ಟ್ ಅಧ್ಯಕ್ಷರಾದ ರಾಜವಂಶಸ್ಥೆ ಪ್ರಮೋದಾದೇವಿ ಒಡೆಯರ್, ನವಜಾತ ಶಿಶುಗಳ ಆರೈಕೆಗಾಗಿ ಬಳಸುವ ರೇಡಿಯಂಟ್ ವಾರ್ಮರ್(ಬೆಚ್ಚಗಿರುವ ಉಪಕರಣಗಳು)ಗಳನ್ನು, ಹಸ್ತಾಂತರಿಸಿದರು.

ನಂತರ ನಡೆದ ವೇದಿಕೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಚೆಲುವಾಂಬ ಆಸ್ಪತ್ರೆಯ ಮಕ್ಕಳ ಘಟಕದಲ್ಲಿ ರೇಡಿಯೆಂಟ್ ವಾರ್ಮರ್‌ಗಳ ಅಗತ್ಯವಿದೆ ಎಂದು ತಿಳಿದು ಬಂದ ಹಿನ್ನೆಲೆಯಲ್ಲಿ ಟ್ರಸ್ಟ್ ವತಿಯಿಂದ ನೀಡಲಾಗಿದೆ. ಗುಣಾಂಬ ಮೆಟರ್‌ನಿಟಿ ಅಂಡ್ ಚೈಲ್ಡ್ ವೆಲ್ಫೇರ್ ಟ್ರಸ್ಟ್ ಆರಂಭವಾಗಿ ನೂರು ವರ್ಷ(1924)ಗಳಾಗಿದೆ. 20 ಸಾವಿರ ದಾನದಿಂದ ಆರಂಭಗೊಂಡ ಟ್ರಸ್ಟ್, ಕಾರಣಾಂತರದಿಂದ ನಿಂತಿತ್ತು. ಕಳೆದ ಹತ್ತು ವರ್ಷದಿಂದ ಸಾಧ್ಯವಾದಷ್ಟು ಮಕ್ಕಳ ಆರೈಕೆಗೆ ತೊಡಗಿಸಿಕೊಂಡಿದೆ ಎಂದರು. ಗ್ರಾಮೀಣ ಪ್ರದೇಶದ ಜನರ ಸೇವೆಗಾಗಿ ಟ್ರಸ್ಟ್ ಆರಂಭವಾಗಿದ್ದು, ಮುಂದಿನ ದಿನಗಳಲ್ಲಿ ಮೈಸೂರಿನ ತುಳಸಿದಾಸ್ ಆಸ್ಪತ್ರೆ, ಗುಂಡ್ಲುಪೇಟೆ ಸರ್ಕಾರಿ ಮಕ್ಕಳ ಆಸ್ಪತ್ರೆಗೆ ಅಗತ್ಯವಿರುವ ವೈದ್ಯಕೀಯ ಉಪಕರಣಗಳನ್ನು, ಹಾಗೂ ಇನ್ನಿತರೆ ಸೌಲಭ್ಯಗಳನ್ನು ಒದಗಿಸುವ ನಿಟ್ಟಿನಲ್ಲಿ ಚಿಂತನೆ ನಡೆಸಲಾಗಿದೆ. ಟ್ರಸ್ಟ್‌ನ ಎಲ್ಲಾ ಪದಾಧಿಕಾರಿಗಳ ಸಹಕಾರದಿಂದ ಸೇವಾ ಕಾರ್ಯಗಳು ನಡೆಯುತ್ತಿವೆ ಎಂದು ತಿಳಿಸಿದರು.



ಮೈಸೂರಿನ ಚೆಲುವಾಂಬ ಆಸ್ಪತ್ರೆಯ ಎನ್‌ಐಸಿಯು ಘಟಕಕ್ಕೆ ಗುಣಾಂಬ ಮೆಟರ್ನಿಟಿ ಅಂಡ್ ಚೈಲ್ಡ್ ವೆಲ್ಫೇರ್ ಟ್ರಸ್ಟ್ ವತಿಯಿಂದ ಮಾನಿಟರ್ ಸಹಿತ ಹತ್ತು ರೇಡಿಯಂಟ್ ವಾರ್ಮರ್‌ಗಳನ್ನು ಹಸ್ತಾಂತರಿಸಲಾಯಿತು. ಟ್ರಸ್ಟ್ ಅಧ್ಯಕ್ಷರಾದ ಪ್ರಮೋದಾದೇವಿ ಒಡೆಯರ್, ಜಿಲ್ಲಾಧಿಕಾರಿ ಲಕ್ಷ್ಮಿಕಾಂತ್‌ರೆಡ್ಡಿ, ಮೈಸೂರು ಮೆಡಿಕಲ್ ಕಾಲೇಜಿನ ಡೀನ್ ಡಾ.ಕೆ.ಆರ್.ದಾಕ್ಷಾಯಣಿ ಮತ್ತಿತರರಿದ್ದರು.

ಮೈಸೂರು ವೈದ್ಯಕೀಯ ಮಹಾವಿದ್ಯಾಲಯದ ಡೀನ್ ಡಾ.ಕೆ.ಆರ್.ದಾಕ್ಷಾಯಣಿ ಮಾತನಾಡಿ, 1924ರಲ್ಲಿ ಮೈಸೂರು ಮಹಾರಾಜರ ದೂರದೃಷ್ಟಿಯಿಂದ 20 ವಿದ್ಯಾರ್ಥಿಗಳಿಂದ ಆರಂಭಗೊಂಡ ಮೈಸೂರು ಮೆಡಿಕಲ್ ಕಾಲೇಜು ಈಗ 200 ಯುಜಿ ವಿದ್ಯಾರ್ಥಿಗಳನ್ನು ಒಳಗೊಂಡಿದೆ. ಮುಂದಿನ ದಿನಗಳಲ್ಲಿ 250 ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದ್ದು, ಸದ್ಯದಲ್ಲೇ ನೆರವೇರುವ ಸಾಧ್ಯತೆಗಳಿವೆ. 20 ಹಾಸಿಗೆಗಳಿಂದ ಆರಂಭವಾದ ಕೆ.ಆರ್.ಆಸ್ಪತ್ರೆ ದೊಡ್ಡಾಸ್ಪತ್ರೆಯಾಗಿ ಮಾತ್ರವಲ್ಲದೆ ಐದು ಆಸ್ಪತ್ರೆಗಳಾಗಿ ವಿಸ್ತರಣೆಗೊಂಡಿದ್ದು, ಈಗ 2390 ಹಾಸಿಗೆಗಳನ್ನು ಒಳಗೊಂಡಿದೆ. ಚೆಲುವಾಂಬ, ಕೆ.ಆರ್.ಆಸ್ಪತ್ರೆ, ಪಿಕೆಟಿಬಿ, ಟ್ರಾಮಾಕೇರ್ ಮತ್ತು ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗಳಲ್ಲಿ ವೈದ್ಯರು ಒಮ್ಮತದಿಂದ ಸೇವೆ ನೀಡುತ್ತಿದ್ದಾರೆ. ಇದೆಲ್ಲವೂ ಸಾಧ್ಯವಾಗಿದ್ದು ಮೈಸೂರು ಮಹಾರಾಜರಿಂದ ಎಂದು ಸ್ಮರಿಸಿದರು.

ಓಪಿಡಿ ಕಾಂಪ್ಲೆಕ್ಸ್: ಸುಮಾರು 75 ಕೋಟಿ ರೂ. ವೆಚ್ಚದಲ್ಲಿ ಓಪಿಡಿ ಕಾಂಪ್ಲೆಕ್ಸ್ ನಿರ್ಮಾಣವಾಗಲಿದ್ದು, ಇದರಿಂದ ರೋಗಿಗಳಿಗೆ ಹೆಚ್ಚಿನ ಅನುಕೂಲವಾಗಲಿದೆ. ಗುಣಾಂಬ ಟ್ರಸ್ಟ್ ನೀಡಿರುವ ರೇಡಿಯಂಟ್ ವಾರ್ಮರ್‌ಗಳಿಂದ ಹೆಚ್ಚಿನ ಅನುಕೂಲವಾಗಲಿದೆ. ದಿನದಿಂದ ದಿನಕ್ಕೆ ಒತ್ತಡ ಹೆಚ್ಚಾಗುತ್ತಿದ್ದು, ಇನ್ನೂ 200 ಹಾಸಿಗೆಗಳಿಗೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಗರ್ಭಿಣಿ ಸ್ತ್ರೀಯರಿಗೆ 100 ಹಾಗೂ ಮಕ್ಕಳ 100 ಹಾಸಿಗೆಯ ಐಸಿಯು ಘಟಕಗಳು ಬಂದರೆ ಗುಣಮಟ್ಟದ ಸೇವೆ ನೀಡಲು ಅನುಕೂಲವಾಗಲಿದೆ ಎಂದು ತಿಳಿಸಿದರು.

ಜಿಲ್ಲಾಧಿಕಾರಿ ಜಿ.ಲಕ್ಷ್ಮಿಕಾಂತರೆಡ್ಡಿ, ಸಂತಾನೋತ್ಪತ್ತಿ ಮತ್ತು ಮಕ್ಕಳ ಆರೋಗ್ಯ ಅಧಿಕಾರಿ ಡಾ.ಮೊಹಮ್ಮದ್ ಸಿರಾಜ್ ಅಹಮದ್, ಡಿಹೆಚ್‌ಓ ಡಾ.ನಾಗರಾಜು, ಚೆಲುವಾಂಬ ಆಸ್ಪತ್ರೆಯ ಅಧೀಕ್ಷಕಿ ಡಾ.ಸುಧಾ, ಒಬಿಜಿ ವಿಭಾಗದ ಮುಖ್ಯಸ್ಥ ಡಾ.ಲಕ್ಷ್ಮೀಕಾಂತ್, ವೈದ್ಯಾಧಿಕಾರಿಗಳಾದ ಡಾ.ಶಿವರಾಮಕೃಷ್ಣ, ಡಾ.ಶಿರಾಜ್ ನಾಗರಾಜ್, ಮಕ್ಕಳ ಆರೋಗ್ಯಾಧಿಕಾರಿ ಡಾ.ನಾಗರಾಜ್ ಉಪಸ್ಥಿತರಿದ್ದರು.

ವಕ್ಫ್ ತಿದ್ದುಪಡಿ ಮಸೂದೆ ವಿರೋಧಿಸಿ ಎಸ್‌ಡಿಪಿಐ ಪ್ರತಿಭಟನೆ



ಎಸ್‌ಡಿಪಿಐ ಮೈಸೂರು ಜಿಲ್ಲಾ ಘಟಕದ ಪದಾಧಿಕಾರಿಗಳು ಮೈಸೂರು – ಬೆಂಗಳೂರು ರಸ್ತೆಯ ಎಫ್‌ಟಿಎಸ್ ವೃತ್ತದಲ್ಲಿ ಪ್ರತಿಭಟನೆ ನಡೆಸಿದರು.

ಮೈಸೂರು, ಏ.2(ಎಸ್‌ಪಿಎನ್)– ವಕ್ಫ್ ಮಸೂದೆ ತಿದ್ದುಪಡಿ ವಿರೋಧಿಸಿ ಸೋಷಿಯಲ್ ಡೆಮಾಕ್ರಟಿಕ್ ಪಾರ್ಟಿ ಆಫ್ ಇಂಡಿಯಾ (ಎಸ್‌ಡಿಪಿಐ) ಮೈಸೂರು ಜಿಲ್ಲಾ ಘಟಕದ ಪದಾಧಿಕಾರಿಗಳು, ಮೈಸೂರು –ಬೆಂಗಳೂರು ರಸ್ತೆಯ ಎಫ್‌ಟಿಎಸ್ ವೃತ್ತದಲ್ಲಿ ಬುಧವಾರ ಪ್ರತಿಭಟನೆ ನಡೆಸಿದರು.

ಪ್ರತಿಭಟನೆಯ ನೇತೃತ್ವವನ್ನು ಎಸ್‌ಡಿಪಿಐ ಜಿಲ್ಲಾಧ್ಯಕ್ಷ ರಫತ್‌ವುಲ್ಲಾ ಖಾನ್ ವಹಿಸಿದ್ದರು. ಕೇಂದ್ರ ಸರ್ಕಾರದ ವಿರುದ್ಧ ವಿವಿಧ ಘೋಷಣೆಗಳಿದ್ದ ಫಲಕ ಪ್ರದರ್ಶಿಸಿ, ತಮ್ಮ ಆಕ್ರೋಶ ಹೊರಹಾಕಿದರು. ನಂತರ ಕೇಂದ್ರ ಸರ್ಕಾರ, ವಕ್ಫ್ ಮಸೂದೆಗೆ ತಿದ್ದುಪಡಿ ತಂದು ಅಲ್ಪಸಂಖ್ಯಾತರ ಆಸ್ತಿ–ಪಾಸ್ತಿ ಕಸಿಯಲು ಹೊರಟಿದೆ ಎಂದು ಆರೋಪಿಸಿದರು.

ಮುಂದುವರೆದು ವಕ್ಫ್ ಆಸ್ತಿ, ಮುಸ್ಲಿಂ ಸಮುದಾಯದ ಜನರು ದಾನ ನೀಡಿದ್ದು, ಇದು ಸರ್ಕಾರದ ಆಸ್ತಿಯಲ್ಲ. ಹೀಗೆ ದಾನ ನೀಡಿದ ಆಸ್ತಿಯನ್ನು ಮುಸ್ಲಿಂ ಸಮುದಾಯದಲ್ಲಿ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಹಾಗೂ ಧಾರ್ಮಿಕ ಉದ್ದೇಶಕ್ಕೆ ಬಳಸಿಕೊಳ್ಳಲಾಗುತ್ತಿದೆ. ದೇಶದ ಯಾವುದೇ ಒಬ್ಬ ಮುಸ್ಲಿಂ ವ್ಯಕ್ತಿ ವಕ್ಫ್ ಮಸೂದೆಗೆ ತಿದ್ದುಪಡಿಗೆ ಆಗ್ರಹಿಸಿರಲಿಲ್ಲ. ಆದರೂ ಕೇಂದ್ರ ಸರ್ಕಾರ ತಿದ್ದುಪಡಿಗೆ ಮುಂದಾಗಿದೆ. ಅಲ್ಲದೆ, ವಕ್ಫ್ ಬೋರ್ಡ್‌ನಲ್ಲಿ ಮುಸ್ಲಿಂಯೇತರ ಇಬ್ಬರು ಸದಸ್ಯರನ್ನು ನೇಮಿಸಲು ಅವಕಾಶ ಕಲ್ಪಿಸುತ್ತಿದೆ. ವಕ್ಫ್ ಟ್ರಿಬ್ಯೂನಲ್ ಅನ್ನು ರದ್ದು ಮಾಡಿ, ವ್ಯಾಜ್ಯ ವಿಚಾರಣೆಗೆ ಆಯಾಯ ಜಿಲ್ಲಾಧಿಕಾರಿಗಳಿಗೆ ಜವಾಬ್ದಾರಿ ನೀಡುತ್ತಿರುವುದು ಸಂವಿಧಾನ ವಿರೋಧಿ ನಡೆ ಎಂದು ಟೀಕಿಸಿದರು.

ವಕ್ಫ್ ತಿದ್ದುಪಡಿ ಮಸೂದೆ ಜಾರಿಯಾಗಲು ಬಿಡಬಾರದು. ಕೇಂದ್ರ ಸರಕಾರ ಏಕಪಕ್ಷೀಯವಾಗಿ ಮಸೂದೆ ಜಾರಿಗೆ ಸಂಚು ರೂಪಿಸಿದೆ. ಈ ದೇಶದ ಹಲವು ಮುಸಲ್ಮಾನರು ಸ್ವಾತಂತ್ರ್ಯಕ್ಕಾಗಿ ಪ್ರಾಣ ತೆತ್ತಿದ್ದಾರೆ. ಪ್ರಧಾನಿ ಮೋದಿ ಆಡಳಿತದಲ್ಲಿ ದಲಿತರು, ಅಲ್ಪಸಂಖ್ಯಾತರ ಮೇಲೆ ನಿರಂತರ ದೌರ್ಜನ್ಯ ನಡೆಯುತ್ತಿವೆ ಎಂದು ಆರೋಪಿಸಿದರಲ್ಲದೆ, ದೇಶದ ಆರ್ಥಿಕ ಪ್ರಗತಿ ಕುಂಠಿತಗೊಂಡಿದೆ. ಹಿಂದೂ–ಮುಸ್ಲಿಂ ಉತ್ತಮ ಸಂಬಂಧ ಹಾಳುಗೆಡವುತ್ತಿದೆ ಎಂದು ಆರೋಪಿಸಿದರು.

ಕೇಂದ್ರ ಸರ್ಕಾರದ ತಿದ್ದುಪಡಿ ಮಸೂದೆ ಮೂಲಕ ಮಸೀದಿ, ಮದರಸ, ಖಬರಸ್ತಾನ ದೋಚಲು ಬಿಡದಿರೋಣ ಎಂಬ ಘೋಷಣೆಯೊಂದಿಗೆ ಕೇಂದ್ರ ಸರ್ಕಾರದ ವಿರುದ್ಧ ಧಿಕ್ಕಾರ ಕೂಗಿದ ಪ್ರತಿಭಟನಾಕಾರರು, ಮಸೂದೆಯ ಪ್ರತಿ ಹರಿದು ಆಕ್ರೋಶ ವ್ಯಕ್ತಪಡಿಸಿದರು. ವಕ್ಫ್ ಆಸ್ತಿಯ ಒಂದಿಂಚನ್ನೂ ಬಿಟ್ಟುಕೊಡುವುದಿಲ್ಲ ಎಂದು ಶಪಥ ಮಾಡಿದರು.

ಎಸ್‌ಡಿಪಿಐ ಪದಾಧಿಕಾರಿಗಳಾದ ಮೌಲಾನಾ ಅಕ್ರಂ, ಆಯೇಷಾ ಝಾಜಿ, ರಜಿಯಾ ಸುಲ್ತಾನ, ಮೊಹಮ್ಮದ್ ಶಫಿವುಲ್ಲಾ, ತಬ್ರೇಕ್ ಸೇಠ್, ಮೊಹಮ್ಮದ್ ಫಿರ್ದೋಸ್, ಉಪಾಧ್ಯಕ್ಷ ಎಸ್.ಸ್ವಾಮಿ, ಜಾಹೀರ್ ಅಹಮದ್, ಫರ್ದೀನ್ ಖಾನ್ ಸೇರಿದಂತೆ ಇತರರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ಮೇ 6ರಿಂದ ಲಾಸ್ ಏಂಜಲೀಸ್ 23ನೇ ಭಾರತೀಯ ಚಿತ್ರೋತ್ಸವ

ನವದೆಹಲಿ, ಏ.2– 'ಲಾಸ್ ಏಂಜಲೀಸ್ 23ನೇ ಭಾರತೀಯ ಚಿತ್ರೋತ್ಸವ' (IFFLA) ಇದೇ ಮೇ 6ರಿಂದ 10ರವರೆಗೆ ಅಮೆರಿಕದ ಲಾಸ್ ಏಂಜಲೀಸ್‌ನಲ್ಲಿ ಆಯೋಜನೆಗೊಂಡಿದೆ.

ಚಿತ್ರೋತ್ಸವದಲ್ಲಿ 28 ಸಿನಿಮಾಗಳು, ಒಂದು ಡಾಕ್ಯುಮೆಂಟರಿ ಹಾಗೂ 8 ಶಾರ್ಟ್ ಫಿಲಂಗಳು ಪ್ರದರ್ಶನಗೊಳ್ಳಲಿವೆ ಎಂದು IFFLA ಪ್ರಕಟಣೆ ತಿಳಿಸಿದೆ. ದಕ್ಷಿಣ ಏಷ್ಯಾ ಚಲನಚಿತ್ರಗಳ ವೈವಿಧ್ಯಮಯ ಮಿಶ್ರಣದ ಜೊತೆ ಅಂತರರಾಷ್ಟ್ರೀಯ ಚಲನಚಿತ್ರಗಳ ವೈವಿಧ್ಯತೆಯನ್ನು ಇಲ್ಲಿ ಬಿಂಬಿಸಲಾಗುತ್ತದೆ ಎಂದು ತಿಳಿಸಿದೆ. ಪಾಸ್ ಹಾಗೂ ಟಿಕೆಟ್‌ಗಳನ್ನು www.indianfilm festival.orgನಲ್ಲಿ ಪಡೆಯಬಹುದೆಂದು ಪ್ರಕಟಣೆ ತಿಳಿಸಿದೆ

ದೆಹಲಿಯಲ್ಲಿ ಕರ್ನಾಟಕ ಭವನ ಕಟ್ಟಡ ಉದ್ಘಾಟನೆ




ದೆಹಲಿಯಲ್ಲಿ ನೂತನವಾಗಿ ನಿರ್ಮಿಸಿರುವ ಕರ್ನಾಟಕ ಭವನ–1ರ ಕಟ್ಟಡವನ್ನು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಉಪಸ್ಥಿತಿಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಲೋಕಾರ್ಪಣೆ ಮಾಡಿದರು. ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಸಚಿವರಾದ ಸತೀಶ್ ಜಾರಕಿಹೊಳಿ, ಡಾ. ಮಹದೇವಪ್ಪ, ರಾಜಣ್ಣ, ಕೆ.ಎಚ್.ಮುನಿಯಪ್ಪ ಮತ್ತಿತರರು ಹಾಜರಿದ್ದರು.

ಮನೆ ಚಿಲಕ ಮುರಿದು ನಗ–ನಾಣ್ಯ ದೋಚಿ ಪರಾರಿ

ಮೈಸೂರು, ಏ.2(ಎಸ್‌ಪಿಎನ್)– ಮನೆಯೊಂದರ ಬಾಗಿಲ ಚಿಲಕ ಮುರಿದ ಕಳ್ಳರು, ನಗದು ಸೇರಿದಂತೆ 1.50 ಕೆಜಿ ಬೆಳ್ಳಿ ಪದಾರ್ಥಗಳನ್ನು ದೋಚಿ ಪರಾರಿಯಾಗಿರುವ ಘಟನೆ ಚೋರನಹಳ್ಳಿಯಲ್ಲಿ ಸಂಭವಿಸಿದೆ. ಗ್ರಾಮದ ನಿವಾಸಿ ಎಸ್.ಕೆ.ವೀರೇಂದ್ರ ಮನೆಯಲ್ಲಿ ಕಳ್ಳತನ ನಡೆದಿದೆ. ವಿರೇಂದ್ರ ತಮ್ಮ ಕುಟುಂಬ ಸಮೇತ ಮಾ.13 ರಂದು ಬೆಂಗಳೂರಿಗೆ ತೆರಳಿದ್ದರು. ಮಾ.31 ರಂದು ವಾಪಸ್ಸಾದಾಗ ಈ ಕಳ್ಳತನ ಪ್ರಕರಣ ಬೆಳಕಿಗೆ ಬಂದಿದೆ. ಮನೆಯ ಮುಂಬಾಗಿಲಿನ ಚಿಲಕವನ್ನು ಮುರಿದು ಒಳ ನುಗ್ಗಿರುವ ಕಳ್ಳರು, ರೂಮಿನ ಅಲ್ಮೇರಾದಲ್ಲಿದ್ದ ಬೆಳ್ಳಿ ಪದಾರ್ಥ ಹಾಗೂ ನಗದನ್ನು ದೋಚಿದ್ದಾರೆ. ಈ ಸಂಬಂಧ ಮನೆ ಮಾಲೀಕ ವೀರೇಂದ್ರ ಆಲನಹಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದಾರೆ.

ಅಹೋರಾತ್ರಿ ಧರಣಿಯಲ್ಲಿ ಭಾಗಿ



ಬೆಂಗಳೂರು ಫ್ರೀಡಂ ಪಾರ್ಕ್‌ನಲ್ಲಿ ಬೆಲೆ ಏರಿಕೆ ಖಂಡಿಸಿ ಬಿಜೆಪಿ ನಡೆಸುತ್ತಿರುವ ಅಹೋರಾತ್ರಿ ಧರಣಿಯಲ್ಲಿ ಮೈಸೂರಿನ ಕೆ.ಆರ್.ಕ್ಷೇತ್ರದ ಶಾಸಕ ಶ್ರೀವತ್ಸ, ಬಿಜೆಪಿ ಹಿರಿಯ ಮುಖಂಡ ರಘು ಕೌಟಿಲ್ಯ, ಅಲ್ಪಸಂಖ್ಯಾತ ಸಮುದಾಯದ ಮುಖಂಡ ಡಾ. ಅನಿಲ್ ಥಾಮಸ್, ಮೈಸೂರಿನ ಇತರ ನಾಯಕರು ಪಾಲ್ಗೊಂಡಿದ್ದರು.

ಮ್ಯಾನೇಜರ್ 2 ಕೋಟಿ ವಂಚನೆ; ರೆಸಾರ್ಟ್ ಮಾಲೀಕ ಪೊಲೀಸರಿಗೆ ದೂರು

ಮಾಲೀಕನಿಂದಲೇ ಸರ್ಕಾರಕ್ಕೆ ವಂಚನೆ; ಇನ್ಸ್‌ಪೆಕ್ಟರ್‌ಗೆ ಲಂಚ ನೀಡಿ ಪ್ರಕರಣ ದಾಖಲು; ಕಿರುಕುಳದಿಂದ ಬೇಸತ್ತಿರುವ ತಾನು ಆತ್ಮಹತ್ಯೆಗೆ ಮುಂದಾಗುವುದಾಗಿ ಫೇಸ್‌ಬುಕ್ ಲೈವ್‌ನಲ್ಲಿ ಮ್ಯಾನೇಜರ್ ಅಳಲು

ಮಡಿಕೇರಿ, ಏ.2– ತಮ್ಮ ಮ್ಯಾನೇಜರ್ ತಮಗೆ ಎರಡು ಕೋಟಿ ರೂ. ವಂಚಿಸಿದ್ದಾರೆ ಎಂದು ರೆಸಾರ್ಟ್ ಮಾಲೀಕ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದರೆ, ರೆಸಾರ್ಟ್ ಮಾಲೀಕ ಸರ್ಕಾರಕ್ಕೆ ಜಿಎಸ್‌ಟಿ ವಂಚನೆ ಮಾಡಿದ್ದಾರೆ. ಅರಣ್ಯ ಭೂಮಿ ಒತ್ತುವರಿ ಮಾಡಿದ್ದು, ಸರ್ಕಲ್ ಇನ್ಸ್‌ಪೆಕ್ಟರ್‌ಗೆ ಲಂಚ ನೀಡಿ ತನ್ನ ವಿರುದ್ಧ ದೂರು ದಾಖಲಿಸಿದ್ದು, ತಾನು ಆತ್ಮಹತ್ಯೆ ಮಾಡಿಕೊಳ್ಳುವುದಾಗಿ ಮ್ಯಾನೇಜರ್ ಫೇಸ್‌ಬುಕ್ ಲೈವ್‌ನಲ್ಲಿ ಅಳಲು ತೋಡಿಕೊಂಡಿದ್ದಾರೆ.

ವಿವರ: ವಿರಾಜಪೇಟೆಯ ಆರ್ಜಿ ಗ್ರಾಮದಲ್ಲಿರುವ ತಮ್ಮ ಮಾಲೀಕತ್ವದ ಮ್ಯಾಗ್ನೋಲಿಯ ರೆಸಾರ್ಟ್‌ನ ಮ್ಯಾನೇಜರ್ ಪ್ರವೀಣ್ ಅರವಿಂದ್ ಅವರು ತಮಗೆ 2 ಕೋಟಿ ರೂ.ವರೆಗೆ ವಂಚನೆ ಮಾಡಿದ್ದಾರೆ ಎಂದು ವಿರಾಜಪೇಟೆ ಟೌನ್ ಠಾಣೆಗೆ ದೂರು ನೀಡಿರುವ ಮಾಲೀಕ ಶ್ರೀಕಾಂತ್ ಮಂಚಲಾ, ತಮ್ಮ ದೂರಿಗೆ ಪೂರಕವಾಗಿ ಮ್ಯಾನೇಜರ್ ಪ್ರವೀಣ್ ಖರೀದಿಸಿರುವ 44 ಲಕ್ಷ ರೂ. ಮೌಲ್ಯದ ಆಸ್ತಿಯ ಪತ್ರ ಹಾಗೂ 16 ಲಕ್ಷ ರೂ. ಮೌಲ್ಯದ ಜಾಗ ಖರೀದಿಗಾಗಿ ಮಾಡಿಕೊಂಡಿರುವ ಒಪ್ಪಂದ ಪತ್ರವನ್ನು ದೂರಿನಲ್ಲಿ ಲಗತ್ತಿಸಿದ್ದಾರೆ. ಈ ದೂರನ್ನು ಪೊಲೀಸರು ಮಾ.30ರಂದು ದಾಖಲಿಸಿಕೊಂಡಿದ್ದಾರೆ.

ತನ್ನ ವಿರುದ್ಧ ದೂರು ದಾಖಲಾಗಿರುವ ವಿಚಾರ ತಿಳಿಯುತ್ತಿದ್ದಂತೆಯೇ ಫೇಸ್‌ಬುಕ್ ಲೈವ್‌ನಲ್ಲಿ ಮ್ಯಾನೇಜರ್ ಪ್ರವೀಣ್ ಅರವಿಂದ್, ರೆಸಾರ್ಟ್ ಮಾಲೀಕರು ಸರ್ಕಾರಕ್ಕೆ ಜಿಎಸ್‌ಟಿ ಪಾವತಿಸದೇ ವಂಚಿಸಿದ್ದಾರೆ. ಅನುಮತಿ ಪಡೆಯದೇ ಕಾಟೇಜ್‌ಗಳನ್ನು ನಿರ್ಮಾಣ ಮಾಡಿದ್ದಾರೆ. ತಾನು ರೆಸಾರ್ಟ್ ಮಾಲೀಕರಿಗೆ ವಂಚಿಸಿಲ್ಲ. ರೆಸಾರ್ಟ್‌ಗೆ ಬೇರೆ ಮ್ಯಾನೇಜರ್ ನೇಮಕ ಮಾಡಿಕೊಳ್ಳಲು ಅವರು ಮುಂದಾಗಿದ್ದಾರೆ. ನನಗೆ ಬರಬೇಕಾದ ಗ್ರಾಚ್ಯುಯಿಟಿ ಸೇರಿದಂತೆ ಇನ್ನಿತರ ಹಣಕಾಸನ್ನು ನೀಡದೇ ವಂಚಿಸುವ ಸಲುವಾಗಿ ನನ್ನ ಮೇಲೆ ಸುಳ್ಳು ದೂರು ನೀಡಿದ್ದಾರೆ. ನಾನು ಬೆಂಗಳೂರಿನ ರಾಜಾಜಿನಗರದಲ್ಲಿ ಮನೆ ಖರೀದಿಸಲು ಯೂನಿಯನ್ ಬ್ಯಾಂಕ್ ಚಿಕ್ಕಪೇಟೆ ಶಾಖೆಯಲ್ಲಿ 35 ಲಕ್ಷ ರೂ. ಸಾಲ ಪಡೆದಿರುವ ದಾಖಲೆಗಳಿವೆ. 2013ರಲ್ಲಿ ಜಾಗವೊಂದನ್ನು ಖರೀದಿಸಲು ಒಂದೂವರೆ ಲಕ್ಷ ಕೊಟ್ಟು ಅಗ್ರಿಮೆಂಟ್ ಮಾಡಿಕೊಂಡಿದ್ದೆ. ಆದರೆ ಅಲ್ಲಿ ನನಗೆ ಮೋಸವಾಗಿದೆ. ಆ ಅಗ್ರಿಮೆಂಟ್ ಪತ್ರ ಮತ್ತು ಬ್ಯಾಂಕ್‌ನಲ್ಲಿ ಸಾಲ ಮಾಡಿ ಖರೀದಿಸಿರುವ ಪತ್ರವನ್ನು ಪೊಲೀಸರಿಗೆ ಕೊಟ್ಟು ಎಫ್‌ಐಆರ್ ಮಾಡಿಸಿದ್ದಾರೆ. ಈ ಪ್ರಕರಣದಲ್ಲಿ ಸರ್ಕಲ್ ಇನ್ಸ್‌ಪೆಕ್ಟರ್ ನನ್ನ ಬಳಿಯೂ 2 ಲಕ್ಷ ರೂ. ಲಂಚ ಕೇಳಿದ್ದರು. ಪತ್ನಿಯ ಚಿನ್ನ ಅಡವಿಟ್ಟು 90 ಸಾವಿರ ರೂ. ಕೊಡಲು ಹೋದಾಗ ತನಗೆ 2 ಲಕ್ಷ ಬೇಕೇ ಬೇಕು ಎಂದು ತಿಳಿಸಿ ಹಣ ಪಡೆಯಲು ನಿರಾಕರಿಸಿದರು. ಆದರೆ ರೆಸಾರ್ಟ್ ಮಾಲೀಕರಿಂದ ಹಣ ಪಡೆದು ನನ್ನ ಮೇಲೆ ಕೇಸ್ ದಾಖಲಿಸಿದ್ದಾರೆ. ಪೊಲೀಸರು ತಮಿಳುನಾಡಿನಿಂದ ನನ್ನ ಪತ್ನಿಯನ್ನು ವಿರಾಜಪೇಟೆಗೆ ಕರೆತರುತ್ತಿದ್ದಾರೆ. ಈ ಪ್ರಕರಣದಲ್ಲಿ ಪತ್ನಿಯ ಪಾತ್ರವೇ ಇಲ್ಲ. ನನಗೆ ಇನ್ನಿಲ್ಲದ ಕಿರುಕುಳ ನೀಡುತ್ತಿದ್ದಾರೆ. ಇದರಿಂದ ಬೇಸತ್ತಿರುವ ತಾನು ಆತ್ಮಹತ್ಯೆ ಮಾಡಿಕೊಳ್ಳುವುದಾಗಿ ಬೆದರಿಕೆ ಹಾಕಿದ್ದಾರೆ.

ಮ್ಯಾನೇಜರ್ ಪ್ರವೀಣ್ ಫೇಸ್‌ಬುಕ್ ಲೈವ್ ಗಮನಿಸಿದ ವಿರಾಜಪೇಟೆ ಠಾಣೆ ಪೊಲೀಸರು ಕಾರ್ಯಪ್ರವೃತ್ತರಾಗಿ ಮೈಸೂರಿನ ಲಾಡ್ಜ್‌ವೊಂದರಲ್ಲಿದ್ದ ಆತನನ್ನು ವಶಕ್ಕೆ ಪಡೆದು ವಿರಾಜಪೇಟೆಗೆ ಕರೆತಂದಿದ್ದಲ್ಲದೇ, ತಾವು ಕರೆದಾಗ ವಿಚಾರಣೆಗೆ ಆಗಮಿಸಬೇಕೆಂದು ನೋಟಿಸ್ ನೀಡಿ ಕಳುಹಿಸಿಕೊಟ್ಟಿದ್ದಾರೆ.

ಈ ಕುರಿತು 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ಜಿಲ್ಲಾ ಎಸ್ಪಿ ಕೆ.ರಾಮರಾಜನ್, ಮ್ಯಾಗ್ನೋಲಿಯ ರೆಸಾರ್ಟ್‌ಗೆ ಪ್ರವೀಣ್ ಅರವಿಂದ 2010ರಲ್ಲಿ ಕೆಲಸಕ್ಕೆ ಸೇರಿದ್ದು, 2015ರಲ್ಲಿ ಅವರಿಗೆ ಮ್ಯಾನೇಜರ್ ಆಗಿ ಬಡ್ತಿ ನೀಡಿ ತಿಂಗಳಿಗೆ 70 ಸಾವಿರ ರೂ. ಸಂಬಳ ಕೊಡಲಾಗುತ್ತಿತ್ತು. ರೆಸಾರ್ಟ್‌ಗೆ ಬರುವ ಗ್ರಾಹಕರಿಂದ ಹಣ ಪಡೆದು ತಮ್ಮ ವೈಯಕ್ತಿಕ ಖಾತೆಗೆ ವರ್ಗಾಯಿಸಿಕೊಂಡಿರುವ ಮ್ಯಾನೇಜರ್ ಈ ಹಣದಿಂದ ಆಸ್ತಿ ಖರೀದಿ ಮಾಡಿದ್ದಾರೆ ಎಂದು ಮಾಲೀಕ ಶ್ರೀಕಾಂತ್ 20 ದಿನದ ಹಿಂದೆಯೇ ದೂರು ನೀಡಲು ವಿರಾಜಪೇಟೆ ಠಾಣೆಗೆ ಬಂದಿದ್ದರು. ವಂಚನೆಗೆ ಸಂಬಂಧಿಸಿದಂತೆ ಸೂಕ್ತ ದಾಖಲಾತಿ ನೀಡುವಂತೆ ಸೂಚಿಸಿದ ಮೇರೆಗೆ ಅವರು ದಾಖಲೆಗಳೊಂದಿಗೆ ಮಾ.30ರಂದು ನೀಡಿದ ದೂರನ್ನು ಆಧರಿಸಿ ಎಫ್‌ಐಆರ್ ದಾಖಲಿಸಲಾಗಿದೆ ಎಂದರು.

ಅದೇ ವೇಳೆ ಮಾಲೀಕ ಶ್ರೀಕಾಂತ್ ಸರ್ಕಾರಕ್ಕೆ ಜಿಎಸ್‌ಟಿ ವಂಚನೆ ಮಾಡಿದ್ದಾರೆ. ಅರಣ್ಯ ಭೂಮಿ ಒತ್ತುವರಿ ಮಾಡಿಕೊಂಡಿದ್ದಾರೆ ಎಂದು ಮ್ಯಾನೇಜರ್ ಪ್ರವೀಣ್ ಫೇಸ್‌ಬುಕ್ ಲೈವ್‌ನಲ್ಲಿ ಆರೋಪಿಸಿರುವುದಲ್ಲದೇ, ಸರ್ಕಲ್ ಇನ್ಸ್‌ಪೆಕ್ಟರ್ ಲಂಚ ಪಡೆದು ದೂರು ದಾಖಲಿಸಿರುವುದಾಗಿ ಆಪಾದಿಸಿರುವ ಹಿನ್ನೆಲೆಯಲ್ಲಿ ಈ ಪ್ರಕರಣದ ತನಿಖೆಯ ಮೇಲ್ವಿಚಾರಣೆಯನ್ನು ತಾವೇ ಮಾಡುತ್ತಿದ್ದು, ಎಲ್ಲಾ ಆಯಾಮಗಳಲ್ಲೂ ತನಿಖೆ ನಡೆಸಲಾಗುತ್ತದೆ. ಮಾಲೀಕ ಶ್ರೀಕಾಂತ್ ಮತ್ತು ಮ್ಯಾನೇಜರ್ ಪ್ರವೀಣ್‌ನನ್ನು ವಿಚಾರಣೆಗೊಳಪಡಿಸಲಾಗುತ್ತದೆ. ಜಿಎಸ್‌ಟಿ ವಂಚನೆ ಹಾಗೂ ಅರಣ್ಯ ಒತ್ತುವರಿ ಆರೋಪಗಳಿಗೆ ಸಂಬಂಧಿಸಿದಂತೆ ಆಯಾ ಇಲಾಖೆಗಳಿಗೆ ಪತ್ರ ಬರೆದು ತನಿಖೆ ನಡೆಸುವಂತೆ ಮನವಿ ಮಾಡಲಾಗುತ್ತದೆ ಎಂದು ಹೇಳಿದರು.

ನಕ್ಕರೆ ಅದೇ ಸ್ವರ್ಗ

ಹುಡುಗಿ ನೋಡಲು ಹೋದಾಗ ನಡೆದ ಕಥೆ
ಹುಡುಗ : ರೀ.. ನೀವು ಏನು ಓದಿದ್ದೀರಿ?
ಹುಡುಗಿ : TFIAS
ಹುಡುಗ : ಇದು ಯಾವುದೂ ನಾನು ಕೇಳೇ ಇಲ್ಲ?
ಹುಡುಗಿ : ಮದುವೆ ಆದ ಮೇಲೆ ಹೇಳ್ತೀನಿ.
ಹುಡುಗ : ಮದುವೆ ಆಯ್ತು ಈಗಲಾದರೂ ಹೇಳು!
ಹುಡುಗಿ : ಓ.. ಅದಾ... Tenth fail in all subjects

ಮೈಸೂರು ಮಿತ್ರ

ಗುರುವಾರ, 3 ಏಪ್ರಿಲ್ 2025

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ.........

ಪ್ರತಿ ಸಮಸ್ಯೆಯೂ ನಮಗೆ ಜೀವನದಲ್ಲಿ ಒಂದು ಕೊಡುಗೆಯಿದ್ದಂತೆ. ಏಕೆಂದರೆ ಸಮಸ್ಯೆಗಳಿಲ್ಲದೇ ನಾವು ಬೆಳೆಯಲಾರೆವು.– ಟೋನಿ ರಾಬಿನ್ಸ್

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಕುಂಬಳಕಾಯಿ ಕಳ್ಳ ಅಂದರೆ ಹೆಗಲು ಮುಟ್ಟಿ ನೋಡಿಕೊಂಡಂತೆ.

ನಿಮ್ಮ ಪತ್ರಗಳು

■ ಒಳ ಮೀಸಲಾತಿ ಜಾರಿ : ವಿಳಂಬ ನೀತಿ ಆಗದಿರಲಿ

ಮಾನ್ಯರೆ,

ಶತ ಶತಮಾನಗಳಿಂದ ಶೋಷಣೆಗೆ ಒಳಗಾಗಿರುವ ಪರಿಶಿಷ್ಟರು ಸಮಾಜದಲ್ಲಿ ಮುಖ್ಯ ವಾಹಿನಿಗೆ ಬರಲು ಮೀಸಲಾತಿ ಉದ್ದೇಶವನ್ನು ಡಾ.ಅಂಬೇಡ್ಕರ್ ಸಂವಿಧಾನದಲ್ಲಿ ಸೇರಿಸಿದರು. ಅವಕಾಶ ವಂಚಿತ ಸಮುದಾಯಗಳಿಗೆ ಅವರ ಜನಸಂಖ್ಯೆಗೆ ಅನುಗುಣವಾಗಿ ನೀಡುವ ಪ್ರಾತಿನಿಧ್ಯವೇ ಮೀಸಲಾತಿ.

ಈ ಮೀಸಲಾತಿಯನ್ನು ಸಮುದಾಯಗಳ ಜನಸಂಖ್ಯೆಗೆ ಅನುಗುಣವಾಗಿ ನೀಡುವುದೇ ಒಳ ಮೀಸಲಾತಿ. ಸಂವಿಧಾನದ ಆಶಯವಿದು. ಪರಿಶಿಷ್ಟ ಜಾತಿಗಳಲ್ಲಿ 101 ವಿವಿಧ ಉಪ ಜಾತಿಗಳು ನಮೂದಾಗಿದ್ದು, ಶೈಕ್ಷಣಿಕ, ಉದ್ಯೋಗ ಮತ್ತು ಇನ್ನಿತರ ಸರ್ಕಾರದ ಸವಲತ್ತುಗಳು ನ್ಯಾಯಯುತವಾಗಿ ಅಸ್ಪೃಶ್ಯರು ಎನ್ನಿಸಿಕೊಂಡವರಿಗೆ ದಕ್ಕಬೇಕಿರುವುದು ನ್ಯಾಯಯುತ ಸಂಗತಿ. ವಿಪರ್ಯಾಸವೆಂದರೆ, ಕಳೆದ ಮೂರು–ನಾಲ್ಕು ದಶಕಗಳಿಂದ ಪರಿಶಿಷ್ಟ ಜಾತಿಯ ಮೀಸಲಾತಿಯಲ್ಲಿ ಶೇ 70–80 ರಷ್ಟು ಸಾಮಾಜಿಕ, ಶೈಕ್ಷಣಿಕ, ಉದ್ಯೋಗ ಮತ್ತು ರಾಜಕೀಯ ರಂಗ ಸೇರಿದಂತೆ ಬಹುತೇಕ ಎಲ್ಲಾ ವಲಯಗಳಲ್ಲೂ ಸರ್ಕಾರದ ಸವಲತ್ತುಗಳೆಲ್ಲವೂ ಹೆಚ್ಚಾಗಿ ಎರಡ್ಮೂರು ಪ್ರಭಾವಿ ಸಮುದಾಯಗಳೇ ಅನುಭವಿಸುತ್ತಿರುವುದು ಸೋಜಿಗ ಎನಿಸುತ್ತಿದೆ.

ಈ ಹಿನ್ನೆಲೆಯಲ್ಲಿ ಇತ್ತೀಚೆಗಂತೂ ಒಳ ಮೀಸಲಾತಿಯ ತೀವ್ರತೆಯ ಕೂಗು ಹಿಂದೆಂದಿಗಿಂತಲೂ ಹೆಚ್ಚಾಗುತ್ತಿದೆ. ಈ ಬಗ್ಗೆ ಮೂರ್ನಾಲ್ಕು ದಿನಗಳ ಹಿಂದೆ ನಾಗಮೋಹನ್ ದಾಸ್ ಆಯೋಗದ ಮಧ್ಯಂತರ ವರದಿ ರಾಜ್ಯ ಸರ್ಕಾರದ ಕೈ ತಲುಪಿದ್ದು, ಇದು ನೆಪ ಮಾತ್ರಕ್ಕೇ ಅನಿಸದೆ ಸರ್ಕಾರದ ಮುಂದಿನ ನಡೆ ಆಶಾದಾಯಕವಾಗಿರಲಿ. ಈ ಬಗ್ಗೆ ತುರ್ತು ಜಾಗೃತಿ ವಹಿಸಬೇಕಾದ ಅನಿವಾರ್ಯತೆ ಹಿಂದೆಂದಿಗಿಂತಲೂ ಈಗ ಹೆಚ್ಚಾಗಿರುವುದರಿಂದ ರಾಜ್ಯ ಸರ್ಕಾರ ಗಂಭೀರವಾಗಿ ಪರಿಗಣಿಸಬೇಕಿದೆ.!

ಸದ್ಯ, ಆಯೋಗದ ಮಧ್ಯಂತರ ವರದಿಯನ್ನು ಸಚಿವ ಸಂಪುಟ ಅಂಗೀಕರಿಸಿದೆ. ಒಳಮೀಸಲಾತಿಯನ್ನು ಅನುಷ್ಠಾನ ಮಾಡುವ ಬಗ್ಗೆ ಹೊಸ ಸಮೀಕ್ಷೆ ನಡೆಸುವ ಕಾರ್ಯವನ್ನ ಮತ್ತೇ ನಾಗಮೋಹನ್ ದಾಸ್ ಸಮಿತಿಗೆ ಸೂಚಿಸಿದ್ದು ಸಮೀಕ್ಷೆಯನ್ನು 60 ದಿನದೊಳಗೆ ಪೂರ್ಣಗೊಳಿಸಿ ಸರ್ಕಾರಕ್ಕೆ ವರದಿ ಸಲ್ಲಿಸಲು ಎರಡು ತಿಂಗಳವರೆಗೆ ಮತ್ತೊಮ್ಮೆ ವಿಸ್ತರಿಸಿ ಗಡುವು ನೀಡಲಾಗಿದ್ದು ಸರಿಯಷ್ಟೆ.

ಏತನ್ಮಧ್ಯೆ, ಇನ್ನೇನು ಕೆಲವೇ ತಿಂಗಳಲ್ಲಿ ಹಂತ ಹಂತವಾಗಿ ತಾಲೂಕು,ಜಿಲ್ಲಾ ಪಂಚಾಯತ್ ಚುನಾವಣೆ ತದನಂತರ, ಪಟ್ಟಣ ಪಂಚಾಯಿತಿ, ಪುರಸಭೆ,ನಗರಸಭೆ, ಪಾಲಿಕೆ ಚುನಾವಣೆಗಳು ನಡೆಯಲಿವೆ. ಸರ್ಕಾರವು ಒಳ ಮೀಸಲಾತಿ ಜಾರಿ ಅನುಷ್ಠಾನಕ್ಕೆ ತರುವಲ್ಲಿ ಮೀನ–ಮೇಷ ಎಣಿಸುತ್ತಾ ಇನ್ನಷ್ಟು ವಿಳಂಬ ನೀತಿ ಅನುಸರಿಸಿದರೆ ಈಗಾಗಲೇ ಕಳೆದ ಕೆಲವು ವರ್ಷಗಳಿಂದ ನೇಮಕಾತಿ ಪ್ರಕ್ರಿಯೆ ನಡೆಯದೇ ಕಂಗಾಲಾಗಿ ವಯಸ್ಸಿನ ಮಿತಿ ಮೀರಿ ಅರ್ಹತೆ ಕಳೆದುಕೊಳ್ಳುವ ಭೀತಿಯಲ್ಲಿರುವ ಸರ್ಕಾರಿ ಹುದ್ದೆಗಳ ಕನಸು ಹೊತ್ತ ಲಕ್ಷಾಂತರ ಅಭ್ಯರ್ಥಿಗಳ ಪಾಡು ಇನ್ನಷ್ಟು ಕಬ್ಬಿಣದ ಕಡಲೆಯಾಗಲಿದೆ. ಆದ್ದರಿಂದ, ಸಮಸ್ತರ ಏಳಿಗೆಯ ಹಿತದೃಷ್ಟಿಯಿಂದ ನೆರೆಯ ತೆಲಂಗಾಣ ರಾಜ್ಯ ಒಳ ಮೀಸಲಾತಿ ಜಾರಿ ಅನುಷ್ಠಾನದಲ್ಲಿ ಇಟ್ಟ ದಿಟ್ಟ ಹೆಜ್ಜೆ ಹಾಗೂ ಸಾಮಾಜಿಕ ನ್ಯಾಯ ನಮ್ಮ ರಾಜ್ಯಕ್ಕೂ ಮಾದರಿಯಾಗಬೇಕು.

– ಅನಿಲ್ ಕುಮಾರ್, ನಂಜನಗೂಡು.

■ ನಾಲ್ಕಣೆ ಬೆಕ್ಕು ಎಂಟಾಣೆ ಹಾಲು ಕುಡಿಯುವುದೇಗೆ!?

ಮಾನ್ಯರೆ,

ರಾಜ್ಯ ಸರ್ಕಾರ ಜಾರಿಗೆ ತಂದಿರುವ ಪಂಚ ಗ್ಯಾರಂಟಿ ಯೋಜನೆಗಳು ಸಮಾಜದ ಜನರ ಆರ್ಥಿಕ ಶಕ್ತಿಯನ್ನು ಬಲಪಡಿಸಲು ಸಹಕಾರಿಯಾಗಿತ್ತು. ಗೃಹಲಕ್ಷ್ಮಿ, ಗೃಹಜ್ಯೋತಿ, ಶಕ್ತಿಯೋಜನೆ, ಅನ್ನಭಾಗ್ಯ ಹಾಗೂ ಯುವನಿಧಿಯಂತಹ ಯೋಜನೆಗಳು ರಾಜ್ಯದಲ್ಲಿ ಅಭೂತಪೂರ್ವ ಯಶಸ್ಸು ಕಂಡಿತ್ತು. ಸಾಮಾಜಿಕ ನ್ಯಾಯ ದೊರಕಿಸುವ ನಿಟ್ಟಿನಲ್ಲಿ ರಾಜ್ಯದ ಪ್ರತಿಯೊಂದು ವರ್ಗಕ್ಕೂ ತಲುಪುತ್ತಿರುವುದು ಸಂತೋಷದ ವಿಚಾರವಾಗಿತ್ತು. ರಾಜ್ಯದ ಪ್ರತಿಯೊಬ್ಬ ಪ್ರಜೆಯು ಒಂದಲ್ಲಾ ಒಂದು ರೀತಿಯಲ್ಲಿ ಗ್ಯಾರಂಟಿ ಯೋಜನೆಗಳ ಫಲಾನುಭವಿ ಆಗಿದ್ದ. ಈ ಗ್ಯಾರಂಟಿ ಯೋಜನೆಗಳು ಜಾರಿಯಾದಾಗಿನಿಂದ ರಾಜ್ಯದ ಜನರಲ್ಲಿ ಬದುಕಿನ ಬಗ್ಗೆ ಭರವಸೆ ಬೆಳಕು ಮೂಡಿಸಿತ್ತು.

ಆದರೆ ಈ ಗ್ಯಾರಂಟಿ ಯೋಜನೆಗಳು ಜಾರಿಯಾದ ದಿನದಿಂದಲೂ ರಾಜ್ಯ ಸರ್ಕಾರ ರಾಜ್ಯದ ಜನರಿಗೆ ಒಂದಾದ ಮೇಲೊಂದರಂತೆ ಬೆಲೆ ಏರಿಕೆಯ 'ಭಾಗ್ಯವನ್ನು ನೀಡುತ್ತಿರುವುದು ದೌರ್ಭಾಗ್ಯದ ಸಂಗತಿ. ಹಾಲು, ವಿದ್ಯುತ್, ಮೆಟ್ರೋದರ, ಬಸ್ ದರ ಹಾಗೂ ತರಕಾರಿಗಳ ದರಗಳು ಸೇರಿದಂತೆ ಜನರು ದಿನನಿತ್ಯ ಬಳಸುವ ಅಗತ್ಯ ವಸ್ತುಗಳ ದರ ಏರಿಕೆಯ ಶಾಕ್‌ನಿಂದ ಜನತೆ ಬಸವಳಿದಿದ್ದಾರೆ. ಬದುಕು ಸಾಗಿಸುವುದೇ ದುಸ್ತರವಾಗಿದೆ. ಗ್ಯಾರಂಟಿಗಳ ಲಾಭದಿಂದ ರಾಜ್ಯದ ಜನರು ಬದುಕು ಕಟ್ಟಿಕೊಳ್ಳುವ ಸುಸಂದರ್ಭದ ಬೆನ್ನ ಹಿಂದೆಯೇ ರಾಜ್ಯ ಸರ್ಕಾರವು ಒಂದಾದ ಮೇಲೊಂದರಂತೆ ವಸ್ತುಗಳ ಬೆಲೆ ಏರಿಸಿ, ಜನರನ್ನು ಹೈರಾಣಾಗಿಸಿದೆ. ಇದು ಒಂದು ರೀತಿಯಲ್ಲಿ ಹೇಗಾಗಿದೆ ಎಂದರೆ, ನಾಲ್ಕಣೆ ಬೆಕ್ಕು ಎಂಟಾಣೆ ಹಾಲು ಕೊಂಡು ಕುಡಿಯುವ ಪರಿಸ್ಥಿತಿ ಬಂದೊದಗಿದೆ! ಇದನ್ನು ಮನಗಂಡು ರಾಜ್ಯಸರ್ಕಾರ ಜನರು ದಿನ ನಿತ್ಯ ಬಳಸುವ ಅಗತ್ಯ ವಸ್ತುಗಳ ಮೇಲೆ ಆದಷ್ಟು ಬೆಲೆ ನಿಯಂತ್ರಣ ಮಾಡಿ, ಜನರ ಬದುಕನ್ನು ಮತ್ತಷ್ಟು ಹಸನಗೊಳಿಸುವ ನಿಟ್ಟಿನಲ್ಲಿ ಕ್ರಮ ಕೈಗೊಳ್ಳಲಿ.

–ಹರಳಹಳ್ಳಿ ಪುಟ್ಟರಾಜು, ಪಾಂಡವಪುರ.

■ ಕೂಡಲೇ ಈ ಗುಂಡಿ ಮುಚ್ಚಿ

ಮಾನ್ಯರೆ,



ಮೈಸೂರಿನ 50ನೇ ವಾರ್ಡ್‌ನ ಜೈನ್ ಭವನ್ ಕಲ್ಯಾಣ ಮಂಟಪದ ಹಿಂಭಾಗದ ಕಾಕರವಾಡಿ ಬಳಿ ಇರುವ ಈ ಅಪಾಯಕಾರಿ ಗುಂಡಿಯು ಸುಮಾರು 1.5 ಅಡಿ ಅಗಲ ಹಾಗೂ 10 ಅಡಿಗಿಂತ ಹೆಚ್ಚು ಆಳ ಹೊಂದಿದೆ. ಈ ಗುಂಡಿ ನೋಡಿದರೆ ಭಯ ಹುಟ್ಟಿಸುವಂತಿದೆ. ಜನನಿಬಿಡ ರಸ್ತೆಯಾಗಿರುವ ಇಲ್ಲಿ ಅತಿ ಹೆಚ್ಚು ಮಕ್ಕಳು ಓಡಾಡುತ್ತಾರೆ. ಅಲ್ಲದೆ ಶಾಲೆಗಳು ರಜೆ ಇರುವುದರಿಂದ ಆಟ ಆಡುವ ಮಕ್ಕಳ ಸಂಖ್ಯೆ ಹೆಚ್ಚು. ಬಿದ್ದರೆ ಸಲೀಸಾಗಿ ಒಳಗೆ ಬೀಳುವ ಸಂಭವ ಇದೆ. ಪಕ್ಕದಲ್ಲಿ ಮ್ಯಾನ್‌ಹೋಲ್ ಕೂಡ ಹೊಂದಿಕೊಂಡಿದ್ದು, ಮಳೆ ಬಂದರೆ ಗುಂಡಿಯೇ ಕಾಣದೆ ಸುಲಭವಾಗಿ ಒಳಗೆ ಬೀಳಬಹುದು. ವಯಸ್ಸಾದವರಿಗೂ ಕೂಡ ಅಪಾಯ ತಪ್ಪಿದ್ದಲ್ಲ. ಹಾಗಾಗಿ ನಗರಪಾಲಿಕೆ ಕೂಡಲೇ ಈ ಬಗ್ಗೆ ಎಚ್ಚೆತ್ತು ಗುಂಡಿ ಮುಚ್ಚುವ ಕೆಲಸ ಕೈಗೊಂಡು ಮುಂದಾಗಬಹುದಾದ ಅನಾಹುತವನ್ನು ತಪ್ಪಿಸಲೆಂದು ಸ್ಥಳೀಯ ನಿವಾಸಿಗಳ ಮನವಿ.


–ಎನ್.ಕುಮಾರಸ್ವಾಮಿ ಮೈಸೂರು.



ಆರ್.ಪಿ. ಜಗದೀಶ್
ಹಿರಿಯ ಪತ್ರಕರ್ತರು,
ಮೊ:98450 48051

ಸಕಾಲಿಕ

ಜನತೆಗೆ ಸದ್ಯ ದೇವರೇ ಗತಿ...!



> “ ಒಟ್ಟಾರೆ ಕಾಂಗ್ರೆಸ್, ಬಿಜೆಪಿ ಹಾಗೂ ಜೆಡಿಎಸ್ ನಾಯಕರು ತಮ್ಮ ನಡವಳಿಕೆಯಿಂದ ನಡುಬೀದಿಯಲ್ಲಿ ಬೆತ್ತಲಾಗಿದ್ದಾರೆ. ರಾಜ್ಯದ ಜನತೆ ಬಗ್ಗೆ ಇವರಿಗೆ ಕಾಳಜಿ, ಚಿಂತೆ ಇಲ್ಲ. ಅಭಿವೃದ್ಧಿಯತ್ತ ಅವರ ಗಮನವೇ ಇಲ್ಲ. ಏಕೆಂದರೆ, ಚುನಾವಣೆ ಇನ್ನೂ ಮೂರು ವರ್ಷ ಇರುವುದೇ ಇವರ ಆತ್ಮವಿಶ್ವಾಸ, ಧೈರ್ಯ. ಜನತೆ ಇಂಥವರಿಂದ ಏನೂ ನಿರೀಕ್ಷಿಸುವಂತಿಲ್ಲ. ಜನರ ಮತ ನೀರಿನಲ್ಲಿ ಹೋಮ ಮಾಡಿದಂತಾಗಿದೆ. ಜನರಿಗೆ ಸದ್ಯ ದೇವರೇ ಗತಿ.

ಊರೇ ಹೊತ್ತಿ ಉರಿಯುವಾಗ ಕಿಂದರಿಜೋಗಿ ಹಾಡುತ್ತಿದ್ದನಂತೆ. ಹಾಗೆ ಬೆಲೆ ಏರಿಕೆಯ ಬಿಸಿಯಲ್ಲಿ ಜನ ಬೇಯುತ್ತಿರುವಾಗ, ರಾಜ್ಯ ಕಾಂಗ್ರೆಸ್ ನಾಯಕರು ದೆಹಲಿ ಯಾತ್ರೆ ಕೈಗೊಂಡು, ವರಿಷ್ಠರಿಗೆ ತಮ್ಮ ತಪ್ಪು–ಒಪ್ಪುಗಳನ್ನು ಮಂಡಿಸಿ, ಅಧಿಕಾರಕ್ಕಾಗಿ ಕಿತ್ತಾಡುತ್ತಿರುವುದು ವಿಪರ್ಯಾಸ.

ಆಡಳಿತ ಪಕ್ಷವಾದ ಕಾಂಗ್ರೆಸ್ ಹಾಗೂ ವಿರೋಧ ಪಕ್ಷ ಬಿಜೆಪಿ ಎರಡೂ ತಮ್ಮ ಹೊಣೆಗಾರಿಕೆ ಮರೆತು ಬೇಜವಾಬ್ದಾರಿಯಿಂದ ನಡೆದುಕೊಳ್ಳುತ್ತಿವೆ. ಒಡೆದ ಮನೆಯಂತಾಗಿರುವ ಈ ಎರಡೂ ಪಕ್ಷಗಳು ಜನರ ಹಿತದ ಕಡೆ ಗಮನ ಕೊಡದೆ ಅರ್ಥಾತ್ ಜನರ ಹಿತ ಮರೆತಿವೆ. ಜೊತೆಗೆ ಕೆಲವರಿಗೆ 'ಹನಿಟ್ರ್ಯಾಪ್' ಭೂತವೂ ಕಾಡುತ್ತಿದೆ. ಹೀಗಾಗಿ ಆಡಳಿತ ಹಳ್ಳ ಹಿಡಿದಿದೆ.

ಬಿಜೆಪಿ ಸಖ್ಯ ಬೆಳೆಸಿರುವ ಜೆಡಿಎಸ್ ಸೇರಿದಂತೆ ಮೂರೂ ಪಕ್ಷಗಳಲ್ಲಿನ ಒಳ ಬೇಗುದಿ ಯಾವಾಗ ಬೇಕಾದರೂ ಸ್ಫೋಟಿಸಬಹುದು. ಒಡಕು–ಬಂಡಾಯ ನಿಯಂತ್ರಿಸುವ ತಾಕತ್ತು ಇವುಗಳ ಯಾವ ಹೈಕಮಾಂಡ್‌ಗೂ ಇಲ್ಲ. ಅವು ಈಗ ಹಲ್ಲು ಕಿತ್ತ ಹಾವಿನಂತೆ ಬರೀ ಬುಸ್ ಎನ್ನುತ್ತಿವೆ ಅಷ್ಟೆ.

ಕಾಂಗ್ರೆಸ್ ಹೈಕಮಾಂಡ್ ಎನಿಸಿರುವ ಸೋನಿಯಾ ಗಾಂಧಿ, ರಾಹುಲ್ ಗಾಂಧಿ ಹಾಗೂ ಎಐಸಿಸಿ ಅಧ್ಯಕ್ಷರಾದ ಮಲ್ಲಿಕಾರ್ಜುನ ಖರ್ಗೆ ನಾಮಕಾವಸ್ಥೆ. ಏಕೆಂದರೆ ತಮ್ಮ ತಂಟೆಗೆ ಬಾರದಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ತಮ್ಮ ಸುತ್ತ ತಂತಿ ಬೇಲಿ ಹಾಕಿಸಿ ಕರೆಂಟ್ ಬಿಟ್ಟಿದ್ದಾರೆ. ಅಕಸ್ಮಾತ್ ಬೇಲಿ ಮುಟ್ಟಿದರೆ 'ಶಾಕ್' ಖಂಡಿತ. ಏಕೆಂದರೆ ಪಕ್ಷದ ಜೀವನೋಪಾಯಕ್ಕೆ ರಾಜ್ಯ ಕಾಂಗ್ರೆಸ್ 'ಆಕ್ಸಿಜನ್' ಇದ್ದಂತೆ.

ಜೊತೆಗೆ, ನನ್ನನ್ನು ಯಾರಾದರೂ ಮುಟ್ಟಲು, ಇಲ್ಲ ಅಲುಗಾಡಿಸಲು ಬಂದರೆ ಸರ್ಕಾರವೇ ಇಲ್ಲದಂತೆ ಮಾಡುವೆ ಎಂಬ ಸವಾಲು ಹಾಕಿದವರಂತೆ ಕಾಣುತ್ತಿದೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ನಡವಳಿಕೆ. ಜೊತೆಗೆ ಸಚಿವರು ಹಾಗೂ ಶಾಸಕರ ನಡುವಿನ ಭಿನ್ನಾಭಿಪ್ರಾಯ ಮುಖ್ಯಮಂತ್ರಿಗಳಿಗೆ ವರವಾಗಿದೆ. ಜಾತಿ–ಜಾತಿ ನಡುವೆ ಕಿತ್ತಾಟ ಹೆಚ್ಚಾದಷ್ಟೂ ಮುಖ್ಯಮಂತ್ರಿಗಳ ಖುರ್ಚಿ ಭದ್ರ ಎಂಬುದು ಅವರಿಗೂ ಖಾತರಿಯಾಗಿದೆ. ಹಾಗಾಗಿ ಒಡಕಿಗೆ ತುಪ್ಪ ಸುರಿದು ತಮಾಷೆ ನೋಡುತ್ತಿದ್ದಾರೆ.

ಆಳುವ ಪಕ್ಷದ ಶಾಸಕರ ಸಂಖ್ಯಾಬಲ ಮುಖ್ಯಮಂತ್ರಿಗಳಿಗೆ ಆನೆಯ ಬಲ ತಂದು ಕೊಟ್ಟಿದೆ. ಅಲ್ಲದೆ ಸುಮಾರು 35 ಸಚಿವರು, 75 ಮಂದಿ ನಿಗಮ ಮಂಡಳಿ ಅಧ್ಯಕ್ಷ ಸ್ಥಾನ ಹೊಂದಿರುವ ಶಾಸಕರು ಹೀಗೆ ಎಲ್ಲರೂ ಫಲಾನುಭವಿಗಳೇ. ಹಾಗಾಗಿ ಮುಲಾಜಿನಲ್ಲಿರುವ ಶಾಸಕರ ಜುಟ್ಟು–ಗುಟ್ಟು ಹಾಗೂ ಬಾಲ ಬೆಳೆಯದಂತೆ 'ಕತ್ತರಿ' ಹಿಡಿದಿರುವುದರಿಂದ ಅವರ ಕೈಗೊಂಬೆಯಾಗಿದ್ದಾರೆ.

ಈ ಹಿನ್ನೆಲೆಯಲ್ಲಿಯೇ 'ಸಿದ್ದು' ನನ್ನನ್ನು ಇನ್ನೂ ಮೂರು ವರ್ಷ ಯಾರೂ ಅಲುಗಾಡಿಸಲು ಸಾಧ್ಯವಿಲ್ಲ, ನಾನೇ ಮುಖ್ಯಮಂತ್ರಿಯಾಗಿ ಮುಂದುವರಿಯುವೆ ಎಂದು ರಾಜಾರೋಷದಿಂದ ಗಟ್ಟಿ ಧನಿಯಲ್ಲಿ ಹೇಳುತ್ತಿದ್ದಾರೆ. ಜೊತೆಗೆ ರಾಜಕೀಯದ ಮಾಂತ್ರಿಕ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರ ರಾಜಕೀಯ ಗರಡಿಯಲ್ಲಿ ಪಳಗಿರುವ 'ಸಿದ್ದು', ಗೌಡರ ಎಲ್ಲಾ ಪಟ್ಟುಗಳನ್ನು ಕರಗತ ಮಾಡಿಕೊಂಡಿದ್ದಾರೆ.

ಗೌಡರಿಂದ ಕಲಿತ ಪಟ್ಟುಗಳನ್ನೇ ಅವರಿಗೆ ತಿರುಮಂತ್ರ ಮಾಡುವ ತಂತ್ರಗಾರಿಕೆಯನ್ನು ಅನುಭವದಿಂದ ಕರಗತ ಮಾಡಿಕೊಂಡಿದ್ದಾರೆ. ಅಲ್ಲದೆ ಗೌಡರ ಕುಟುಂಬದ 'ಜಾತಕ' ಹಿಡಿದುಕೊಂಡು ಅವರ ಕುಟುಂಬಕ್ಕೆ ಚಳ್ಳೆಹಣ್ಣು ತಿನ್ನಿಸುತ್ತಿದ್ದಾರೆ. ಇಡೀ ಕುಟುಂಬದ ನಿದ್ದೆಗೆ ಭಂಗ ತರುವಲ್ಲಿ ಯಶಸ್ವಿಯಾಗಿದ್ದಾರೆ.

ಜೊತೆಗೆ ತಮ್ಮ ಖುರ್ಚಿಗೆ ಅಡ್ಡಲಾಗಿದ್ದ ಮೈಸೂರು ಮುಡಾ ಹಗರಣದಿಂದ ಸದ್ಯಕ್ಕೆ ಪಾರಾಗಿರುವ ಧೈರ್ಯವು ಇದೆ. ಹೀಗಾಗಿ ಕಾಂಗ್ರೆಸ್ ಹೈಕಮಾಂಡ್‌ಗೆ 'ಸಿದ್ದು' ಮುಟ್ಟಿದರೆ ತಿರುಗುಬಾಣವಾಗಿ ಎಲ್ಲಿ ಭಸ್ಮಾಸುರನಂತೆ ತಮ್ಮನ್ನೇ ಸುಡುತ್ತದೆಯೋ ಎಂಬ ಭೀತಿ ಕಾಡುತ್ತಿದೆ.

ಮುಖ್ಯಮಂತ್ರಿ ಖುರ್ಚಿಗಾಗಿ ಕನವರಿಸುತ್ತಿದ್ದ ಡಿ.ಕೆ.ಶಿವಕುಮಾರ್‌ಗೆ ತೀರ್ಥಯಾತ್ರೆಗಳು ಇನ್ನೂ ಫಲ ಕೊಡುತ್ತಿಲ್ಲ. ಈ ವಿಚಾರದಲ್ಲಿ ಹೈಕಮಾಂಡ್ ಕೂಡ ನಿಸ್ಸಹಾಯಕವಾಗಿ ಕಣ್ಮುಚ್ಚಿದಂತಿದೆ. ಹೈಕಮಾಂಡ್ ನಂಬಿ ಅಡ್ಡ ಕತ್ತರಿಯಲ್ಲಿ ಸಿಕ್ಕಿರುವ ಡಿ.ಕೆ.ಶಿವಕುಮಾರ್, ಇತ್ತ ಮುಖ್ಯಮಂತ್ರಿ ಅವರನ್ನು ಎದುರು ಹಾಕಿಕೊಳ್ಳಲಾಗದೇ ಕಂಗಾಲಾಗಿ ತಾಳ್ಮೆಗೆ ಶರಣಾಗಿದ್ದಾರೆ.

ಹೈಕಮಾಂಡ್ ಆಜ್ಞೆಯನ್ನು ಶಿರಸಾ ವಹಿಸಿ ಹಲವು ರಾಜ್ಯಗಳ ರಾಜಕೀಯ ಸಮಸ್ಯೆಗಳನ್ನು ಬಗೆಹರಿಸಿ ಆಪದ್ಬಾಂಧವ ಎನಿಸಿಕೊಂಡಿದ್ದ ಶಿವಭಕ್ತ ಡಿ.ಕೆ.ಶಿವಕುಮಾರ್‌ಗೆ ಇನ್ನು ಯಾವ ದೇವರು 'ಕೈ' ಹಿಡಿಯಲು ಮುಂದಾಗಿಲ್ಲ ಎಂಬ ಕೊರಗು ಕಾಡುತ್ತಿದೆ. ಹಾಗಾಗಿ ಅವರ ಆಸೆ 'ನಾಳೆ ಬಾ' ಎನ್ನುವಂತಾಗಿದೆ.

ಆಡಳಿತ ಪಕ್ಷದ ಗುಂಪುಗಾರಿಕೆ, ಒಳ ಜಗಳ, ಖುರ್ಚಿಗಾಗಿ ಕಿತ್ತಾಟ ಒಂದು ಕಡೆಯಾದರೆ, ಇನ್ನೊಂದೆಡೆ ಬಿಜೆಪಿ ಹಾಲಿ ಅಧ್ಯಕ್ಷ ವಿಜಯೇಂದ್ರ ಅವರ ಬದಲಾವಣೆ ಕೂಗಿಗೆ ಸದ್ಯಕ್ಕೆ ಲಗಾಮು ಬಿದ್ದಿದೆ. ಆದರೆ ಗುಂಪುಗಾರಿಕೆಗೆ ಇನ್ನೂ ಕಡಿವಾಣ ಬಿದ್ದಿಲ್ಲ.

ಬಿಜೆಪಿಯೇ ಭಿನ್ನ ಪಕ್ಷ ಎಂದು ಬೀಗುತ್ತಿದ್ದ ನಾಯಕರು ಈಗ ಹಾದಿ–ಬೀದಿಯಲ್ಲಿ ರಂಪ–ರಾದ್ಧಾಂತ ಮಾಡುತ್ತಾ ನಗೆ ಪಾಟಲಿಗೆ ಗುರಿಯಾಗಿದ್ದಾರೆ. ಹೈಕಮಾಂಡ್‌ಗೂ ದಾರಿ ಕಾಣದಾಗಿದೆ. ಬಿ.ಎಸ್.ಯಡಿಯೂರಪ್ಪ ಒಬ್ಬರೇ ಹೈಕಮಾಂಡ್‌ನ ಆಶಾಕಿರಣ. ಯತ್ನಾಳ್ ಉಚ್ಚಾಟಿಸಿ, ತಮ್ಮ ದಾರಿ ಸುಗಮ ಮಾಡಿಕೊಂಡಿದ್ದಾರೆ. ಎಲ್ಲಾ ಸರಿಹೋಯಿತು ಎಂದು ಭಾವಿಸುವಂತಿಲ್ಲ.

ಒಟ್ಟಾರೆ ಕಾಂಗ್ರೆಸ್, ಬಿಜೆಪಿ ಹಾಗೂ ಜೆಡಿಎಸ್ ನಾಯಕರು ತಮ್ಮ ನಡವಳಿಕೆಯಿಂದ ನಡುಬೀದಿಯಲ್ಲಿ ಬೆತ್ತಲಾಗಿದ್ದಾರೆ. ರಾಜ್ಯದ ಜನತೆ ಬಗ್ಗೆ ಇವರಿಗೆ ಕಾಳಜಿ, ಚಿಂತೆ ಇಲ್ಲ. ಅಭಿವೃದ್ಧಿಯತ್ತ ಅವರ ಗಮನವೇ ಇಲ್ಲ. ಏಕೆಂದರೆ, ಚುನಾವಣೆ ಇನ್ನೂ ಮೂರು ವರ್ಷ ಇರುವುದೇ ಇವರ ಆತ್ಮವಿಶ್ವಾಸ, ಧೈರ್ಯ. ಜನತೆ ಇಂಥವರಿಂದ ಏನೂ ನಿರೀಕ್ಷಿಸುವಂತಿಲ್ಲ. ಜನರ ಮತ ನೀರಿನಲ್ಲಿ ಹೋಮ ಮಾಡಿದಂತಾಗಿದೆ. ಜನರಿಗೆ ಸದ್ಯ ದೇವರೇ ಗತಿ.

ಆಯುರ್ವೇದ ಚಿಕಿತ್ಸೆ ವಿಶ್ವಕ್ಕೆ ಪರಿಚಯಿಸಬೇಕು

ಆಯುರ್ ವೈದ್ಯ ಸಮ್ಮೇಳನದಲ್ಲಿ ಡಾ.ಚಂದ್ರಶೇಖರ್ ಸಲಹೆ

ಮೈಸೂರು,ಏ.2(ಬಿಎಲ್‌ಯು)– ಸಾವಿರಾರು ವರ್ಷಗಳ ಐತಿಹಾಸಿಕ ಹಾಗೂ ಪೌರಾಣಿಕ ಹಿನ್ನೆಲೆ ಇರುವ ಆಯುರ್ವೇದ ಚಿಕಿತ್ಸೆಯನ್ನು ಇಡೀ ವಿಶ್ವಕ್ಕೆ ಪರಿಚಯಿಸಬೇಕು ಎಂದು ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಆಯುರ್ವೇದ ವೈದ್ಯ ಡಾ.ಚಂದ್ರಶೇಖರ್ ಸಲಹೆ ನೀಡಿದರು.

ನಗರದ ಜೆ.ಕೆ.ಮೈದಾನದ ಮೈಸೂರು ಮೆಡಿಕಲ್ ಕಾಲೇಜಿನ ಅಮೃತ ಮಹೋತ್ಸವ ಸಭಾಂಗಣದಲ್ಲಿ ನಡೆದ ನ್ಯಾಷನಲ್ ಇಂಟಿಗ್ರೇಟೆಡ್ ಮೆಡಿಕಲ್ ಅಸೋಸಿಯೇಷನ್‌ನ ಆಯುರ್ ವೈದ್ಯ ಸಮ್ಮೇಳನದಲ್ಲಿ ಮಾತನಾಡಿದ ಅವರು, ನಮ್ಮ ಭಾರತದ ಮುಂದಿನ ಪೀಳಿಗೆ ಆಯುರ್ವೇದ ಚಿಕಿತ್ಸೆ ಮೇಲೆ ಅವಲಂಬಿತವಾಗುವಂತೆ ಮಾಡಬೇಕು ಎಂದರು.

ಅಲೋಪತಿ ವೈದ್ಯರು ಕೂಡ ಆಯುರ್ವೇದ ಚಿಕಿತ್ಸೆ ಒಪ್ಪುತ್ತಾರೆ. ತಮ್ಮ ಮಕ್ಕಳಿಗೆ ಅನಾರೋಗ್ಯ ಉಂಟಾದಾಗ ಆಲೋಪತಿ ವೈದ್ಯರು ನನ್ನ ಬಳಿ ಬಂದು ಆಯುರ್ವೇದ ಚಿಕಿತ್ಸೆ ಕೊಡಿಸುತ್ತಾರೆ. ದೀರ್ಘಕಾಲದ ರೋಗಗಳಿಗೆ ಆಯುರ್ವೇದ ಚಿಕಿತ್ಸೆ ರಾಮಬಾಣ. ಇದು ಆಯುರ್ವೇದ ಚಿಕಿತ್ಸೆಯ ಶಕ್ತಿ ಎಂದು ಅಭಿಪ್ರಾಯಪಟ್ಟರು.



ಆದರೆ ಕೆಲವರು ಆಯುರ್ವೇದ ಚಿಕಿತ್ಸೆಯನ್ನು ಅಳಿವಿನಂಚಿನಲ್ಲಿದೆ ಎಂದು ಹೇಳುತ್ತಾರೆ. ಆದರೆ ಸಾವಿರಾರು ವರ್ಷಗಳ ಇತಿಹಾಸವಿರುವ ಆಯುರ್ವೇದ ಭವಿಷ್ಯದಲ್ಲೂ ತನ್ನ ಶಕ್ತಿ ಉಳಿಸಿಕೊಳ್ಳಲಿದೆ ಎಂದು ತಿಳಿಸಿದರು.

ಆಯುರ್ ವೈದ್ಯ ಸಮ್ಮೇಳನ ಉದ್ಘಾಟಿಸಿದ ಶಾಸಕ ಹರೀಶ್‌ಗೌಡ ಅವರು ಆಯುರ್ವೇದದ ಔಷಧದ ಮಹತ್ವವನ್ನು ವಿವರಿಸಿದರು. ನ್ಯಾಷನಲ್ ಇಂಟಿಗ್ರೇಟೆಡ್ ಮೆಡಿಕಲ್ ಅಸೋಸಿಯೇಷನ್‌ನ ಕೆಎಸ್‌ಬಿ ಅಧ್ಯಕ್ಷ ಡಾ.ಸಿದ್ದಪ್ಪ, ಅಸೋಸಿಯೇಷನ್ ಅಧ್ಯಕ್ಷ ಡಾ.ಜಗದೀಶ್ ನಾಯಕ್, ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಡಾ.ಎ.ಎಸ್.ಚಂದ್ರಶೇಖರ್, ಅಸೋಸಿಯೇಷನ್ ಕರ್ನಾಟಕ ಶಾಖೆ ಪ್ರಧಾನ ಕಾರ್ಯದರ್ಶಿ ಡಾ.ರಾಧಿಕಾ, ಮಹಿಳಾ ವಿಭಾಗದ ಅಧ್ಯಕ್ಷೆ ಡಾ.ಪಾರ್ವತಿ, ಪ್ರಧಾನ ಕಾರ್ಯದರ್ಶಿ ಡಾ.ಮಂಗಳಾ, ಖಜಾಂಚಿ ಡಾ.ಲಲಿತಾ ರಮೇಶ್ ಉಪಸ್ಥಿತರಿದ್ದರು.

> “ ವಿದೇಶದಿಂದ ಆಮದಾಗುವ ಬಹಳಷ್ಟು ಅಲೋಪತಿ ಔಷಧಗಳು ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುತ್ತದೆ. ಈ ಹಿನ್ನೆಲೆ ಕೇಂದ್ರ ಸರ್ಕಾರ ಬಹಳಷ್ಟು ಔಷಧಗಳ ಮಾರಾಟಕ್ಕೆ ನಿಷೇಧ ಹೇರಿದೆ. ಆದರೆ ಡ್ರಗ್ಸ್ ಮಾಫಿಯಾ ನಿಷೇಧಿತ ಔಷಧಿಗಳನ್ನು ಮಾರಾಟ ಮಾಡುತ್ತಿದೆ. ಆಲೋಪತಿ ಬದಲು ಆಯುರ್ವೇದ ಚಿಕಿತ್ಸೆ ಅನುಸರಿಸಬೇಕು. ಜಾಂಡಿಸ್‌ಗೆ ಆಲೋ ಪತಿಯಲ್ಲಿ ತಿಂಗಳುಗಟ್ಟಲೆ ಚಿಕಿತ್ಸೆ ನೀಡ ಬೇಕು. ಅದೇ ಆಯುರ್ವೇದ ಔಷಧದಿಂದ ಕೆಲವೇ ದಿನದಲ್ಲಿ ರೋಗ ಗುಣಪಡಿಸಬಹುದು.
>
> –ಡಾ.ಚಂದ್ರಶೇಖರ್, ಆಯುರ್ವೇದ ವೈದ್ಯ

ರಾಜ್ಯದಲ್ಲಿ ರೌಡಿಸಂ ಮಟ್ಟ ಹಾಕಲು ಪೊಲೀಸರಿಗೆ ಎಲ್ಲಾ ಸಹಾಯ–ಸವಲತ್ತು

● ಮುಖ್ಯಮಂತ್ರಿ ಸಿದ್ದರಾಮಯ್ಯ ಘೋಷಣೆ ● ಪೊಲೀಸ್ ಧ್ವಜ ದಿನಾಚರಣೆಯಲ್ಲಿ 'ಮುಖ್ಯಮಂತ್ರಿ ಪದಕ' ವಿತರಣೆ

ಬೆಂಗಳೂರು, ಏ.2(ಕೆಎಂಶಿ)–ರಾಜ್ಯದಲ್ಲಿ ರೌಡಿಸಂ ಸಂಪೂರ್ಣ ಮಟ್ಟ ಹಾಕಲು ಪೊಲೀಸ್ ಇಲಾಖೆಗೆ ಎಲ್ಲ ಅಗತ್ಯ ಸಹಕಾರ, ಸವಲತ್ತು ನೀಡಲು ಸರ್ಕಾರ ಸಿದ್ಧವಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಇಂದಿಲ್ಲಿ ಘೋಷಿಸಿದರು.

ಪೊಲೀಸ್ ಧ್ವಜ ದಿನಾಚರಣೆ ಕಾರ್ಯಕ್ರಮದಲ್ಲಿ ಮೂರು ವರ್ಷಗಳ ಅವಧಿಯ ಮುಖ್ಯಮಂತ್ರಿಗಳ ಪದಕಗಳನ್ನು ಒಟ್ಟಾಗಿ ಪ್ರದಾನ ಮಾಡಿ ಮಾತನಾಡಿದ ಅವರು, ಕರ್ತವ್ಯಲೋಪ ಸಹಿಸುವುದಿಲ್ಲ, ಪೊಲೀಸ್ ಬೀಟ್ ವ್ಯವಸ್ಥೆ ಇನ್ನಷ್ಟು ಪರಿಣಾಮಕಾರಿಯಾಗಿ ನಿರ್ವಹಿಸಿ ಎಂದರು.

ತಂತ್ರಜ್ಞಾನ ಬೆಳೆದಂತೆ ಸೈಬರ್ ಅಪರಾಧಗಳೂ ಹೆಚ್ಚುತ್ತಿವೆ, ಅದೇ ತಂತ್ರಜ್ಞಾನ ಬಳಸಿಕೊಂಡು ಸೈಬರ್ ಅಪರಾಧಗಳನ್ನು ನಿಗ್ರಹಿಸಬೇಕು. ಮಾದಕ ವಸ್ತು ಮುಕ್ತ ರಾಜ್ಯ ಮಾಡುವುದು ನನ್ನ ಗುರಿ, ಮಾದಕ ವಸ್ತು ಜಾಲವನ್ನು ಬೇರು ಸಮೇತ ಕಿತ್ತುಹಾಕಲು ಪೊಲೀಸರು ಪಣ ತೊಡಬೇಕು.

ಕಳೆದ 2 ವರ್ಷಗಳಲ್ಲಿ ಅಪರಾಧಗಳ ಸಂಖ್ಯೆ ಇಳಿಮುಖವಾಗುತ್ತಿದೆ. ಆದರೂ, ಇನ್ನಷ್ಟು ಕಡಿಮೆ ಆಗಬೇಕು. ಕಾನೂನು–



ಸುವ್ಯವಸ್ಥೆ, ಬಂಡವಾಳ ಹೂಡಿಕೆ, ಅಭಿವೃದ್ಧಿ ಮತ್ತು ಉದ್ಯೋಗ ಸೃಷ್ಟಿ ಒಂದಕ್ಕೊಂದು ನೇರ ಸಂಬಂಧ ಹೊಂದಿದ್ದು, ಶಾಂತಿ ಪಾಲನೆ ಉತ್ತಮವಾಗಿರಬೇಕು.

ಕರ್ನಾಟಕ ಪೊಲೀಸ್ ಕೌಶಲ ಮತ್ತು ವೃತ್ತಿಪರತೆಯನ್ನು ಜರ್ಮನಿ ಪ್ರಧಾನಿ ಹಾಗೂ ಪ್ರತಿನಿಧಿಗಳು ಶ್ಲಾಘಿಸಿರುವುದು ಹೆಮ್ಮೆಯ ವಿಷಯ.

ಪದಕ ಪಡೆದವರು ಬೇರೆಯವರಿಗೆ ಪ್ರೇರಣೆ ಆಗಬೇಕು, ಮುಖ್ಯಮಂತ್ರಿ ಪದಕ ಪಡೆಯಲು ದಕ್ಷತೆ, ಪ್ರಾಮಾಣಿಕತೆಯಿಂದ ವೃತ್ತಿಪರತೆ ತೋರಿಸಬೇಕು. ಪೊಲೀಸರ ಅಗತ್ಯ ಬೇಡಿಕೆಗಳ ಈಡೇರಿಕೆಗೆ ಸರ್ಕಾರ ಸದಾ ಸಿದ್ಧವಿದೆ, ಈ ಬಾರಿಯ ಬಜೆಟ್‌ನಲ್ಲಿ ಇಲಾಖೆ ಮತ್ತು ಸಿಬ್ಬಂದಿ ಅನುಕೂಲಕ್ಕೆ ಘೋಷಿಸಿರುವ ಎಲ್ಲ ಕಾರ್ಯಕ್ರಮಗಳನ್ನು ಜಾರಿ ಮಾಡಲಾಗುವುದು ಎಂದರು.

---

18 ಶಾಸಕರ ಅಮಾನತು ಖಂಡಿಸಿ ಬಿಜೆಪಿ ಪ್ರತಿಭಟನೆ

ಸ್ಪೀಕರ್ ಕಾಂಗ್ರೆಸ್ ಪಕ್ಷದ ಕೈಗೊಂಬೆಯಾಗಿ ವರ್ತಿಸುತ್ತಿದ್ದಾರೆ

ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ ಕಿಡಿ



ಬೆಂಗಳೂರು, ಏ.2–ಸ್ಪೀಕರ್ ಕಾಂಗ್ರೆಸ್ ಪಕ್ಷದ ಕೈಗೊಂಬೆಯಾಗಿ ವರ್ತಿಸುತ್ತಿದ್ದಾರೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಹಾಗೂ ಶಾಸಕ ಬಿ.ವೈ. ವಿಜಯೇಂದ್ರ ಕಿಡಿಕಾರಿದ್ದಾರೆ.

ಬಿಜೆಪಿಯ 18 ಶಾಸಕರನ್ನು 6 ತಿಂಗಳ ಕಾಲ ಅಮಾನತು ಮಾಡಿದ ಕ್ರಮವನ್ನು ಖಂಡಿಸಿ ಬೆಂಗಳೂರಿನ ವಿಧಾನ ಸೌಧದ ಕೆಂಗಲ್ ಹನುಮಂತಯ್ಯ ಪ್ರತಿಮೆ ಬಳಿ ಇಂದು ಪ್ರತಿಭಟನೆ ನಡೆಯಿತು. ಈ ಸಂದರ್ಭದಲ್ಲಿ ಮಾಧ್ಯಮಗಳ ಜೊತೆ ಮಾತನಾಡಿದ ಅವರು, ಬಿಜೆಪಿಯ 18 ಶಾಸಕರ ಅಮಾನತು ಕ್ರಮ ಸಂವಿಧಾನ ಬಾಹಿರ ಎಂದು ಆಕ್ಷೇಪಿಸಿದರು. ಜನಪ್ರತಿನಿಧಿಯನ್ನು 6 ತಿಂಗಳ ಕಾಲ ಅಮಾನತು ಮಾಡಿ, ವಿಧಾನಸೌಧದ ಮೊಗಸಾಲೆಗೂ ಬರಬಾರದೆಂದು ಆದೇಶ ಮಾಡಿದ್ದಾರೆ. ಸ್ಪೀಕರ್ ಅವರು ಖಂಡಿತ ವಾಗಿ ಆಡಳಿತ ಪಕ್ಷದ ಕೈಗೊಂಬೆಯಾಗಿ ಹಾಗೂ ಮುಖ್ಯಮಂತ್ರಿಗಳನ್ನು ತೃಪ್ತಿಪಡಿಸಲು ಕಾನೂನು ಬಾಹಿರವಾಗಿ ಹಾಗೂ ಸಂವಿಧಾನಕ್ಕೆ ವಿರುದ್ಧವಾಗಿ ಈ ರೀತಿ ಆದೇಶ ಮಾಡಿದ್ದಾರೆ ಎಂದು ಟೀಕಿಸಿದರು.

ಅಮಾನತು ಹಿಂಪಡೆಯು ವುದಾಗಿ ಹೇಳಿಕೆ ನೀಡಿದ್ದ ಸ್ಪೀಕರ್ ಅವರು ಯಾತಕ್ಕೋಸ್ಕರ ಕಾಯುತ್ತಿದ್ದಾರೆ ಎಂದು ಪ್ರಶ್ನಿಸಿದರು. ತಮ್ಮ ನಿರ್ಣಯ ಸಂವಿಧಾನ ವಿರೋಧಿ ಎಂಬುದು ಸ್ಪೀಕರ್ ಅವರಿಗೂ ಅರ್ಥವಾಗಿದೆ. ಆದರೂ ಕೂಡ ಆಡಳಿತ ಪಕ್ಷದ ಒತ್ತಡಕ್ಕೆ ಮಣಿದು ಅವರು ಭಂಡತನ ಪ್ರದರ್ಶಿಸುತ್ತಿದ್ದಾರೆ ಎಂದು ಆರೋಪಿಸಿದರು.

ಇದು ಮತದಾರರಿಗೆ ಮಾಡಿದ ಅವಮಾನ ಎಂದರಲ್ಲದೆ, 18 ಶಾಸಕರ ಅಮಾನತನ್ನು ತಕ್ಷಣ ಹಿಂದಕ್ಕೆ ಪಡೆಯಲು ಆಗ್ರಹಿಸಿದರು. ಅಮಾನತು ಹಿಂಪಡೆಯುವ ವರೆಗೆ ಬಿಜೆಪಿಯ ಶಾಸಕರು ಕಮಿಟಿ ಮೀಟಿಂಗ್‌ನಲ್ಲಿ ಭಾಗವಹಿಸುವುದಿಲ್ಲ ಎಂದು ಪಕ್ಷದ ನಿರ್ಧಾರವನ್ನು ತಿಳಿಸಿದರು.

ವಿಪಕ್ಷ ನಾಯಕ ಆರ್.ಅಶೋಕ್ ಮಾತನಾಡಿ, ಹಿಂದೆ ಸ್ಪೀಕರ್ ಸ್ಥಾನದಲ್ಲಿದ್ದ ಮಂಗಳೂರಿನ ಯೋಗೀಶ್ ಭಟ್ ಅವರನ್ನು ಎಳೆದಾಡಿ ಮೈಕಿನಿಂದ ಹೊಡೆದಿದ್ದರು. ಧರ್ಮೇಗೌಡರು ತಮ್ಮನ್ನು ಎಳೆದಾಡಿದ್ದರಿಂದ ಬೇಸತ್ತು ಆತ್ಮಹತ್ಯೆ ಮಾಡಿಕೊಂಡಿದ್ದರು. ಸಿದ್ದರಾಮಯ್ಯ ನವರು ಪೊಲೀಸ್ ಕಮೀಷನರ್ ಬ್ಯಾಡ್ಜ್ ಕಿತ್ತು ಹಾಕಿ, ಬಾಗಿಲನ್ನು ಕಾಲಿನಲ್ಲಿ ಒದ್ದಿದ್ದರು ಎಂದು ನೆನಪಿಸಿಕೊಂಡರು. ನಮ್ಮ ನ್ಯಾಯಯುತ ಹೋರಾಟ ಮುಂದುವರಿಯಲಿದೆ. ರಾಜ್ಯಪಾಲರನ್ನೂ ಭೇಟಿ ಮಾಡುತ್ತೇವೆ ಎಂದು ಪ್ರಕಟಿಸಿದರು.

ನಮ್ಮ 18 ಶಾಸಕರನ್ನು ಅಮಾನತು ಮಾಡಿದ್ದೀರಿ. ಸದನ ನಡೆಯದೆ ಇರುವಾಗ ಸ್ಪೀಕರ್ ಪೀಠದಲ್ಲಿ ಕುಳಿತು ನಿಮ್ಮ ಸಂಬಂಧಿಗಳು, ಧರ್ಮಗುರುಗಳ ಜೊತೆ ಫೋಟೊ ತೆಗೆಸಿಕೊಳ್ಳುವುದು ನ್ಯಾಯವೇ? ಇದು ಪ್ರಜಾಪ್ರಭುತ್ವವೇ? ಇಂಥ ಅಧಿಕಾರ ಕೊಟ್ಟವರು ಯಾರು ಎಂದು ಪ್ರಶ್ನಿಸಿದರು.

ವಿಧಾನಪರಿಷತ್ ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ಮತ್ತು ಎಲ್ಲ ಶಾಸಕರು ಹಾಗೂ ವಿಧಾನಪರಿಷತ್ತಿನ ಸದಸ್ಯರು ಭಾಗವಹಿಸಿದ್ದರು.

ರಾಜಣ್ಣ ಪುತ್ರನ ಹತ್ಯೆಗೆ ಸಂಚು ರೂಪಿಸಿದ್ದ ಸೋಮ ಸರೆಂಡರ್; ಮಾಸ್ಟರ್ ಮೈಂಡ್ ಭರತ್ ಬಂಧನ

ತುಮಕೂರು,ಏ.2– ಎಂಎಲ್‌ಸಿ ರಾಜೇಂದ್ರ ಹತ್ಯೆಗೆ ಸುಪಾರಿ ನೀಡಿದ್ದ ಪ್ರಕರಣದ ತನಿಖೆಯನ್ನು ಪೊಲೀಸರು ಚುರುಕುಗೊಳಿಸಿದ್ದಾರೆ. ಈ ನಡುವೆಯೇ ಸುಪಾರಿಗೆ ಸಂಚು ರೂಪಿಸಿದ್ದ ಸ್ಫೋಟಕ ಆಡಿಯೋ ಕೂಡಾ ರಿಲೀಸ್ ಆಗಿತ್ತು. ಆಡಿಯೋದಲ್ಲಿ ಮಾತಾಡಿದ್ದ ಪುಷ್ಪ ಎಂಬ ಮಹಿಳೆಯನ್ನು ಕೆಲದಿನಗಳ ಹಿಂದಷ್ಟೇ ಪೊಲೀಸರು ವಶಕ್ಕೆ ಪಡೆದಿದ್ದರು.

ಈ ಪ್ರಕರಣದಲ್ಲಿ ತಲೆಮರೆಸಿಕೊಂಡಿದ್ದ ಆರೋಪಿಗಳಾದ ಸೋಮ, ಭರತ್, ಅಮಿತ್, ಗುಂಡನಿಗೆ ಹುಡುಕಾಟ ಮುಂದುವರೆಸಿದ್ದರು. ಈ ನಡುವೆ ರಾಜೇಂದ್ರ ಹತ್ಯೆ ಪ್ರಕರಣದ ಪ್ರಮುಖ ಆರೋಪಿ ಸೋಮ ಇಂದು ಸಂಜೆ ಕ್ಯಾತ್ಸಂದ್ರ ಪೊಲೀಸರ ಬಳಿ ಶರಣಾಗಿದ್ದಾನೆ. ಅಮಿತ್ ಕೂಡಾ ಸರೆಂಡರ್ ಆಗಿದ್ದಾರೆ. ಭರತ್‌ನನ್ನು ಬಂಧಿಸಲಾಗಿದೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: mysoorumithra@gmail.com For advertisements: mysoorumithra@gmail.com

ಹಾಸನ ಮಿತ್ರ

ಹಾಸನದಲ್ಲಿ ದೇವರ ದಾಸಿಮಯ್ಯ ಜಯಂತಿ



ದೇವರ ದಾಸಿಮಯ್ಯ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವ ಮೂಲಕ ಮೆರವಣಿಗೆಗೆ ಚಾಲನೆ ನೀಡಲಾಯಿತು.

ಹಾಸನ, ಏ.2– ನಗರದ ಜಿಲ್ಲಾಧಿಕಾರಿಗಳ ಕಚೇರಿ ಆವರಣದಲ್ಲಿ ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಯೋಗದಲ್ಲಿ ಬುಧವಾರದಂದು ಹಮ್ಮಿಕೊಂಡಿದ್ದ ದೇವರ ದಾಸಿಮಯ್ಯ ಜಯಂತಿಗೆ ಕ್ಷೇತ್ರದ ಶಾಸಕ ಸ್ವರೂಪ್ ಪ್ರಕಾಶ್ ಹಾಗೂ ಜಿಲ್ಲಾಧಿಕಾರಿ ಸಿ. ಸತ್ಯಭಾಮ ಅವರು ದೇವರ ದಾಸಿಮಯ್ಯ ರವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವುದರೊಂದಿಗೆ ಮೆರವಣಿಗೆಗೆ ಚಾಲನೆ ನೀಡಿದರು.

ನಂತರ ಮಾತನಾಡಿದ ಶಾಸಕರು, ಜಯಂತಿಗೆ ಹೆಚ್ಚು ಮಹಿಳೆಯರು ಬಂದಿರುವುದು ವಿಶೇಷವಾಗಿದೆ. ನೇಕಾರ ಸಮಾಜ ಆರ್ಥಿಕವಾಗಿ, ರಾಜಕೀಯವಾಗಿ ಬೆಳೆಯಬೇಕು ಎಂದು ದೇವರಲ್ಲಿ ಪ್ರಾರ್ಥಿಸುತ್ತೇನೆ ಎಂದರು. ದೇವರ ದಾಸಿಮಯ್ಯರ ಪ್ರತಿಮೆಯನ್ನು ಮತ್ತು ಹೆಸರು ಇಡಲು ಈಗಾಗಲೇ ನಗರಸಭೆಯಿಂದ ಅನುಮೋದನೆ ಆಗಿದೆ. ನಾನು ಕೂಡ ಹಿರಿಯರ ಜೊತೆ ಚರ್ಚೆ ಮಾಡುತ್ತಿದ್ದು, ವ್ಯಯಕ್ತಿಕವಾಗಿ ಈ ಬಗ್ಗೆ ಗಮನ ಹರಿಸುವುದಾಗಿ ಹೇಳಿದ ಅವರು ಇದೆ ವೇಳೆ ಎಲ್ಲಾ ಸಮುದಾಯದವರಿಗೂ ಜಯಂತಿಯ ಶುಭಾಶಯಗಳನ್ನು ಹೇಳುವುದಾಗಿ ತಿಳಿಸಿದರು.

ಈ ಸಂದರ್ಭದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರಾದ ಡಾ.ಹೆಚ್.ಪಿ ತಾರಾನಾಥ್, ರಂಗಶೆಟ್ಟಿ, ಆನಂದ್, ಪ್ರೇಮಮ್ಮ ಬಿದರಿಕೆರೆ ಜಯರಾಂ ಹಾಗೂ ಸಮುದಾಯದ ಮುಖಂಡರು ಹಾಗೂ ಮತ್ತಿತರರು ಹಾಜರಿದ್ದರು.

ಹಾಸನದಲ್ಲಿ ನಾಳೆ ವೀರಶೈವ–ಲಿಂಗಾಯತ ನೂತನ ಕಚೇರಿ ಉದ್ಘಾಟನೆ



ಗೋಷ್ಠಿಯಲ್ಲಿ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಜಿಲ್ಲಾಧ್ಯಕ್ಷ ನವೀಲೆ ಪರಮೇಶ್ ಮಾತನಾಡಿದರು.

ಹಾಸನ, ಏ.2– ನಗರದ ತಣ್ಣೀರು ಹಳ್ಳ ಮಠದಲ್ಲಿ ಏಪ್ರಿಲ್ 4ರಂದು ಬೆಳಿಗ್ಗೆ 10.30ಕ್ಕೆ ನೂತನ ಜಿಲ್ಲಾ ಕಚೇರಿಯ ಉದ್ಘಾಟನಾ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಜಿಲ್ಲಾಧ್ಯಕ್ಷ ನವೀಲೆ ಪರಮೇಶ್ ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಬುಧವಾರ ಮಾತನಾಡಿದ ಅವರು, ಅರಕಲಗೂಡು ದೊಡ್ಡಮಠದ ಗೌರವಾಧ್ಯಕ್ಷ ಶ್ರೀ ಮಲ್ಲಿಕಾರ್ಜುನ ಸ್ವಾಮೀಜಿ, ತಣ್ಣೀರು ಹಳ್ಳ ಮಠದ ಶ್ರೀ ವಿಜಯ ಕುಮಾರ ಸ್ವಾಮೀಜಿ, ಜವೇನಹಳ್ಳಿ ಮಠದ ಶ್ರೀ ಸಂಗಮೇಶ್ವರ ದೇವರು ದಿವ್ಯಸಾನಿಧ್ಯ ವಹಿಸಲಿದ್ದಾರೆ ಎಂದರು.

ಕಾರ್ಯಕ್ರಮದ ಉದ್ಘಾಟನೆಯನ್ನು ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ ರಾಜ್ಯ ಘಟಕದ ಅಧ್ಯಕ್ಷ ಶಂಕರ ಬಿದರಿ, ರಾಷ್ಟ್ರೀಯ ಘಟಕದ ಉಪಾಧ್ಯಕ್ಷೆ ಚಂದ್ರಕಲಾ, ರಾಷ್ಟ್ರೀಯ ಕಾರ್ಯದರ್ಶಿ ರೇಣುಕಾ ಪ್ರಸನ್ನ, ರಾಜ್ಯ ಪ್ರಧಾನ ಕಾರ್ಯದರ್ಶಿ ಸಾಗರನಹಳ್ಳಿ ನಟರಾಜು, ರಾಜ್ಯ ಮಹಿಳಾ ಘಟಕದ ಅಧ್ಯಕ್ಷೆ ಮುಕ್ತಾಂಭ, ರಾಜ್ಯ ಘಟಕದ ಉಪಾಧ್ಯಕ್ಷೆ ರಾಜೇಶ್ವರಿ, ರಾಜ್ಯ ಯುವ ಘಟಕದ ಅಧ್ಯಕ್ಷ ಮೋಹನ ಅಬ್ಬಿಗೆರೆ, ಜಿಲ್ಲಾ ಉಸ್ತುವಾರಿ ಮಹಂತೇಶ್ ಪಾಟೀಲ್, ರಾಜ್ಯ ಪತ್ರಕರ್ತರ ಸಂಘದ ಅಧ್ಯಕ್ಷ ಶಿವಾನಂದತಗಡೂರು, ವೀರಶೈವ ಸಂಘದ ಅಧ್ಯಕ್ಷ ಬಿ.ಪಿ. ಐಸಾಮೆಗೌಡ ಸೇರಿದಂತೆ ಇತರರು ಭಾಗವಹಿಸುವುದಾಗಿ ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ಅಖಿಲ ಭಾರತ ವೀರಶೈವ ಸಂಘದ ತಾಲೂಕು ಅಧ್ಯಕ್ಷ ಕಟ್ಟಾಯ ಶಿವಕುಮಾರ್, ಪ್ರಧಾನ ಕಾರ್ಯದರ್ಶಿ ರವಿಕುಮಾರ್, ನಿರ್ದೇಶಕ ವಿಜಯ ಕುಮಾರ್ ಯೋಗೇಶ್ ಅಜಿತ್ ಕುಮಾರ್, ಸುರೇಶ್ ಇತರರು ಉಪಸ್ಥಿತರಿದ್ದರು.

ಮಹಿಳಾ ವೈದ್ಯಾಧಿಕಾರಿಗಳಿಗೆ ಆರ್‌ಟಿಐ ಕಾರ್ಯಕರ್ತರಿಂದ ಕಿರುಕುಳ ಆರೋಪ

ಕ್ರಮಕ್ಕೆ ಆಗ್ರಹಿಸಿ ವೈದ್ಯಾಧಿಕಾರಿಗಳ ಸಂಘದಿಂದ ಡಿಸಿಗೆ ಮನವಿ



ಕರ್ನಾಟಕ ಸರ್ಕಾರಿ ವೈದ್ಯಾಧಿಕಾರಿಗಳ ಸಂಘದಿಂದ ಬುಧವಾರ ಜಿಲ್ಲಾಧಿಕಾರಿ ಸಿ.ಸತ್ಯಭಾಮ ಅವರಿಗೆ ಮನವಿ ಸಲ್ಲಿಸಲಾಯಿತು.

ಹಾಸನ, ಏ.2– ಆರ್‌ಟಿಐ ಕಾರ್ಯಕರ್ತರು ಮಹಿಳಾ ವೈದ್ಯಾಧಿಕಾರಿಗಳಿಗೆ ತುಂಬ ಬೆದರಿಕೆ ಹಾಕಿದ್ದು, ವೈದ್ಯರಾಗಿ ಒಳ್ಳೆ ಕೆಲಸ ಮಾಡುವ ನಮಗೆ ದೈರ್ಯ ಕುಗ್ಗಿಸುವ ಕೆಲಸವಾಗುತ್ತಿದೆ. ಇಂತಹ ಘಟನೆಗಳು ಮರುಕಳಿಸದಂತೆ ಕ್ರಮ ಜರುಗಿಸಬೇಕೆಂದು ಆಗ್ರಹಿಸಿ ಕರ್ನಾಟಕ ಸರ್ಕಾರಿ ವೈದ್ಯಾಧಿಕಾರಿಗಳ ಸಂಘದಿಂದ ಬುಧವಾರ ಸಂಜೆ ಜಿಲ್ಲಾಧಿಕಾರಿ ಸಿ.ಸತ್ಯಭಾಮ ಅವರಿಗೆ ಮನವಿ ಸಲ್ಲಿಸಿದರು.

ಇದೇ ವೇಳೆ ಆರ್‌ಟಿಐ ಕಾರ್ಯಕರ್ತರ ಕಿರುಕುಳಕ್ಕೊಳಗಾದ ಡಾ. ನಿಸಾರ್ ಫಾತಿಮಾ ಮಾಧ್ಯಮದೊಂದಿಗೆ ಮಾತನಾಡಿ, ಕಳೆದ ತಿಂಗಳು 29ರಂದು ನಗರದ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಛೇರಿಯಲ್ಲಿ ಬಿ.ವಿ.ಭಾನುಪ್ರಕಾಶ್ ಎಂದ ಆರ್‌ಟಿಐ ಕಾರ್ಯಕರ್ತ ಸಲ್ಲಿಸಿದ್ದ ಮೇಲ್ಮನವಿಯನ್ನು ಇತ್ಯರ್ಥಗೊಳಿಸಲು ಆಲೂರು ತಾಲೂಕಿನ ಪಾಳ್ಯ ಪ್ರಾಥಮಿಕ ಆರೋಗ್ಯ ಕೇಂದ್ರದ ಆಡಳಿತ ವೈದ್ಯಾಧಿಕಾರಿಗಳ ಮುಂದೆ ನಾನು ಹಾಜರಾಗಿದ್ದಾಗ ಆರ್‌ಟಿಐ ಕಾರ್ಯಕರ್ತರು ನನ್ನ ಮೇಲೆ ಏರು ಧ್ವನಿಯಲ್ಲಿ ಕೈ ಬೆರಳು ಸನ್ನೆ ಮಾಡುತ್ತಾ ಮಹಿಳಾ ವೈದ್ಯಾಧಿಕಾರಿಗಳ ಘನತೆಗೆ ದಕ್ಕೆ ತರುವಂತಹ ರೀತಿಯಲ್ಲಿ ಮಾತನಾಡಿರುತ್ತಾರೆ ಎಂದು ದೂರಿದರು. ಇದು ನಮ್ಮ ಮಹಿಳಾ ವೈದ್ಯಾಧಿಕಾರಿಗಳ ಮತ್ತು ಇಡೀ ವೈದ್ಯ ಸಮೂಹದ ಆತ್ಮಸ್ಥೈರ್ಯ ಕುಗ್ಗಿಸುವಂತಹ ವರ್ತನೆಯಾಗಿದ್ದು, ಹಗಲಿರುಳು ಸಾರ್ವಜನಿಕ ಸೇವೆಯಲ್ಲಿ ನಿರತರಾಗಿರುವ ವೈದ್ಯಾಧಿಕಾರಿಗಳ ಘನತೆಗೆ ಕುತ್ತು ತರುವಂತಹ ಘಟನೆಯಾಗಿರುತ್ತದೆ. ಇಂತಹ ಘಟನೆಗಳು ಆರ್‌ಟಿಐ ಕಾರ್ಯಕರ್ತರು ಅಥವಾ ಇನ್ನಿತರಿಂದ ವೈದ್ಯರ ಘನತೆಗೆ ಕುತ್ತು ತರದಂತೆ ತಾವು ಕ್ರಮವಹಿಸಬೇಕೆಂದು ತಮ್ಮಲ್ಲಿ ಕಳಕಳಿಯಿಂದ ಮನವಿಮಾಡಿಕೊಳ್ಳುತ್ತೇವೆ ಎಂದು ಹೇಳಿದರು.

ಇದೆ ವೇಳೆ ಕರ್ನಾಟಕ ಸರಕಾರಿ ವೈದ್ಯಾಧಿಕಾರಿಗಳ ಸಂಘದ ಪ್ರಧಾನ ಕಾರ್ಯದರ್ಶಿ ಡಾ. ಎಂ.ವಿ. ಸಂತೋಷ್, ಖಜಾಂಚಿ ಡಾ. ಹೆಚ್.ಜೆ. ತೇಜಸ್ವಿ, ನಮೃತ, ಮಹೇಶ್, ಡಾ. ರಘು ಸೇರಿದಂತೆ ಇತರರು ಉಪಸ್ಥಿತರಿದ್ದರು.

ಏ.7ರಂದು ಬೆಂಗಳೂರಲ್ಲಿ ನಡೆಯುವ ಪೌರಕಾರ್ಮಿಕರ ರಾಜ್ಯಮಟ್ಟದ ಬೃಹತ್ ಸಮಾವೇಶಕ್ಕೆ ತೆರಳಲು

ಪಾಲಿಕೆಯ ಎಲ್ಲಾ 65 ವಾರ್ಡ್‌ಗಳಲ್ಲಿ ತಲಾ ಒಂದು ಬಸ್ ವ್ಯವಸ್ಥೆ



ಮೈಸೂರಿನ ಬಲ್ಲಾಳ್ ವೃತ್ತ ಸಮೀಪದ ಖಾಸಗಿ ಹೋಟೆಲ್ ಸಭಾಂಗಣದಲ್ಲಿ ಬುಧವಾರ ಸಮಾವೇಶಕ್ಕೆ ತೆರಳುವ ಕುರಿತು ಸಭೆ ನಡೆಸಲಾಯಿತು.

ರಾಜ್ಯದ ಸ್ಥಳೀಯ ಸಂಸ್ಥೆಗಳ 9 ಸಾವಿರ ಪೌರಕಾರ್ಮಿಕರು, 1,230 ಒಳಚರಂಡಿ ಕಾರ್ಮಿಕರು ಹಾಗೂ ವಾಹನ ಚಾಲಕರು, ಲೋಡರ್ಸ್, ಕ್ಲೀನರ್ಸ್ ಸೇರಿದಂತೆ 6 ಸಾವಿರ ಮಂದಿ ಕಾಯಂ ಮಾಡಬೇಕೆಂಬುದು ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸಲು ಆಗ್ರಹಿಸಿ ಪೌರಕಾರ್ಮಿಕರ ರಾಜ್ಯಮಟ್ಟದ ಬೃಹತ್ ಸಮಾವೇಶ ಆಯೋಜಿಸಲಾಗಿದೆ.

ಮೈಸೂರು,ಏ.2(ಪಿಎಂ)– ಪೌರ ಕಾರ್ಮಿಕರ ವಿವಿಧ ಬೇಡಿಕೆಗಳನ್ನು ಈಡೇರಿಸಲು ಆಗ್ರಹಿಸಿ ಏ.7ರಂದು ಬೆಂಗಳೂರಿನಲ್ಲಿ ಕರ್ನಾಟಕ ರಾಜ್ಯ ನಗರಪಾಲಿಕೆ, ನಗರಸಭೆ, ಪುರಸಭೆಗಳ ಪೌರಕಾರ್ಮಿಕ ಮಹಾಸಂಘ ಹಮ್ಮಿಕೊಂಡಿರುವ ಪೌರಕಾರ್ಮಿಕರ ರಾಜ್ಯ ಮಟ್ಟದ ಬೃಹತ್ ಸಮಾವೇಶಕ್ಕೆ ಮೈಸೂರಿನಿಂದ ಪೌರಕಾರ್ಮಿಕರು ತೆರಳಲು ಮೈಸೂರು ಮಹಾನಗರ ಪಾಲಿಕೆಯ ಎಲ್ಲಾ 65 ವಾರ್ಡ್‌ಗಳಲ್ಲಿ ತಲಾ ಒಂದು ಬಸ್ ವ್ಯವಸ್ಥೆ ಕಲ್ಪಿಸಲು ನಿರ್ಧರಿಸಲಾಗಿದೆ.

ಸಮಾವೇಶಕ್ಕೆ ತೆರಳುವ ಪೂರ್ವ ಸಿದ್ಧತೆ ಸಂಬಂಧ ಮೈಸೂರಿನ ಬಲ್ಲಾಳ್ ವೃತ್ತ ಸಮೀಪದ ಖಾಸಗಿ ಹೋಟೆಲ್ ಸಭಾಂಗಣದಲ್ಲಿ ಬುಧವಾರ ಹಮ್ಮಿಕೊಂಡಿದ್ದ ಸಭೆಯ ಬಳಿಕ ರಾಜ್ಯ ನಗರ ಪಾಲಿಕೆ, ನಗರಸಭೆ, ಪುರಸಭೆಗಳ ಪೌರ ಕಾರ್ಮಿಕ ಮಹಾಸಂಘದ ಉಪಾಧ್ಯಕ್ಷ ಆರ್.ಶಿವಣ್ಣ, ಈ ವಿಷಯ ತಿಳಿಸಿದರು.

ಆಯಾಯ ವಾರ್ಡ್‌ಗಳಲ್ಲಿ ಪೌರ ಕಾರ್ಮಿಕರನ್ನು ಸಂಘಟಿಸಿ ಕರೆದೊಯ್ಯುವ ಜವಾಬ್ದಾರಿಯನ್ನು ವಾರ್ಡಿನ ಮೇಸ್ತ್ರಿ ಹಾಗೂ ಸ್ಯಾನಿಟರಿ ಸೂಪರ್‌ವೈಸರ್‌ಗಳು ನಿರ್ವಹಿಸಬೇಕೆಂದೂ ತೀರ್ಮಾನಿಸಲಾಯಿತು. ರಾಜ್ಯ ನಗರಪಾಲಿಕೆ, ನಗರಸಭೆ, ಪುರಸಭೆಗಳ ಪೌರಕಾರ್ಮಿಕ ಮಹಾ ಸಂಘದ 25ನೇ ವಾರ್ಷಿಕೋತ್ಸವದ ಬೆಳ್ಳಿ ಹಬ್ಬದ ಪ್ರಯುಕ್ತ ಆಯೋಜಿಸಿರುವ ಈ ಸಮಾವೇಶದಲ್ಲಿ ಪೌರಕಾರ್ಮಿಕರ ವಿವಿಧ ಬೇಡಿಕೆಗಳನ್ನು ಈಡೇರಿಸಬೇಕೆಂದು ಸರ್ಕಾರವನ್ನು ಒತ್ತಾಯಿಸಲಾಗುತ್ತಿದೆ ಎಂದು ಹೇಳಿದರು.

ಬೆಂಗಳೂರಿನ ಅರಮನೆ ಮೈದಾನದ ಗಾಯತ್ರಿ ವಿಹಾರ್ ಗೇಟ್ 4ರಲ್ಲಿ ಅಂದು ಬೆಳಗ್ಗೆ 11ಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಸಮಾವೇಶ ಉದ್ಘಾಟಿಸಲಿದ್ದಾರೆ. ಡಿಸಿಎಂ ಡಿ.ಕೆ.ಶಿವಕುಮಾರ್ ಅಧ್ಯಕ್ಷತೆ ವಹಿಸಲಿದ್ದು, ಗೃಹ ಸಚಿವ ಡಾ.ಜಿ.ಪರಮೇಶ್ವರ್ ಸೇರಿದಂತೆ ಹಲವು ಸಚಿವರು ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ ಎಂದರು.

ಎಲ್ಲಾ 65 ವಾರ್ಡ್‌ಗಳಿಂದ ತಲಾ ಒಂದರಂತೆ 65 ಬಸ್‌ಗಳು ಮೈಸೂರು ನಗರದಿಂದ ಹೊರಡಲಿವೆ. ಅಂದು ಬೆಳಗ್ಗೆ 5.30ಕ್ಕೆ ಆಯಾಯ ವಾರ್ಡಿನಲ್ಲಿ ಪೌರಕಾರ್ಮಿಕರು ಹಾಜರಾತಿ ಹಾಕುವ ಪಾಯಿಂಟ್‌ನಿಂದ ಬಸ್‌ಗಳು ಹೊರಡಲಿವೆ. ಬಸ್ ವ್ಯವಸ್ಥೆಯ ವೆಚ್ಚವನ್ನು ಎಲ್ಲಾ ಪೌರಕಾರ್ಮಿಕರು ಭರಿಸಲಿದ್ದಾರೆ. ಇಂತಿಷ್ಟು ಎಂದು ಹಣ ನಿಗದಿಪಡಿಸಿಲ್ಲ. ಸಾಧ್ಯವಾದಷ್ಟು ಸಂಗ್ರಹಿಸಲು ನಿರ್ಧರಿಸಲಾಗಿದೆ. ಪಾಲಿಕೆ ಒಳಚರಂಡಿ ಕಾರ್ಮಿಕ ಸಂಘದಿಂದ 2 ಬಸ್‌ಗಳು ಮತ್ತು ವಾಹನ ಚಾಲಕರ ಸಂಘದಿಂದ 2 ಬಸ್‌ಗಳಲ್ಲಿ ಒಳಚರಂಡಿ ಕಾರ್ಮಿಕರು ಹಾಗೂ ವಾಹನ ಚಾಲಕರೂ ಸಮಾವೇಶಕ್ಕೆ ತೆರಳುತ್ತಿದ್ದಾರೆ ಎಂದರು.

ಮೈಸೂರು ಮಹಾನಗರ ಪಾಲಿಕೆ ಖಾಯಂ ಪೌರಕಾರ್ಮಿಕರು ಹಾಗೂ ಗುತ್ತಿಗೆ ಪೌರಕಾರ್ಮಿಕರ ಸಂಘ ಮಹಾ ಪ್ರಧಾನ ಕಾರ್ಯದರ್ಶಿ ಸಿ.ಆರ್.ರಾಚಯ್ಯ ಮಾತನಾಡಿ, ಏ.3ರಂದು ಸಮಾವೇಶ ನಿಗದಿ ಮಾಡಲಾಗಿತ್ತು. ಆದರೆ ಸಮಾವೇಶದ ಉದ್ಘಾಟಕರಾದ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಅಂದು ದೆಹಲಿ ಪ್ರವಾಸದಲ್ಲಿರುವ ಕಾರಣ ಏ.7ಕ್ಕೆ ಸಮಾವೇಶ ಮುಂದೂಡಲಾಯಿತು. ಪಾಲಿಕೆಯಲ್ಲಿ 3 ಸಾವಿರ ಮಂದಿ ಪೌರಕಾರ್ಮಿಕರು, 231 ಮಂದಿ ಒಳಚರಂಡಿ ಕಾರ್ಮಿಕರು, 600 ಮಂದಿ ವಾಹನ ಚಾಲಕರು ಹಾಗೂ ಮುಖಂಡರು ಸೇರಿದಂತೆ ಸುಮಾರು 4 ಸಾವಿರ ಮಂದಿ ಮೈಸೂರಿನಿಂದ ತೆರಳುವ ಮೂಲಕ ಸಮಾವೇಶ ಯಶಸ್ವಿಗೊಳಿಸಲಾಗುವುದು ಎಂದು ತಿಳಿಸಿದರು.

ಮೈಸೂರು ಮಹಾನಗರ ಪಾಲಿಕೆ ಕಾಯಂ ಪೌರಕಾರ್ಮಿಕರು ಹಾಗೂ ಗುತ್ತಿಗೆ ಪೌರಕಾರ್ಮಿಕರ ಸಂಘದ ಅಧ್ಯಕ್ಷ ಆರ್.ಹರೀಶ್, ಪ್ರಧಾನ ಕಾರ್ಯದರ್ಶಿ ಜಯರಾಮ್, ಉಪಾಧ್ಯಕ್ಷ ಅರುಣ್ ಕುಮಾರ್, ಸಂಘಟನಾ ಕಾರ್ಯದರ್ಶಿ ಕಮಲನಾಥ್, ಸಲಹೆಗಾರ ಶಂಕರ್ ಬಾಬು, ಪದಾಧಿಕಾರಿ ಆರ್ಟಿಸ್ಟ್ ನಾಗ ರಾಜು, ಒಳಚಂಡಿ ಕಾರ್ಮಿಕರ ಸಂಘದ ಅಧ್ಯಕ್ಷ ಆರ್.ಪಳನಿ, ವಾಹನ ಚಾಲಕರ ಅಧ್ಯಕ್ಷ ಶೇಷಣ್ಣ ಸೇರಿದಂತೆ ವಾರ್ಡ್‌ಗಳ ಮೇಸ್ತ್ರಿಗಳು ಹಾಗೂ ಸ್ಯಾನಿಟರಿ ಸೂಪರ್ ವೈಸರ್‌ಗಳು ಸಭೆಯಲ್ಲಿ ಪಾಲ್ಗೊಂಡಿದ್ದರು.

ಆರು ವಾರಗಳಲ್ಲಿ ಬೈಕ್ ಟ್ಯಾಕ್ಸಿ ಸೇವೆ ರದ್ದುಗೊಳಿಸಿ

ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ನಿರ್ದೇಶನ



ಬೆಂಗಳೂರು, ಏ.2– ಬೈಕ್ ಟ್ಯಾಕ್ಸಿ ಕಾರ್ಯಾಚರಣೆಯನ್ನು ನಿಲ್ಲಿಸಲು ಕರ್ನಾಟಕ ಹೈಕೋರ್ಟ್ ಓಲಾ, ಉಬರ್ ಮತ್ತು ರ್‍ಯಾಪಿಡೊಗಳಿಗೆ ಆರು ವಾರಗಳ ಕಾಲಾವಕಾಶ ನೀಡಿದೆ. ಆರು ವಾರಗಳ ನಂತರ, ಬೈಕ್ ಟ್ಯಾಕ್ಸಿ ಕಾರ್ಯಾಚರಣೆ ರದ್ದಾಗಿರುವುದನ್ನು ಖಚಿತಪಡಿಸಿಕೊಳ್ಳಬೇಕು ಎಂದು ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ನಿರ್ದೇಶನ ನೀಡಿದೆ.

ಮೋಟಾರ್ ಸೈಕಲ್‌ಗಳನ್ನು ಸಾರಿಗೆ ವಾಹನಗಳಾಗಿ ನೋಂದಾಯಿಸಲು 2022ರಲ್ಲಿ ಸಲ್ಲಿಸಿದ ಅರ್ಜಿಗಳನ್ನು ಪರಿಗಣಿಸುವಂತೆ ರಾಜ್ಯ ಸರ್ಕಾರಕ್ಕೆ ನಿರ್ದೇಶನ ಕೋರಿ ಉಬರ್ ಇಂಡಿಯಾ ಸಿಸ್ಟಮ್ಸ್ ಪ್ರೈವೇಟ್ ಲಿಮಿಟೆಡ್, ಎಎನ್‌ಐ ಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್ ಮತ್ತು ಇತರರು ಸಲ್ಲಿಸಿದ ಅರ್ಜಿಗಳ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಬಿ.ಎಂ. ಶ್ಯಾಮ್‌ಪ್ರಸಾದ್ ಅವರು ಬುಧವಾರ ಈ ಆದೇಶ ಹೊರಡಿಸಿದ್ದಾರೆ. ಮೋಟಾರು ವಾಹನ ಕಾಯ್ದೆ, 1988ರ ಸೆಕ್ಷನ್ 93 ಮತ್ತು ಅದರ ಅಡಿಯಲ್ಲಿರುವ ನಿಯಮಗಳ ಬಗ್ಗೆ ರಾಜ್ಯ ಸರ್ಕಾರ ಮಾರ್ಗಸೂಚಿಗಳನ್ನು ಹೊರಡಿಸಿದ ಹೊರತು, ಅರ್ಜಿದಾರರು ಬೈಕ್ ಟ್ಯಾಕ್ಸಿ ಸೇವೆ ನೀಡಲು ಸಾಧ್ಯವಿಲ್ಲ ಮತ್ತು ಈ ಸಂಬಂಧ ಕರ್ನಾಟಕ ಸಾರಿಗೆ ಇಲಾಖೆಗೆ ಮೋಟಾರ್ ಸೈಕಲ್‌ಗಳನ್ನು ಸಾರಿಗೆ ವಾಹನಗಳಾಗಿ ನೋಂದಾಯಿಸಲು ನಿರ್ದೇಶನ ನೀಡಲಾಗುವುದಿಲ್ಲ ಎಂದು ನ್ಯಾಯಾಲಯ ಹೇಳಿದೆ.

ಈ ಅರ್ಜಿಗಳ ವಿಚಾರಣೆಯ ಸಮಯದಲ್ಲಿ ನ್ಯಾಯಾಲಯ ನೀಡಿದ ಮಧ್ಯಂತರ ಆದೇಶದ ಆಧಾರದ ಮೇಲೆ ಓಲಾ, ಉಬರ್ ಮತ್ತು ರ್‍ಯಾಪಿಡೋ ಬೈಕ್ ಟ್ಯಾಕ್ಸಿಗಳು ಕಾರ್ಯನಿರ್ವಹಿಸುತ್ತಿವೆ ಎಂಬ ಅಂಶದ ಬಗ್ಗೆ ನ್ಯಾಯಾಲಯದ ಗಮನ ಸೆಳೆದಾಗ, ನ್ಯಾಯಾಲಯವು ಇಂದಿನಿಂದ ಆರು ವಾರಗಳ ಕಾಲ ಕಾರ್ಯನಿರ್ವಹಿಸಲು ಅವರಿಗೆ ಅನುಮತಿ ನೀಡಿದೆ ಮತ್ತು ಆರು ವಾರಗಳ ನಂತರ ತಮ್ಮ ಕಾರ್ಯಾಚರಣೆಯನ್ನು ನಿಲ್ಲಿಸಬೇಕು ಎಂದು ಹೇಳಿದೆ.

ದರ್ಶನ್ ಜಾಮೀನು ರದ್ದು ಕೋರಿ ಅರ್ಜಿ: ಏಪ್ರಿಲ್ 22ಕ್ಕೆ ವಿಚಾರಣೆ



ನವದೆಹಲಿ, ಏ.2– ರೇಣುಕಾ ಸ್ವಾಮಿ ಕೊಲೆ ಪ್ರಕರಣದ ಆರೋಪಿಗಳಿಗೆ ಈಗಾಗಲೇ ಜಾಮೀನು ದೊರೆತಿದೆ. ರಾಜ್ಯ ಹೈಕೋರ್ಟ್ ಎಲ್ಲ ಆರೋಪಿಗಳಿಗೂ ಜಾಮೀನು ನೀಡಿದೆ. ಕೆಲ ಆರೋಪಿಗಳಿಗೆ ಕೆಳಹಂತದ ನ್ಯಾಯಾಲಯದಲ್ಲಿಯೇ ಜಾಮೀನು ದೊರೆತಿತ್ತು. ಇದೀಗ ರಾಜ್ಯ ಪೊಲೀಸ್ ಇಲಾಖೆಯು ರೇಣುಕಾ ಸ್ವಾಮಿ ಕೊಲೆ ಪ್ರಕರಣದ ಕೆಲ ಆರೋಪಿಗಳ ಜಾಮೀನು ರದ್ದು ಮಾಡಬೇಕೆಂದು ಕೋರಿ ಸುಪ್ರೀಂಕೋರ್ಟ್ ನಲ್ಲಿ ಅರ್ಜಿ ಸಲ್ಲಿಸಿದ್ದು, ಅರ್ಜಿಯ ವಿಚಾರಣೆ ಏಪ್ರಿಲ್ 22ಕ್ಕೆ ಮುಂದೂ ಡಲ್ಪಟ್ಟಿದೆ.

ನಟ ದರ್ಶನ್ ಸೇರಿದಂತೆ ಏಳು ಆರೋಪಿಗಳ ಜಾಮೀನು ರದ್ದು ಕೋರಿ ರಾಜ್ಯ ಸರ್ಕಾರ ಸುಪ್ರೀಂಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಿತ್ತು. ಪ್ರಕರಣದ ವಿಚಾರಣೆ ಇಂದು ಸುಪ್ರೀಂ ಕೋರ್ಟ್‌ನಲ್ಲಿ ನಡೆಯಿತು. ರಾಜ್ಯದ ಪರವಾಗಿ ವಕೀಲ ಸಿದ್ಧಾರ್ಥ್ ಲೂಥ್ರಾ ಅವರು ಅರ್ಜಿಯ ಉಲ್ಲೇಖ ಮಾಡಿದರು. ಬಳಿಕ ನ್ಯಾಯಮೂರ್ತಿಗಳು ಪ್ರಕರಣದ ವಿಚಾರಣೆಯನ್ನು ಏಪ್ರಿಲ್ 22ಕ್ಕೆ ಮುಂದೂಡಿದರು. ಮುಂದಿನ ವಿಚಾರಣೆ ಏಪ್ರಿಲ್ 22ಕ್ಕೆ ನಡೆಯಲಿದ್ದು, ಸುಪ್ರೀಂಕೋರ್ಟ್‌ನಲ್ಲಿಯೂ ದರ್ಶನ್ ಪರವಾಗಿ ವಕೀಲ ಸಿ.ವಿ.ನಾಗೇಶ್ ವಕಾಲತ್ತು ವಹಿಸುವ ಸಾಧ್ಯತೆ ಇದೆ.

ರೇಣುಕಾ ಸ್ವಾಮಿ ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ರಾಜ್ಯ ಹೈಕೋರ್ಟ್ ಡಿಸೆಂಬರ್ ತಿಂಗಳಲ್ಲಿ ದರ್ಶನ್, ಪವಿತ್ರಾ ಸೇರಿದಂತೆ ಹಲವು ಆರೋಪಿಗಳಿಗೆ ಜಾಮೀನು ಮಂಜೂರು ಮಾಡಿತ್ತು. ಅದಕ್ಕೂ ಮುನ್ನ ನಟ ದರ್ಶನ್ ಅವರ ಬೆನ್ನು ನೋವಿನ ಚಿಕಿತ್ಸೆಗಾಗಿ ಮಧ್ಯಂತರ ಜಾಮೀನು ಮಂಜೂರು ಮಾಡಲಾಗಿತ್ತು. ಹೈಕೋರ್ಟ್ ದರ್ಶನ್ ಹಾಗೂ ಇತರರಿಗೆ ಜಾಮೀನು ನೀಡಿದ ಬಳಿಕ ರಾಜ್ಯ ಪೊಲೀಸ್ ಇಲಾಖೆ ಗೃಹ ಇಲಾಖೆಯ ಅನುಮತಿ ಪಡೆದುಕೊಂಡು ಸುಪ್ರೀಂಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಿದ್ದು, ಜಾಮೀನು ರದ್ದು ಮಾಡುವಂತೆ ಕೋರಿದೆ.

ನಂಜುಂಡೇಶ್ವರನಿಗೆ ವಿಶೇಷ ಪೂಜೆ ಸಲ್ಲಿಸಿದ ದರ್ಶನ್ ತಾಯಿ



ನಂಜನಗೂಡು, ಏ.2– ಸುಪ್ರೀಂ ಕೋರ್ಟ್‌ನಲ್ಲಿ ಇಂದು (ಬುಧವಾರ) ದರ್ಶನ್ ಜಾಮೀನು ರದ್ದು ಅರ್ಜಿ ವಿಚಾರಣೆ ಹಿನ್ನೆಲೆ ದರ್ಶನ್ ತಾಯಿ ಮೀನಾ ತೂಗುದೀಪ ದೇವರ ಮೊರೆ ಹೋಗಿದ್ದಾರೆ.

ನಂಜನಗೂಡಿನ ನಂಜುಂಡೇಶ್ವರನಿಗೆ ಮೀನಾ ತೂಗುದೀಪ ವಿಶೇಷ ಪೂಜೆ ಸಲ್ಲಿಸಿ ದೇವರ ದರ್ಶನ ಪಡೆದಿದ್ದಾರೆ. ರೇಣುಕಾಸ್ವಾಮಿ ಕೊಲೆ ಪ್ರಕರಣದಲ್ಲಿ ದರ್ಶನ್ ಹಾಗೂ ಗ್ಯಾಂಗ್‌ಗೆ ಕರ್ನಾಟಕ ಹೈಕೋರ್ಟ್ ಬೇಲ್ ಮಂಜೂರು ಮಾಡಿತ್ತು. ಇದನ್ನು ಪ್ರಶ್ನಿಸಿ ರಾಜ್ಯ ಸರ್ಕಾರ ಸುಪ್ರೀಂ ಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿತ್ತು. ಈ ಹಿನ್ನೆಲೆ ಇಂದು ಜಾಮೀನು ರದ್ದು ಕೋರಿ ಸುಪ್ರೀಂ ಕೋರ್ಟ್‌ನಲ್ಲಿ ವಿಚಾರಣೆ ನಡೆಯುತ್ತಿದೆ. ಇದೇ ವೇಳೆ ದರ್ಶನ್ ತಾಯಿ ಟೆಂಪಲ್ ರನ್ ಮಾಡಿದ್ದಾರೆ. ಈ ವೇಳೆ ಮಾಧ್ಯಮಗಳಿಗೆ ಪ್ರತಿಕ್ರಿಯೆ ನೀಡಿದ ಮೀನಾ ಅವರು, ದೇವಸ್ಥಾನಕ್ಕೆ ಬಂದಿದ್ದರಲ್ಲಿ ಅಂಥ ವಿಶೇಷ ಏನಿಲ್ಲ. ಸರ್ವೇ ಜನಾಃ ಸುಖಿನೋ ಭವಂತು. ಎಲ್ಲರಿಗೂ ಒಳ್ಳೆಯದಾಗಲಿ. ನನ್ನ ಮಗ ದರ್ಶನ್ ಶೂಟಿಂಗ್‌ಗೆ ಹೋಗಿದ್ದಾನೆ. ಸದ್ಯ ರಾಜಸ್ಥಾನದ ಉದಯ್‌ಪುರದಲ್ಲಿ ಡೆವಿಲ್ ಶೂಟಿಂಗ್ ನಡೆಯುತ್ತಿದ್ದು, ಅಲ್ಲಿದ್ದಾನೆ. ಎಲ್ಲರ ಆಶೀರ್ವಾದ ನನ್ನ ಮಗನ ಮೇಲಿರಲಿ ಎಂದರು.

ನೇಗಿಲ ಯೋಗಿ ಮಹಿಳಾ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ಮಹಿಳಾ ದಿನಾಚರಣೆ



ಶ್ರೀಮತಿ ಡಾ.ಸುಮಿತ್ರ, ಶ್ರೀಮತಿ ಮೀನಾಕುಮಾರಿ, ಕುಮಾರಿ ಹಾಸಿನಿ ಅವರನ್ನು ಸನ್ಮಾನಿಸುತ್ತಿರುವುದು.

ಮೈಸೂರು, ಏ.2– ಮೈಸೂರಿನ ಕೆಜಿ ಕೊಪ್ಪಲಿನಲ್ಲಿ, ಹೊಸ ನ್ಯಾಯಾಲಯದ ಎದುರಿಗಿರುವ ನೇಗಿಲಯೋಗಿ ಸಮಾಜ ಸೇವಾ ಟ್ರಸ್ಟ್ ಮೈಸೂರು, ನೇಗಿಲ ಯೋಗಿ ಮಹಿಳಾ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ವಿಶ್ವ ಮಹಿಳಾ ದಿನಾಚರಣೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ದೀಪ ಬೆಳಗಿಸುವ ಮೂಲಕ ಕಾರ್ಯಕ್ರಮವನ್ನು ಉದ್ಘಾಟನೆ ಮಾಡಲಾಯಿತು.

ಈ ವೇಳೆ ಮಾತನಾಡಿದ ಡಾ.ಟಿ.ಸಿ. ಪೂರ್ಣಿಮಾ, ಮೊದಲು ಮಹಿಳಾ ದಿನಾಚರಣೆಯನ್ನು ಮಹಿಳೆಯರೇ ಸೇರಿ ಸಂಭ್ರಮಿಸುವ ಕ್ಷಣಕ್ಕೆ ಸ್ಪೂರ್ತಿಯಾಗುವಂತೆ ಆಚರಣೆ ಮಾಡಬೇಕು, ಉದ್ಯೋಗಸ್ಥ ಮಹಿಳೆಯರು ಎಲ್ಲಾ ಕೆಲಸಗಳನ್ನು ಬಿಟ್ಟು ಒಂದೆಡೆ ಸೇರಿ, ಈ ಒಂದು ದಿನವನ್ನು ಅರ್ಥಪೂರ್ಣವಾಗಿ ಆಚರಿಸಬೇಕು ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಶ್ರೀಮತಿ ಡಾ.ಸುಮಿತ್ರ, ಶ್ರೀಮತಿ ಮೀನಾಕುಮಾರಿ ಹಾಗೂ ಕುಮಾರಿ ಹಾಸಿನಿ ಅವರನ್ನು ಸನ್ಮಾನಿಸಲಾಯಿತು.

ಈ ವೇಳೆ ಅಧ್ಯಕ್ಷರಾದ ಉಷಾರಾಣಿ, ಗೌರವಾಧ್ಯಕ್ಷರಾದ ಶೋಭ, ಉಪಾಧ್ಯಕ್ಷರಾದ ಅನಿತಾ ಮನೋಹರ್, ಪ್ರಧಾನ ಕಾರ್ಯದರ್ಶಿ ಟಿ.ಎನ್.ಸವಿತಾ, ಖಜಾಂಚಿ ಅನಿತಾ ಹೇಮಂತ್, ನಿರ್ದೇಶಕರಾದ ಲಲಿತಾ, ಲತ, ಮಂಜುಳಾ, ಸುವರ್ಣ, ಗೌರಿ, ಪ್ರತಿಮಾ, ವಿದ್ಯಾ, ಶಾಂತ ಉಪಸ್ಥಿತರಿದ್ದರು.

ಜಗಳ ಬಿಡಿಸಲು ಬಂದವನ ಹತ್ಯೆ: ಹಂತಕನಿಗೆ ಐದು ವರ್ಷ ಜೈಲು ಶಿಕ್ಷೆ

ಮೈಸೂರು, ಏ.2(ಎಸ್‌ಪಿಎನ್)– ಜಗಳ ಬಿಡಿಸಲು ಬಂದವನ ಹತ್ಯೆಗೈದವನಿಗೆ ಮೈಸೂರಿನ 7 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ಐದು ವರ್ಷ ಕಠಿಣ ಕಾರಾಗೃಹ ಶಿಕ್ಷೆ, 10 ಸಾವಿರ ದಂಡ ವಿಧಿಸಿ ತೀರ್ಪು ನೀಡಿದೆ.

ಮೈಸೂರು ನಗರದ ಬಂಬೂ ಬಜಾರ್‌ನ ನಿವಾಸಿ ಅಯ್ಯನ್(23) ಶಿಕ್ಷೆಗೆ ಗುರಿಯಾದವ. ಈತ ಅದೇ ಬಡಾ ವಣೆಯ ನಿವಾಸಿ ಪಾಂಡಿಯರಾಜ್ ಎಂಬಾತ ನನ್ನು ಚಾಕುವಿನಿಂದ ಇರಿದು ಕೊಲೆ ಮಾಡಿದ್ದಕ್ಕೆ ಶಿಕ್ಷೆಗೆ ಗುರಿಯಾಗಿದ್ದಾನೆ. ಈತ 2023ರ ಜೂ. 29 ರಂದು ತನ್ನ ತಂದೆ ಮುರುಗೇಶ ಮತ್ತು ಭಾವ ಶ್ರೀವತ್ಸ ನೊಂದಿಗೆ ಮಂಡಿ ಮೊಹಲ್ಲಾದ ಹಳೆ ಆರ್‌ಎಂಸಿ ಹಿಂಭಾಗದ ಸವಾನಿ ಟ್ರಾನ್ಸ್‌ಪೋರ್ಟ್ ಮುಂಭಾಗ ಗಲಾಟೆ ಮಾಡುತ್ತಿದ್ದು, ಈ ವೇಳೆ ಇಬ್ಬರಿಗೂ ಚಾಕುವಿನಿಂದ ಹಲ್ಲೆ ನಡೆಸಿದ್ದಾನೆ. ಎಸ್. ಶ್ರೀವತ್ಸ ಅವರನ್ನು ಅಯ್ಯನ್ ಸಾಯಿಸುವ ಉದ್ದೇಶದಿಂದ ಚಾಕುವಿನಿಂದ 2–3 ಬಾರಿ ಇರಿಯಲು ಪ್ರಯತ್ನಿಸಿದ್ದಾನೆ. ಇದನ್ನು ಗಮನಿಸಿದ ಕೊಲೆಯಾದ ಪಾಂಡಿಯರಾಜ್, ಇಬ್ಬರ ನಡುವಿನ ಜಗಳ ಬಿಡಿಸಲು ಬಂದಿದ್ದು, ಇದರಿಂದ ಅಯ್ಯನ್ ಕೋಪಗೊಂಡು ಚಾಕುವಿನಿಂದ ಪಾಂಡಿಯರಾಜ್‌ನ ಎದೆ ಭಾಗಕ್ಕೆ ಬಲವಾಗಿ ಚಾಕುವಿನಿಂದ ಇರಿದಿದ್ದಾನೆ ಪರಿಣಾಮ ಪಾಂಡಿಯ ರಾಜ್ ತೀವ್ರ ರಕ್ತ ಸ್ರಾವವಾಗಿ ಸ್ಥಳದಲ್ಲೇ ಮೃತಪಟ್ಟಿರುವುದು ತನಿಖೆಯಿಂದ ದೃಢಪಟ್ಟಿದೆ. ಈ ಹಿನ್ನಲೆಯಲ್ಲಿ ಆರೋಪಿ ಅಯ್ಯನ್ ವಿರುದ್ಧ ಮಂಡಿ ಪೊಲೀಸ್ ಠಾಣೆಯ ಹಿಂದಿನ ಇನ್ಸ್‌ಪೆಕ್ಟರ್ ಎಸ್. ನಾಗೇಶ್ ಅವರು ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಿ ಐಪಿಸಿ ಕಲಂ 307, 302 ಅಡಿಯಲ್ಲಿ ದೋಷಾರೋಪ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿದ್ದರು.

ವಿಚಾರಣೆ ನಡೆಸಿದ ನ್ಯಾಯಾಧೀಶ ಎಂ.ರಮೇಶ ಅವರು, ಅಯ್ಯನ್ ವಿರುದ್ಧ ಆರೋಪ ಸಾಬೀತಾದ ಹಿನ್ನಲೆಯಲ್ಲಿ ಆತನಿಗೆ 5 ವರ್ಷ ಕಾರಾಗೃಹ ಶಿಕ್ಷೆಯೊಂದಿಗೆ 10 ಸಾವಿರ ರೂ. ದಂಡ ವಿಧಿಸಿದ್ದಾರೆ. ಸರಕಾರದ ಪರವಾಗಿ ಕೆ.ನಾಗರಾಜ ವಾದ ಮಂಡಿಸಿದ್ದರು.

ಶೇ.5 ರಿಯಾಯಿತಿ ಆಫರ್

ಮೊದಲ ದಿನವೇ ಪಾಲಿಕೆಯಲ್ಲಿ 2.02 ಕೋಟಿ ಆಸ್ತಿ ತೆರಿಗೆ ಸಂಗ್ರಹ



ಯಾದವಗಿರಿ ಪಾಲಿಕೆ ವಲಯ ಕಚೇರಿಯಲ್ಲಿ ಆಸ್ತಿ ತೆರಿಗೆ ಪಾವತಿಸಲು ಸಾಲುಗಟ್ಟಿ ನಿಂತಿರುವ ಸಾರ್ವಜನಿಕರು.

ಮೈಸೂರು, ಏ. 2(ಆರ್‌ಕೆ)– ಶೇ. 5ರ ರಿಯಾಯಿತಿ ಆಫರ್‌ನಡಿ ಸಾರ್ವಜನಿಕರು ಪ್ರಸಕ್ತ ಸಾಲಿನ ಆಸ್ತಿ ತೆರಿಗೆ ಪಾವತಿಸಲು ಉತ್ಸಾಹ ತೋರುತ್ತಿದ್ದಾರೆ.

ಏಪ್ರಿಲ್ 1ರಂದು, ಮೊದಲ ದಿನವೇ ಮೈಸೂರು ಮಹಾನಗರ ಪಾಲಿಕೆಯ ಎಲ್ಲಾ 9 ವಲಯ ಕಚೇರಿಗಳಲ್ಲಿ ಬರೋಬ್ಬರಿ 2,02,61,593 ರೂ. ಆಸ್ತಿ ತೆರಿಗೆ ಪಾವತಿಸಲಾಗಿದೆ ಎಂದು ಪಾಲಿಕೆ ಉಪ ಆಯುಕ್ತ (ಕಂದಾಯ) ಜಿ.ಎಸ್.ಸೋಮಶೇಖರ್ 'ಮೈಸೂರು ಮಿತ್ರ'ನಿಗೆ ತಿಳಿಸಿದ್ದಾರೆ.

ಏಪ್ರಿಲ್ 30ರವರೆಗೆ ಆಸ್ತಿ ತೆರಿಗೆ ಪಾವತಿಗೆ ಪಾಲಿಕೆಯು ಶೇ.5ರಷ್ಟು ರಿಯಾಯಿತಿ ಘೋಷಿಸಿದೆ. ಮೈಸೂರು ನಗರದ ಎಲ್ಲಾ 9 ವಲಯ ಕಚೇರಿಗಳಲ್ಲಿ ಸಾರ್ವಜನಿಕರಿಗೆ ತೆರಿಗೆ ಪಾವತಿಸಲು ಅನುಕೂಲವಾಗುವಂತೆ ಪೆಂಡಾಲ್, ಆಸನಗಳು, ಕುಡಿಯುವ ನೀರು, ಹೆಚ್ಚುವರಿ ಕೌಂಟರ್, ಬ್ಯಾಂಕ್ ಸಿಬ್ಬಂದಿಗಳನ್ನು ಪೂರೈಸಿದ್ದು ಬಿಸಿಲು ಹೆಚ್ಚಾಗಿರುವುದರಿಂದ ತೆರಿಗೆದಾರರಿಗೆ ಕುಡಿಯಲು ನೀರು ಮಜ್ಜಿಗೆಯನ್ನೂ ನೀಡಲಾಗುತ್ತಿದೆ.

ಆಸ್ತಿ ಮಾಲೀಕರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗುತ್ತಿರುವ ಕಾರಣ, ಏಪ್ರಿಲ್ ತಿಂಗಳಲ್ಲಿ ಎಲ್ಲಾ ವಲಯ ಕಚೇರಿ ಗಳಲ್ಲೂ 55ರಿಂದ 60 ಕೋಟಿ ರೂ. ಆಸ್ತಿ ತೆರಿಗೆ ಸಂಗ್ರಹವಾಗಲಿದೆ ಎಂದು ನಿರೀಕ್ಷಿಸಲಾಗಿದೆ. ಆಸ್ತಿ ತೆರಿಗೆಯು ಪಾಲಿಕೆಗೆ ಪ್ರಮುಖ ಆದಾಯದ ಮೂಲವಾಗಿರು ವುದರಿಂದ 2025–26ನೇ ಹಣಕಾಸು ವರ್ಷದಲ್ಲಿ 237 ಕೋಟಿ ರೂ. ಆಸ್ತಿ ಸಂಗ್ರಹವಾಗಬಹುದೆಂದು ನಿರೀಕ್ಷಿಸಲಾಗಿದೆ ಎಂದು ತಿಳಿಸಿದರು.

ಕಳೆದ ವರ್ಷ 251 ಕೋಟಿ ರೂ. ಆದಾಯ ಸಂಗ್ರಹ ಗುರಿ ಇತ್ತಾದರೂ ಕೇವಲ 228 ಕೋಟಿ ರೂ. ಮಾತ್ರ ಆಸ್ತಿ ತೆರಿಗೆ ವಸೂಲು ಮಾಡಲು ಸಾಧ್ಯವಾಗಿತ್ತು. ಉಳಿದ 23 ಕೋಟಿ ರೂ. ಪ್ರಸಕ್ತ ಸಾಲಿಗೆ ಸೇರಿಕೊಂಡಿದೆ. ಮೊದಲ ದಿನ, ಏಪ್ರಿಲ್ 1ರಂದು ಪಾಲಿಕೆಯ ಎಲ್ಲಾ 9 ವಲಯ ಕಚೇರಿಗಳಲ್ಲಿ 2,271 ಮಂದಿ ಆಸ್ತಿ ತೆರಿಗೆ ಪಾವತಿಸಿದ್ದಾರೆ. ಆ ಪೈಕಿ ವಲಯ ಕಚೇರಿ–3ರಲ್ಲಿ 503 ಮಂದಿಯಿಂದ 37,56,580 ರೂ. ದಾಖಲೆ ತೆರಿಗೆ ಸಂಗ್ರಹವಾದರೆ, ವಲಯ ಕಚೇರಿ–7ರಲ್ಲಿ 87 ಮಂದಿಯಿಂದ ಅತೀ ಕಡಿಮೆ 5,76,206 ರೂ. ವಸೂಲಿಯಾಗಿದೆ.

ಆಸ್ತಿ ತೆರಿಗೆಯನ್ನು ಆನ್‌ಲೈನ್‌ನಲ್ಲೂ, ಯುಪಿಐ, ಡೆಬಿಟ್ ಕಾರ್ಡ್, QR ಕೋಡ್‌ಗಳ ಮೂಲಕವೂ ಪಾವತಿಸುವ ಅವಕಾಶವಿರುವುದರಿಂದ ಜನರು ತಾವಿರುವಲ್ಲೇ ಸ್ಮಾರ್ಟ್ ಫೋನ್‌ಗಳಿಂದಲೇ ಆಸ್ತಿ ತೆರಿಗೆ ಪಾವತಿಸಲು ಆಸಕ್ತಿ ತೋರುತ್ತಿದ್ದಾರೆ.

ಆರ್ಥಿಕ ಮುಗ್ಗಟ್ಟಿನಿಂದಾಗಿ ನಗರ ನಿರ್ವಹಣೆಗೆ ಪರದಾಡುತ್ತಿರುವ ಮೈಸೂರು ಮಹಾನಗರ ಪಾಲಿಕೆಗೆ ಆಸ್ತಿ ತೆರಿಗೆಯು ಸಂಪನ್ಮೂಲವಾಗಲಿದೆ. ರಿಯಾಯಿತಿ ಅವಧಿಯ 2ನೇ ದಿನವಾದ ಇಂದು (ಏ. 2) ಸಹ ಅತೀ ಹೆಚ್ಚು ಆಸ್ತಿ ತೆರಿಗೆ ಪಾವತಿಯಾಗಿದೆ ಎಂದು ಸೋಮಶೇಖರ್ 'ಮೈಸೂರು ಮಿತ್ರ'ನಿಗ ತಿಳಿಸಿದ್ದಾರೆ.

ಎರಡನೇ ದಿನ 3.26 ಕೋಟಿ ಸಂಗ್ರಹ

ಮೈಸೂರು, ಏ. 2– ಎರಡನೇ ದಿನವಾದ ಇಂದು ಮೈಸೂರು ಮಹಾನಗರ ಪಾಲಿಕೆಗೆ ಬರೋಬ್ಬರಿ 3,26,53,063 ರೂ. ಆಸ್ತಿ ತೆರಿಗೆ ಸಂಗ್ರಹವಾಗಿದೆ. ಪಾಲಿಕೆಯ ಎಲ್ಲಾ 9 ವಲಯ ಕಚೇರಿಗಳಲ್ಲಿ ಆನ್‌ಲೈನ್ ಮೂಲಕ 63,25,885 ರೂ., ಕರ್ನಾಟಕ ಒನ್‌ನಲ್ಲಿ 67,32,947 ರೂ., ಬ್ಯಾಂಕ್ ಕೌಂಟರ್‌ನಲ್ಲಿ 1,58,46,707 ರೂ. ಸೇರಿ ಒಟ್ಟು 3,26,53,063 ರೂ. ಆಸ್ತಿ ತೆರಿಗೆ ಒಂದೇ ದಿನ ಪಾಲಿಕೆ ಖಾತೆಗೆ ಜಮೆಯಾಗಿದೆ.

ಮೈಸೂರು ಮಿತ್ರ ಗುರುವಾರ 3 ಏಪ್ರಿಲ್ 2025

ಮಂಡ್ಯದಲ್ಲೊಂದು ಪ್ರೀತಿ, ಪ್ರೇಮ, ವಿವಾಹ, ದೋಖಾ

ಇಬ್ಬರು ಯುವಕರಿಗೆ ವಂಚಿಸಿ, ಹಣ, ಒಡವೆ ದೋಚಿಕೊಂಡು ಮತ್ತೊಬ್ಬನೊಂದಿಗೆ ಪರಾರಿಯಾದ ಯುವತಿ



ಮಂಡ್ಯ: ಪ್ರೀತಿ, ಪ್ರೇಮದ ನಾಟಕವಾಡಿ ಮದುವೆಯಾಗುವುದಾಗಿ ನಂಬಿಸಿ ಇಬ್ಬರು ಯುವಕರಿಗೆ ವಂಚಿಸಿ ಹಣ, ಒಡವೆ ದೋಚಿಕೊಂಡು ಮತ್ತೋರ್ವ ಯುವಕನೊಂದಿಗೆ ಪರಾರಿಯಾಗಿರುವ ಮಹಿಳೆ ವಿರುದ್ಧ ಮಂಡ್ಯ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಜಿಲ್ಲೆಯ ಮದ್ದೂರು ತಾಲೂಕಿನ ಕೆಸ್ತೂರು ಗ್ರಾಮದ ವೈಷ್ಣವಿ ಎಂಬಾಕೆಯೇ ಈ ರೀತಿ ಮೋಸ ಮಾಡಿರುವ ಮಹಿಳೆಯಾಗಿದ್ದು, ಈಕೆ ಮೂವರು ಯುವಕರೊಂದಿಗೆ ಪ್ರೀತಿ, ಪ್ರೇಮದ ಆಟವಾಡಿ ಇಬ್ಬರಿಗೆ ವಂಚಿಸಿರುವ ಅಂಶ ತಡವಾಗಿ ಬೆಳಕಿಗೆ ಬಂದಿದೆ.

ವೈಷ್ಣವಿ ಹಾಸನ ಮೂಲದ ರಘು ಎಂಬಾತನೊಂದಿಗೆ ಕಳೆದ ಐದು ವರ್ಷದಿಂದ ಪ್ರೀತಿಸುವ ನಾಟಕವಾಡಿ, ಆತನೊಂದಿಗೆ ಅದ್ದೂರಿಯಾಗಿ ನಿಶ್ಚಿತಾರ್ಥ ಸಹ ಮಾಡಿಕೊಂಡು ಧರ್ಮಸ್ಥಳದಲ್ಲಿ ಎರಡು ವರ್ಷಗಳ ಹಿಂದೆ ಮದುವೆಗೆ ತಯಾರಿ ಸಹ ಮಾಡಿಕೊಂಡಿದ್ದಳು. ಆ ಸಂದರ್ಭದಲ್ಲಿ ರಘು ಮನೆಯವರು ವೈಷ್ಣವಿಗೆ ಸೀರೆ ಆಭರಣಗಳನ್ನು ಕೊಟ್ಟಿದ್ದರು. ಆದರೆ ಮದುವೆಗೆ ಕೆಲ ಗಂಟೆಗಳು ಮಾತ್ರ ಇದ್ದಾಗ ಶಿವು ಎಂಬ ಯುವಕನ ಜೊತೆಗೆ ಧರ್ಮಸ್ಥಳದಿಂದ ಪರಾರಿಯಾಗಿದ್ದಳು. ಅದೇ ದಿನ ರಘು ಬದಲು ಶಿವು ಜೊತೆಗೆ ಮದುವೆಯಾಗಿದ್ದ ವೈಷ್ಣವಿ, ರಘು ಮತ್ತು ಶಿವು ಇಬ್ಬರನ್ನು ಪ್ರೀತಿಸುತ್ತಿದ್ದಳು ಎನ್ನಲಾಗಿದೆ. ಆದರೆ ಮದುವೆಯಾದ ಒಂದು ವರ್ಷದ ಬಳಿಕ ಶಿವು ಮತ್ತು ವೈಷ್ಣವಿ ಸಂಸಾರದಲ್ಲಿ ಬಿರುಕು ಮೂಡಿದ್ದು, ಫೈನಾನ್ಸ್ ವ್ಯವಹಾರದಲ್ಲಿ ಮಂಡ್ಯದ ಶಶಿ ಎಂಬಾತ ವೈಷ್ಣವಿಗೆ ಪರಿಚಯವಾಗಿದ್ದಾನೆ.

ಬಳಿಕ ಶಶಿ ಜೊತೆಗೆ ವೈಷ್ಣವಿಗೆ ಪ್ರೇಮಾಂಕುರವಾಗಿದ್ದು, ಶಶಿ ಎಂಬಾತ ವೈಷ್ಣವಿ ಪ್ರೀತಿಯ ಬಲೆಯಲ್ಲಿ ಬಿದ್ದಿದ್ದ ಎನ್ನಲಾಗಿದೆ. ಆದರೆ ಈ ನಡುವೆ ಸಂಸಾರ ಸರಿಮಾಡಿಕೊಂಡು ಶಿವು ಜೊತೆಗೆ ಸಂಸಾರ ಮುಂದುವರೆಸುತ್ತಲೇ ಶಶಿ ಸಂಪರ್ಕವನ್ನು ಹೊಂದಿದ್ದ ವೈಷ್ಣವಿ, ಬೆಂಗಳೂರಿನಲ್ಲಿ ಓದುತ್ತೇನೆ ಎಂದು ಪ್ರಿಯಕರ ಶಶಿಗೆ ಕಥೆ ಹೇಳಿ ಶಿವು ಜೊತೆಗೆ ಸಂಸಾರ ಮಾಡುತ್ತಿದ್ದಳು ಎನ್ನಲಾಗಿದೆ.

ಜೊತೆಗೆ ಪಿಜಿ, ಮೊಬೈಲ್, ಅಂತ ಶಶಿ ಬಳಿ ತುಂಬಾ ಹಣ ವಸೂಲಿ ಮಾಡಿದ್ದ ವೈಷ್ಣವಿ, ಕಳೆದ ಮಾ.24ರಂದು ಶಶಿ ಜೊತೆಗೆ ಆದಿಚುಂಚನಗಿರಿಯಲ್ಲಿ ಶಾಸ್ತ್ರೋಕ್ತವಾಗಿ ವಿವಾಹವನ್ನು ಸಹ ಆಗಿದ್ದಾಳೆ. ಮದುವೆಯಾದ 24 ಗಂಟೆಯಲ್ಲೇ ವೈಷ್ಣವಿ ಶಶಿಯನ್ನು ಬಿಟ್ಟು ಪರಾರಿಯಾಗಿದ್ದು, ವೈಷ್ಣವಿ ಶಶಿ ಬಳಿ ಸುಮಾರು 15 ಲಕ್ಷ ಹಣ ವಸೂಲಿ ಮಾಡಿದ್ದಾಳೆನ್ನಲಾಗಿದೆ.

ಆರಂಭದಲ್ಲಿ ರಘು ಎಂಬಾತನಿಗೆ ಮೋಸ ಮಾಡಿ ಶಿವು ಎಂಬುವವನನ್ನು ಮದುವೆಯಾಗಿದ್ದ ವೈಷ್ಣವಿ, ಪತಿ ಶಿವು ಇರುವಾಗಲೇ ಶಶಿ ಎಂಬಾತನನ್ನು ಮದುವೆಯಾಗಿ ಆತನಿಗೂ ಮೋಸ ಮಾಡಿದ್ದು, ಇದೀಗ ಪರಾರಿಯಾಗಿರುವ ವೈಷ್ಣವಿಗೆ ಮಂಡ್ಯ ಗ್ರಾಮಾಂತರ ಪೊಲೀಸರು ಬಲೆ ಬೀಸಿದ್ದಾರೆ.

ಪಿಕಪ್ ನಾಲೆ ಆಧುನೀಕರಣಕ್ಕೆ ಗುದ್ದಲಿ ಪೂಜೆ



ಭಾರತೀನಗರ ಸಮೀಪದ ಕಾಡುಕೊತ್ತನಹಳ್ಳಿ ಗ್ರಾಮದಲ್ಲಿ 499 ಲಕ್ಷ ರೂ. ವೆಚ್ಚದಲ್ಲಿ ಕಾಡುಕೊತ್ತನಹಳ್ಳಿ, ಅರೆಬಾಕನಹಳ್ಳಿ ಪಿಕಪ್ ನಾಲೆ ಆಧುನೀಕರಣ ಕಾಮಗಾರಿಗೆ ಶಾಸಕ ಉದಯ್ ಗುದ್ದಲಿ ಪೂಜೆ ನೆರವೇರಿಸಿದರು. ಇದೇ ವೇಳೆ ಮುಖಂಡರಾದ ಎಸ್ಸಿ/ಎಸ್ಟಿ ಜಾಗೃತಿ ಸಮಿತಿ ಸದಸ್ಯ ಚಿದಂಬರಮೂರ್ತಿ, ಕಾಡುಕೊತ್ತನಹಳ್ಳಿ ಗ್ರಾಪಂ ಅಧ್ಯಕ್ಷ ವೀರಭದ್ರ ಮಾಜಿ ಅಧ್ಯಕ್ಷರಾದ ಕಪನೀಗೌಡ, ದಯಾನಂದ್, ತಾ.ಪಂ ಮಾಜಿ ಅಧ್ಯಕ್ಷ ಕಪನಯ್ಯ, ಗ್ರಾ.ಪಂ ಸದಸ್ಯರಾದ ಈ.ರುದ್ರಯ್ಯ ಉಪಸ್ಥಿತರಿದ್ದರು.

ವೈರಮುಡಿ ಬ್ರಹ್ಮೋತ್ಸವಕ್ಕೆ ಚಾಲನೆ

ಮೇಲುಕೋಟೆ: ಚೆಲುವನಾರಾಯಣ ಸ್ವಾಮಿಯ ವಿಶ್ವಾವಸು ಸಂವತ್ಸರದ ವೈರಮುಡಿ ಬ್ರಹ್ಮೋತ್ಸವ ಅಂಕುರಾರ್ಪಣೆಯೊಂದಿಗೆ ಬುಧವಾರ ವಿದ್ಯುಕ್ತವಾಗಿ ಆರಂಭವಾಗಿದೆ ಅಂಕುರಾರ್ಪಣೆಯ ಅಂಗವಾಗಿ ದೇವಸೇನ ವಿಶ್ವಕ್ಸೇನರ ಉತ್ಸವ ಹಾಗೂ ಮೃತ್ತಿಕಾ ಸಂಗ್ರಹಣ ಕಾರ್ಯಕ್ರಮ ಶಾಸ್ತ್ರೋಕ್ತವಾಗಿ ನಡೆಯಿತು.

ಮೇಲುಕೋಟೆ ದೇವಾಲಯದಲ್ಲಿ ರಾಮಾನುಜಾಚಾರ್ಯರ ಕಾಲದಿಂದ ದುಡಿಯುವ ವರ್ಗಕ್ಕೆ ಪ್ರಾಧಾನ್ಯತೆ ನೀಡಲಾಗಿದ್ದು, ಅಂಕರಾರ್ಪಣೆಗೂ ಮುನ್ನ ಬಂಡೀಕಾರರ ಮಂಟಪಕ್ಕೆ ಮುತ್ತುಮುಡಿಯೊಂದಿಗೆ ಸ್ವಾಮಿಯ ಉತ್ಸವ ನೆರವೇರಿತು. ವೈರಮುಡಿ ಜಾತ್ರಾ ಮಹೋತ್ಸವದಲ್ಲಿ ರಥ ಚಾಲನೆ, ವಾಹನ ಕಟ್ಟುವುದು, ತೆಪ್ಪಮಂಟಪ ಸಿದ್ಧತೆ ಹಸಿರು ತೋರಣ ಕಟ್ಟುವ ಸೇವೆ ಮಾಡುವ ಬಂಡೀಕಾರರು ಪೂರ್ವಕಾಲದಲ್ಲಿ ಬೆಟ್ಟದ ತಪ್ಪಲಿನಲ್ಲಿ ನಿರ್ಮಿಸಿದ ಮಂಟಪಕ್ಕೆ ಮುತ್ತುಮುಡಿಯೊಂದಿಗೆ ಸ್ವಾಮಿಯ ಉತ್ಸವ ನೆರವೇರಿದ ವೇಳೆ ವಂಶಪಾರಂಪರ್ಯದ



ಬಂಡೀಕಾರರಾದ ನಂದಕುಕುಮಾರ್, ವಿಜಯಕುಮಾರ್, ಲೋಕೇಶ್, ಬಲರಾಮರಿಗೆ ಸ್ವಾಮಿಯ ಮಾಲೆಮರ್ಯಾದೆ ಮಾಡಲಾಯಿತು. ಬಂಡೀಕಾರರು ಪ್ರಥಮ ದಿನ ಸೇವಾ ಕೈಂಕರ್ಯವನ್ನು ಭಕ್ತಿಯಿಂದ ನೆರವೇರಿಸಿದರು.

ಇಂದು ಕಲ್ಯಾಣೋತ್ಸವ: ಚೆಲುವನಾರಾಯಣಸ್ವಾಮಿಗೆ ಗುರುವಾರ ಸಂಜೆ ಕಲ್ಯಾಣಿಯ ಧಾರಾಮಂಟಪದಲ್ಲಿ ಕಲ್ಯಾಣೋತ್ಸವ ವೈಭವದಿಂದ ನೆರವೇರಲಿದೆ. ಸಮನ್ನಾಲೆ, ಲಾಜಹೋಮದ ಶಾಸ್ತ್ರೋಕ್ತ ವಿಧಿವಿಧಾನಗಳೊಂದಿಗೆ ಲೋಕಕಲ್ಯಾಣಾರ್ಥವಾಗಿ ಚೆಲುವನಾರಾಯಣಸ್ವಾಮಿ ಮತ್ತು ಕಲ್ಯಾಣನಾಯಕಿಗೆ ಕಲ್ಯಾಣೋತ್ಸವ ನಡೆಯಲಿದೆ. ಉತ್ಸವದ ಅಂಗವಾಗಿ ಧಾರಾಮಂಟಪಕ್ಕೆ ವಿಶೇಷ ಪುಷ್ಪಾಲಂಕಾರ ಹಾಗೂ ದೀಪಾಲಂಕಾರ ಮಾಡಲಾಗುತ್ತಿದೆ.

ವೈರಮುಡಿ ಉತ್ಸವದಲ್ಲಿ 24 ಗಂಟೆ ಪ್ರಸಾದ ವಿತರಣೆ

ಏ.7ರ ವೈರಮುಡಿ ಉತ್ಸವದಂದು ದಿನದ 24 ಗಂಟೆಯೂ ಅನ್ನದಾನ ಮಾಡಲು ಸಿದ್ಧತೆ ಮಾಡಿ ಎಂದು ಅಪರ ಜಿಲ್ಲಾಧಿಕಾರಿ ಶಿವಾನಂದಮೂರ್ತಿ ಸೂಚಿಸಿದರು. ಪ್ರಸಾದ ವಿತರಿಸಲು 8 ಕೌಂಟರ್ ನಿರ್ಮಾಣ ಮಾಡಿ. ವೈರಮುಡಿ ಜಾತ್ರಾ ಮಹೋತ್ಸವ ನಡೆಯುವ ಹತ್ತು ದಿನಗಳಂದು ಒಂದೊಂದು ದಿನ ಅನ್ನದಾನ ಮಾಡಲು ಅವಕಾಶವಿದೆ. ಅನ್ನದಾನ ಮಾಡಲು ಇಚ್ಚಿಸುವ ದಾನಿಗಳು ಅಥವಾ ಸಂಘ ಸಂಸ್ಥೆಯವರು ಜಿಲ್ಲಾಡಳಿತ ಅಥವಾ ದೇವಾಲಯದ ಕಚೇರಿಯನ್ನು ಸಂಪರ್ಕಿಸಬಹುದು. ಅನ್ನದಾನಕ್ಕೆ ಅಕ್ಕಿಬೇಳೆ ಎಣ್ಣೆ ತರಕಾರಿಗಳನ್ನು ಭಕ್ತರು ನೀಡಲು ಅವಕಾಶವಿದೆ ಎಂದರು.

ಈ ಬಾರಿ ವಿಭಿನ್ನ, ವೈಭವದ ರಾಜಮುಡಿ ತೆಪ್ಪೋತ್ಸವ

ಏ.11 ರಂದು ರಾತ್ರಿ ಕಲ್ಯಾಣಿಯಲ್ಲಿ ನಡೆಯುವ ರಾಜಮುಡಿ ತೆಪ್ಪೋತ್ಸವವನ್ನು ಶ್ರೀವೈಷ್ಣವ ಸಂಪ್ರದಾಯದಂತೆ ಮತ್ತು ಸಾಂಸ್ಕೃತಿಕ ವಿಶೇಷದೊಂದಿಗೆ ಆಚರಿಸಲಾಗುತ್ತದೆ. ಕರ್ನಾಟಕ ಶಾಸ್ತ್ರೀಯ ಸಂಗೀತ, ಮ್ಯಾಂಡಲಿನ್, ಚಂಡೆವಾದನ, ನಾದ ಸ್ವರವಾದನದೊಂದಿಗೆ ತೆಪ್ಪೋತ್ಸವ ನಡೆಸಲಾಗುತ್ತದೆ. ಕಲ್ಯಾಣಿಗೆ ವಿಶೇಷ ದೀಪಾಲಂಕಾರ, ತೆಪ್ಪಮಂಟಪಕ್ಕೆ ಆಕರ್ಷಕ ಪುಷ್ಪಾಲಂಕಾರ ಮಾಡಿಸಿ ಮೇಲುಕೋಟೆ ಮಹತ್ವ ಬಿಂಬಿಸುವ ಲೇಸರ್ ಶೋ ಹಮ್ಮಿಕೊಳ್ಳಲಾಗಿದೆ.

ರೈತಸಂಘದ ಮುಖಂಡರೊಂದಿಗೆ ಜಿ.ಪಂ ಸಿಇಓ ಸಭೆ



ಕೆ.ಆರ್.ಪೇಟೆ ತಾಲೂಕಿನ ವಿವಿಧ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿನ ರೈತರ ಸಮಸ್ಯೆಗಳನ್ನು ಕುರಿತು ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಕೆ.ಆರ್. ನಂದಿನಿ ತಾಲೂಕು ರೈತ ಸಂಘದ ಮುಖಂಡರುಗಳೊಂದಿಗೆ ಸಭೆ ನಡೆಸಿ ಚರ್ಚಿಸಿದರು

ಬಾಬೂಜಿ ಜನ್ಮ ದಿನಾಚರಣೆ

ಮಂಡ್ಯ: ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಸಮಾಜ ಕಲ್ಯಾಣ ಇಲಾಖೆ, ನಗರ ಸಭೆ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಡಾ.ಬಾಬು ಜಗಜೀವನರಾಂ ಅವರ 118ನೇ ಜನ್ಮ ದಿನಾಚರಣೆಯನ್ನು ಏ.5 ರಂದು ಬೆಳಿಗ್ಗೆ 10.45 ಗಂಟೆಗೆ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ಆಯೋಜಿಸಲಾಗಿದೆ. ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದು, ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ಉದ್ಘಾಟಿಸಲಿದ್ದಾರೆ.

ನಾಳೆ ನಿವೃತ್ತ ಸರ್ಕಾರಿ ನೌಕರರ ಸಂಘದ ಸಮಾವೇಶ

ಮಂಡ್ಯ: ಸರ್ಕಾರಿ ನಿವೃತ್ತ ನೌಕರರ ಸಂಘದ ವತಿಯಿಂದ ವತಿಯಿಂದ ಏ.4 ರಂದು ರಾಜ್ಯ ಮಟ್ಟದ ಕಾರ್ಯಾಗಾರ ಮತ್ತು ಸಮಾವೇಶ ಕಾರ್ಯಕ್ರಮವನ್ನು ಬೆಂಗಳೂರಿನ ಪ್ರಿನ್ಸ್ ಶೈನ್ ಅರಮನೆ ಮೈದಾನದ ಆವರಣದಲ್ಲಿ ಆಯೋಜಿಸಲಾಗಿದ್ದು, ಜಿಲ್ಲೆಯ ಎಲ್ಲಾ ಸರ್ಕಾರಿ ನಿವೃತ್ತ ನೌಕರರು ಭಾಗವಹಿಸುವಂತೆ ಜಿಲ್ಲಾ ಸಂಘದ ಅಧ್ಯಕ್ಷ ಕೆ.ಬಿ.ಶಿವಲಿಂಗಯ್ಯ ಮನವಿ ಮಾಡಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾರ್ಯಕ್ರಮವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಉದ್ಘಾಟಿಸಲಿದ್ದು, ಸಚಿವ ಸಂಪುಟದ ಇತರೆ ಸಚಿವರು ಭಾಗವಹಿಸಲಿದ್ದಾರೆ ಎಂದರು.

ಕಾರ್ಯಕ್ರಮದಲ್ಲಿ ಸರ್ಕಾರಿ ನಿವೃತ್ತ ನೌಕರರ ಬೇಡಿಕೆಗಳಾದ ನಗದು ರಹಿತ ಆರೋಗ್ಯ ಭಾಗ್ಯದ ಸಂಧ್ಯಾ ಕಿರಣ ಯೋಜನೆ ಅನುಷ್ಠಾನ, 70ರಿಂದ 80 ವರ್ಷದೊಳಗಿನ ನಿವೃತ್ತ ನೌಕರರು ಅವರ ಕುಟುಂಬದವರಿಗೆ ಶೇ.10 ರಷ್ಟು ಪಿಂಚಣಿ ಆರ್ಥಿಕ ಸೌಲಭ್ಯ, 2022ರಿಂದ 2024ರವರೆಗೆ ನಿವೃತ್ತಿ ಹೊಂದಿದವರಿಗೆ ಪಿಂಚಣಿ ಆರ್ಥಿಕ ಸೌಲಭ್ಯ ಒದಗಿಸುವುದು, ನಿವೇಶನ ಜಿಲ್ಲಾ ಹಾಗೂ ತಾಲೂಕು ಸಂಘಗಳಿಗೆ ಉಚಿತ ನಿವೇಶನ ಒದಗಿಸುವುದು, 7ನೇ ವೇತನ ಆಯೋಗದ ಶಿಫಾರಸ್ಸಿನ ಅಂಶಗಳನ್ನು ಯಥಾವತ್ತಾಗಿ ಜಾರಿಗೊಳಿಸುವ ಬೇಡಿಕೆಗಳನ್ನು ಈಡೇರಿಸುವಂತೆ ಮನವಿ ಮಾಡಲಾಗುವುದು ಎಂದು ಹೇಳಿದರು.

ಮಂಡ್ಯ ಜಿಲ್ಲೆಯಿಂದ 8 ಬಸ್‌ಗಳಲ್ಲಿ 400 ರಿಂದ 500 ಮಂದಿ ಸರ್ಕಾರಿ ನಿವೃತ್ತ ನೌಕರರು ಸಮಾವೇಶದಲ್ಲಿ ಭಾಗವಹಿಸಲಿದ್ದಾರೆ.

ಇಂದು ಜಾನಪದ ಜಾತ್ರೆ

ಮಂಡ್ಯ, ಏ.2– ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ ವತಿಯಿಂದ ಮಹಿಳಾ ಸರ್ಕಾರಿ ಕಾಲೇಜಿನಲ್ಲಿ 2025ರ ಜಾನಪದ ಜಾತ್ರೆ ಸಮಾರಂಭವನ್ನು ಏ.3 ರಂದು ಬೆಳಿಗ್ಗೆ 10 ಗಂಟೆಗೆ ಮಹಿಳಾ ಸರ್ಕಾರಿ ಕಾಲೇಜಿನ ವನರಂಗದಲ್ಲಿ ಆಯೋಜಿಸಲಾಗಿದೆ. ವಿಧಾನಸಭಾ ಕ್ಷೇತ್ರ ಶಾಸಕರು ಮತ್ತು ಕಾಲೇಜು ಅಭಿವೃದ್ಧಿ ಸಮಿತಿ ಅಧ್ಯಕ್ಷರಾದ ಪಿ.ರವಿಕುಮಾರ್ ಅವರು ಕಾರ್ಯಕ್ರಮ ಉದ್ಘಾಟಿಸಲಿದ್ದು, ಮಹಿಳಾ ಸರ್ಕಾರಿ ಕಾಲೇಜಿನ ಪ್ರಾಂಶುಪಾಲರಾದ ಡಾ. ಗುರುರಾಜ್ ಪ್ರಭು.ಕೆ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದಾರೆ.

ಮುಖ್ಯ ಅತಿಥಿಗಳಾಗಿ ಜನಪದ ಗಾಯಕರು ಹಾಗೂ ರಂಗಾಯಣದ ಮಾಜಿ ನಿರ್ದೇಶಕರಾದ ಜನಾರ್ಧನ್.ಹೆಚ್ ಅವರು ಆಗಮಿಸಲಿದ್ದಾರೆ.

ಬೈಕಿಗೆ ಗುದ್ದಿ ಕಂಬಕ್ಕೆ ಡಿಕ್ಕಿ ಹೊಡೆದ ಕಾರು

ಬೈಕ್ ಸವಾರ, ಕಾರಿನ ಚಾಲಕನಿಗೆ ಗಾಯ

ಭಾರತೀನಗರ.ಏ.2–ಇಲ್ಲಿಗೆ ಸಮೀಪದ ಬಿದರ ಹೊಸಹಳ್ಳಿ ಗೇಟ್ ಬಳಿ ಕಾರೊಂದು ಬೈಕ್‌ಗೆ ಗುದ್ದಿ ವಿದ್ಯುತ್ ಕಂಬಕ್ಕೆ ಡಿಕ್ಕಿ ಹೊಡೆದ ಪರಿಣಾಮ ಬೈಕ್ ಮತ್ತು ಕಾರಿನ ಚಾಲಕರಿಬ್ಬರಿಗೂ ಗಂಭೀರವಾಗಿ ಗಾಯಗೊಂಡಿರುವ ಘಟನೆ ಜರುಗಿದೆ.



ಮಳವಳ್ಳಿ ತಾಲೂಕಿನ ಮಾದಹಳ್ಳಿ ಗ್ರಾಮದ ಬೈಕ್ ಸವಾರ ಗಿರೀಶ್ ಮತ್ತು ಕಾರಿನ ಚಾಲಕ ಬಸವರಾಜು ಗಾಯಗೊಂಡಿದ್ದು, ಆಸ್ಪತ್ರೆಗೆ ಸೇರಿಸಲಾಗಿದೆ. ಚಾಮರಾಜನಗರ ಜಿಲ್ಲೆಯಿಂದ ಮದ್ದೂರು ಮಾರ್ಗವಾಗಿ ಬರುತ್ತಿದ್ದ ಕಾರು ಮಾದಹಳ್ಳಿ ಗ್ರಾಮದಿಂದ ಬರುತ್ತಿದ್ದ ಬೈಕ್‌ಗೆ ಡಿಕ್ಕಿ ಹೊಡೆದು ನಿಯಂತ್ರಣ ತಪ್ಪಿ ಕಾರಿನ ಚಾಲಕ ವಿದ್ಯುತ್ ಕಂಬಕ್ಕೆ ಡಿಕ್ಕಿ ಹೊಡೆದಿದ್ದಾನೆ.

ಕಾರಿನ ಮಾಲೀಕ ಚಾಮರಾಜ ನಗರ ಜಿಲ್ಲೆಯ ವೆಂಕಟಯ್ಯನಛತ್ರ ಗ್ರಾಮದ ಬಸವರಾಜು ಎಂಬುದು ತಿಳಿದು ಬಂದಿದೆ. ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿ ನಂತರ ಕಾರು ಮತ್ತು ಬೈಕ್‌ನನ್ನು ಕೆ.ಎಂ.ದೊಡ್ಡಿ ಪೊಲೀಸರು ವಶಕ್ಕೆ ಪಡೆದು ಕೊಂಡಿದ್ದಾರೆ.

ಪ್ರೀತಿಗಾಗಿ ಎರಡು ಗುಂಪುಗಳ ನಡುವೆ ಘರ್ಷಣೆ

ನಾಲ್ವರಿಗೆ ಗಾಯ

ಮದ್ದೂರು: ಪ್ರೀತಿ ವಿಚಾರಕ್ಕೆ ಎರಡು ಗುಂಪುಗಳ ನಡುವೆ ಘರ್ಷಣೆ ಸಂಭವಿಸಿ ನಾಲ್ವರಿಗೆ ಗಾಯಗಳಾಗಿರುವ ಘಟನೆ ಮಂಗಳವಾರ ರಾತ್ರಿ ಪಟ್ಟಣದ ಕೆಮ್ಮಣ್ಣು ನಾಲೆ ಸರ್ಕಲ್ ಬಳಿ ನಡೆದಿದೆ.

ಘಟನೆಯಲ್ಲಿ ಪಟ್ಟಣದ ಸಿದ್ಧಾರ್ಥನಗರದ ರಘು, ಗಂಗಾಧರ ಆಲಿಯಾಸ್ ಜೋಗಿ, ಯೋಗೇಶ ಹಾಗೂ ಸುಧಾ ಅವರು ಗಾಯಗೊಂಡಿದ್ದು, ಪಟ್ಟಣದ ಗುರುಶಾಂತಪ್ಪ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಂಡಿದ್ದಾರೆ, ಇವರಿಗೆ ಕೆಮ್ಮಣ್ಣುನಾಲೆ ಸರ್ಕಲ್ ಬಳಿ ವಾಸವಿರುವ ವೀರಸ್ವಾಮಿ ಹಾಗೂ ಅಪ್ರಾಪ್ತ ಬಾಲಕ (ಕಾನೂನು ಸಂಘ ರ್ಷಕ್ಕೊಳಗಾದ ಬಾಲಕ) ಸೇರಿದಂತೆ ಆರು ಮಂದಿ ಹಲ್ಲೆ ಮಾಡಿದರು ಎಂದು ತಿಳಿದು ಬಂದಿದೆ.

ಘಟನೆ ವಿವರ: ರಘು ಹಾಗೂ ಸ್ನೇಹಿತ ಗಂಗಾಧರ ಆಲಿಯಾಸ್ ಜೋಗಿ ಇಬ್ಬರು ಮಂಗಳವಾರ ರಾತ್ರಿ 11 ಗಂಟೆಯ ಸಮಯದಲ್ಲಿ ಕೆಮ್ಮಣ್ಣುನಾಲೆ ಸರ್ಕಲ್ ಇದ್ದಾಗ ಘಟನೆ ನಡೆದಿದೆ, ಈ ವೇಳೆ ಆರು ಮಂದಿ ಇಬ್ಬರನ್ನು ಕರೆದು ಅವಾಚ್ಯ ಶಬ್ದಗಳಿಂದ ನಿಂದಿಸಿ ನಮ್ಮ ಬೀದಿಯ ಹುಡುಗಿಯ ಮೇಲೆ ಕಣ್ಣು ಹಾಕುತ್ತೀರಾ ಎಂದು ಇಬ್ಬರನ್ನು ತಳ್ಳಾಡಿದರು. ನಂತರ ಇಬ್ಬರು ಅಲ್ಲಿಂದ ತೆರಳಲು ಮುಂದಾದಾಗ ಮಾರಕಾಸ್ತ್ರಗಳಿಂದ ಹಲ್ಲೆ ಮಾಡಿದ್ದಾರೆ ಎನ್ನಲಾಗಿದೆ.

ಈ ಸಂಬಂಧ ಪಟ್ಟಣದ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡಿದ್ದಾರೆ. ಎರಡು ಗುಂಪುಗಳ ನಡುವೆ ನಡೆದ ಘರ್ಷಣೆಯ ವಿಡಿಯೋ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಕೂಡಾ ಆಗಿದೆ.

ಒಂದನೇ ಪುಟದಿಂದ

ವಕ್ಫ್ ತಿದ್ದುಪಡಿ ಮಸೂದೆಗೆ ಲೋಕಸಭೆಯಲ್ಲಿ ಅಂಗೀಕಾರ

ಸುದೀರ್ಘ ಭಾಷಣ ಮಾಡಿದ ಸಚಿವ ಕಿರಣ್ ರಿಜಿಜು, ಹೊಸ ನಾಮಕರಣಕ್ಕೆ ಕಾರಣವನ್ನು ಕೊಟ್ಟಿದ್ದಾರೆ.

ಬಿಜೆಪಿಯ ಮಿತ್ರಪಕ್ಷಗಳಾದ ಮತ್ತು ಈ ಬಿಲ್ ಪಾಸ್ ಆಗಲು ನಿರ್ಣಾಯಕವಾಗಿರುವ ತೆಲುಗುದೇಶಂ, ಜೆಡಿಯು ಮತ್ತು ಎಲ್‌ಜೆಪಿ ಪಾರ್ಟಿಯು ಈ ವಿವಾದಿತ ಮಸೂದೆಗೆ ಬೆಂಬಲ ನೀಡಿವೆ. ಕೆಲವೊಂದು ಬದಲಾವಣೆಗಳನ್ನು ಈ ಮೂರು ಪಕ್ಷಗಳು ಸೂಚಿಸಿದ್ದವು. ಅದನ್ನು, ಸಂಸದೀಯ ಮಂಡಳಿ ಜಾರಿಗೆ ತಂದಿತ್ತು. ವಕ್ಫ್ ಬಿಲ್ ಇನ್ನು ಮುಂದೆ 'ಉಮೀದ್' ಎಂದು ಬದಲಾಗಲಿದೆ. ಇದು ಹೊಸ ಭರವಸೆಯ ಸಂಕೇತ. (UMEED-Unified Management Empowerment Efficiency Development) ಈ ಹೊಸ ಹೆಸರಿನ ಅರ್ಥ ಎಂದು ಸಚಿವರು ಇದಕ್ಕೆ ಸ್ಪಷ್ಟನೆಯನ್ನು ನೀಡಿದ್ದಾರೆ. ಹೆಸರು ಬದಲಾವಣೆಗೆ ಅವರು ಕಾರಣವನ್ನೂ ನೀಡಿದ್ದಾರೆ.

ಈಗಿರುವ ಎಲ್ಲಾ ಪದ್ಧತಿಗಳನ್ನು ತೆಗೆದು ಆಮೂಲಾಗ್ರವಾಗಿ ಬದಲಾವಣೆಗಳನ್ನು ತರಲು ನಾವು ಕಟಿಬದ್ಧರಾಗಿದ್ದೇವೆ. ಶಿಯಾ, ಸುನ್ನಿ ಸೇರಿದಂತೆ ಮುಸ್ಲಿಂ ಸಮುದಾಯದ ಎಲ್ಲರ ವಿಶ್ವಾಸವನ್ನು ತೆಗೆದುಕೊಂಡು ಹೋಗುವ ಕೆಲಸವನ್ನು ಮಾಡಲಿದ್ದೇವೆ. ಮುಸ್ಲಿಂ ನಿಯೋಗ ನನ್ನ ಮನೆಗೆ ಬಂದು ಬಿಲ್ ಬಗ್ಗೆ ಪ್ರಶಂಸೆಯ ಮಾತನ್ನು ಆಡುತ್ತಿದ್ದಾರೆ ಎಂದು ಕಿರಣ್ ರಿಜಿಜು ಸರ್ಕಾರದ ಕ್ರಮವನ್ನು ಸಮರ್ಥಿಸಿಕೊಂಡಿದ್ದಾರೆ.

ಈ ಬಿಲ್ ಜಾರಿಗೆ ಬಂದ ನಂತರ ಮುಸ್ಲಿಮರು ಯೋಚಿಸುವ ರೀತಿಯೇ ಬದಲಾವಣೆಯಾಗಲಿದೆ. ಆ ಸಮುದಾಯವು ದೊಡ್ಡ ಮಟ್ಟದಲ್ಲಿ ಈ ಬಿಲ್ ಅನ್ನು ಸ್ವಾಗತಿಸುತ್ತಿವೆ. ವಿರೋಧ ಪಕ್ಷಗಳು ಪ್ರತಿರೋಧ ತೋರಿಸಬೇಕು ಎಂಬ ಕಾರಣಕ್ಕಾಗಿ ಈ ಬಿಲ್ ಅನ್ನು ವಿರೋಧಿಸುತ್ತಿವೆ ಎಂದು ಸಚಿವ ಕಿರಣ್ ರಿಜಿಜು, ವಿಪಕ್ಷಗಳ ವಿರುದ್ಧ ಕಿಡಿಕಾರಿದ್ದಾರೆ. ಬಡ ಮುಸ್ಲಿಮರಿಂದ ಆದಷ್ಟು ಬೇಗ ಈ ಬಿಲ್ ಅನ್ನು ಅನುಮೋದನೆ ನೀಡಿ ಎನ್ನುವ ಸಂದೇಶ ನಮ್ಮ ಇಲಾಖೆಗೆ ಬಂದಿತ್ತು. ಹೊಸ ಕಾನೂನು ಜಾರಿಗೆ ಬಂದ ನಂತರ ಕೇಂದ್ರೀಕೃತ ಡೇಟಾ ಸಿಸ್ಟಂ ಜಾರಿಗೆ ಬರಲಿದೆ. ಇದು ಇರುವ ಎಲ್ಲಾ ಗೊಂದಲಗಳಿಗೆ ತೆರೆಬೀಳಲಿದೆ ಎಂದು ಕಿರಣ್ ರಿಜಿಜು ಅಭಿಪ್ರಾಯ ಪಟ್ಟಿದ್ದಾರೆ.

ಈ ಮಸೂದೆಯು ವಕ್ಫ್ ಆಸ್ತಿಗಳ ಆಡಳಿತವನ್ನು ಸುಧಾರಿಸಲು, ತಂತ್ರಜ್ಞಾನ ಆಧಾರಿತ ನಿರ್ವಹಣೆಯನ್ನು ಪರಿಚಯಿಸಲು, ಸಂಕೀರ್ಣತೆಗಳನ್ನು ಪರಿಹರಿಸಲು ಮತ್ತು ಪಾರದರ್ಶಕತೆಯನ್ನು ಖಚಿತಪಡಿಸಿಕೊಳ್ಳಲು ಪ್ರಯತ್ನಿಸುತ್ತದೆ. ಜಂಟಿ ಸಂಸದೀಯ ಸಮಿತಿಯ (ಜೆಪಿಸಿ) ನಡೆಸಿದ ಸಮಾಲೋಚನಾ ಪ್ರಕ್ರಿಯೆಯು ಭಾರತದ ಪ್ರಜಾಪ್ರಭುತ್ವ ಇತಿಹಾಸದಲ್ಲಿಯೇ ಅತಿದೊಡ್ಡ ಪ್ರಕ್ರಿಯೆಯಾಗಿದೆ ಎಂದರು.

ಭಾರತವು ವಿಶ್ವದಲ್ಲೇ ಅತಿ ಹೆಚ್ಚು ವಕ್ಫ್ ಆಸ್ತಿಗಳನ್ನು ಹೊಂದಿದೆ. ವಕ್ಫ್ ಮಸೂದೆ ಬೆಂಬಲಿಸುವ ಮತ್ತು ವಿರೋಧಿಸುವವರನ್ನು ದೇಶ ಯುಗಯುಗಾಂತರಗಳಿಂದ ನೆನಪಿಸಿಕೊಳ್ಳುತ್ತದೆ. 70 ವರ್ಷಗಳಿಂದ ಮತ ಬ್ಯಾಂಕ್ ರಾಜಕೀಯಕ್ಕಾಗಿ ಮುಸ್ಲಿಮರನ್ನು ದಾರಿ ತಪ್ಪಿಸಲಾಯಿತು. ನೀವು ಅವರನ್ನು ಎಷ್ಟು ದಿನ ದಾರಿ ತಪ್ಪಿಸಲು ಬಯಸುತ್ತೀರಿ. ವಕ್ಫ್ ಆಸ್ತಿಯನ್ನು ಬಡ ಮುಸ್ಲಿಮರಿಗಾಗಿ ಬಳಸಬೇಕು, ಈ ಉದ್ದೇಶವನ್ನು ಸಾಧಿಸಲು ವಕ್ಫ್ ಮಸೂದೆ ಅಗತ್ಯವಿದೆ ಎಂದರು.

ಈ ಹಿಂದಿನ ಕಾಂಗ್ರೆಸ್ ನೇತೃತ್ವದ ಯುಪಿಎ ಸರ್ಕಾರವು ವಕ್ಫ್ ಕಾನೂನುಗಳಲ್ಲಿ ಭಾರೀ ತಪ್ಪುಗಳನ್ನು ಮಾಡಿದೆ. ಒಂದು ವೇಳೆ ನಮ್ಮ ಸರ್ಕಾರ ಈ ತಿದ್ದುಪಡಿಗಳನ್ನು ಮಾಡದೇ ಹೋಗಿದ್ದರೆ, ಸಂಸತ್ ಭವನವನ್ನೂ ವಕ್ಫ್ ಆಸ್ತಿ ಎಂದು ಹೇಳಿಕೊಳ್ಳುವ ಸಾಧ್ಯತೆ ಇತ್ತು ಎಂದು ಕಿರಣ್ ರಿಜಿಜು ಗಂಭೀರ ಆರೋಪ ಮಾಡಿದರು. ಕಾಂಗ್ರೆಸ್ ಕೇಂದ್ರದಲ್ಲಿ ಅಧಿಕಾರದಲ್ಲಿದ್ದಾಗ ವಕ್ಫ್ ಕಾನೂನುಗಳಿಗೆ ಅನುಮಾನಾಸ್ಪದ ಬದಲಾವಣೆಗಳನ್ನು ಮಾಡಿದೆ. 123 ಪ್ರಮುಖ ಕಟ್ಟಡಗಳನ್ನು ವಕ್ಫ್‌ಗೆ ನೀಡಲಾಗಿತ್ತು. ಯುಪಿಎ ಸರ್ಕಾರವು ಸಂಸತ್ತನ್ನೂ ವಕ್ಫ್‌ಗೆ ನೀಡಲು ಸಿದ್ಧವಾಗಿತ್ತು. ಆದರೆ 2014ರಲ್ಲಿ ಅಧಿಕಾರಕ್ಕೆ ಬಂದ ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರ, ಈ ಪ್ರಯತ್ನಗಳನ್ನು ತಡೆಹಿಡಿಯಿತು ಎಂದು ಕಿರಣ್ ರಿಜಿಜು ಹೇಳಿದರು.

ಕೇಂದ್ರ ಸರ್ಕಾರವು ಯಾವುದೇ ಧಾರ್ಮಿಕ ಸಂಸ್ಥೆಯ ವಿಚಾರದಲ್ಲಿ ಹಸ್ತಕ್ಷೇಪ ಮಾಡುವುದಿಲ್ಲ. ಈ ಮಸೂದೆಯು ಯಾವುದೇ ಧರ್ಮಕ್ಕೆ ಸಂಬಂಧಿಸಿದ್ದಲ್ಲ. ಆದರೆ, ವಕ್ಫ್ ಆಸ್ತಿಗಳೊಂದಿಗೆ ಮಾತ್ರ ವ್ಯವಹರಿಸುತ್ತದೆ. ಮಸೂದೆಯ ಪ್ರಕಾರ ಯಾವುದೇ ಕಾನೂನಿನ ಅಡಿಯಲ್ಲಿ ಮುಸ್ಲಿಮರು ರಚಿಸಿದ ಟ್ರಸ್ಟ್‌ಗಳನ್ನು ಇನ್ನು ಮುಂದೆ ವಕ್ಫ್ ಎಂದು ಪರಿಗಣಿಸಲಾಗುವುದಿಲ್ಲ, ಮುಸ್ಲಿಮರು (ಕನಿಷ್ಠ ಐದು ವರ್ಷಗಳ ಕಾಲ) ಮಾತ್ರ ತಮ್ಮ ಆಸ್ತಿಯನ್ನು ವಕ್ಫ್‌ಗೆ ಅರ್ಪಿಸಬಹುದು. ಆಸ್ತಿ ವಕ್ಫ್ ಎಂದು ಘೋಷಣೆಯಾಗುವುದಕ್ಕೂ ಮುನ್ನ ವಿಧವೆಯರು, ವಿಚ್ಛೇದಿತ ಮಹಿಳೆಯರು ಹಾಗೂ ಅನಾಥರು ಉತ್ತರಾಧಿಕಾರ ಪಡೆಯಬೇಕು. ವಕ್ಫ್ ಎಂದು ಹೇಳಲಾದ ಸರ್ಕಾರಿ ಆಸ್ತಿಗಳನ್ನು ಕಲೆಕ್ಟರ್ ಹುದ್ದೆಗಿಂತ ಮೇಲಿನ ಅಧಿಕಾರಿಯೊಬ್ಬರು ತನಿಖೆ ನಡೆಸಬೇಕೆಂದು ಮಸೂದೆಯಲ್ಲಿ ಪ್ರಸ್ತಾಪಿಸಲಾಗಿದೆ. ವಿವಾದಗಳಿದ್ದಲ್ಲಿ, ಆಸ್ತಿ ವಕ್ಫ್‌ಗೆ ಸೇರಿದೆಯೇ ಅಥವಾ ಸರ್ಕಾರಕ್ಕೆ ಸೇರಿದೆಯೇ ಎಂಬುದರ ಕುರಿತು ಹಿರಿಯ ಸರ್ಕಾರಿ ಅಧಿಕಾರಿ ಅಂತಿಮ ನಿರ್ಧಾರವನ್ನು ತೆಗೆದುಕೊಳ್ಳುತ್ತಾರೆ. ವಕ್ಫ್ ನ್ಯಾಯಮಂಡಳಿಗಳು ನಿರ್ಧಾರಗಳನ್ನು ತೆಗೆದುಕೊಳ್ಳಲು ಅಸ್ತಿತ್ವದಲ್ಲಿರುವ ವ್ಯವಸ್ಥೆಯನ್ನು ಇದು ಬದಲಾಯಿಸುತ್ತದೆ. ಅಲ್ಲದೆ, ಮುಸ್ಲಿಮೇತರ ಸದಸ್ಯರನ್ನು ಕೇಂದ್ರ ಮತ್ತು ರಾಜ್ಯ ವಕ್ಫ್ ಮಂಡಳಿಗಳಲ್ಲಿ ಸೇರಿಸಲಾಗುತ್ತದೆ ಎಂದು ರಿಜಿಜು ಹೇಳಿದರು.

2004ರ ಹೊತ್ತಿಗೆ ವಕ್ಫ್ ಬಳಿ ಒಟ್ಟು 4.9 ಲಕ್ಷ ರೂ. ಮೌಲ್ಯದ ಆಸ್ತಿ ಇತ್ತು ಮತ್ತು ಆದಾಯ ಕೇವಲ 163 ಕೋಟಿ ರೂ.ಗಳಷ್ಟಿತ್ತು. ಆದರೆ 2013ರ ತಿದ್ದುಪಡಿಯ ನಂತರ ಆದಾಯವು 166 ಕೋಟಿ ರೂ.ಗೆ ಏರಿಕೆಯಾಯಿತು. ಕೇವಲ 3 ಕೋಟಿ ಮಾತ್ರ ಏರಿಕೆ ಹೇಗಾಯ್ತು ಎಂದು ರಿಜಿಜು ಪ್ರಶ್ನಿಸಿದರು.

ಇಷ್ಟು ದೊಡ್ಡ ಪ್ರಮಾಣದಲ್ಲಿ ಆಸ್ತಿ ಇರುವ ವಕ್ಫ್‌ನಿಂದ ಅಲ್ಪ ಆದಾಯವನ್ನು ಸ್ವೀಕರಿಸಲು ಸಾಧ್ಯವಿಲ್ಲ. ಆದಾಯ ಕನಿಷ್ಠವಾದರೂ 12 ಸಾವಿರ ಕೋಟಿ ರೂ.ಗಳಾಗಿರಬೇಕು. ವಕ್ಫ್ ಆಸ್ತಿಯ ಲಾಭ ಬಡ ಮುಸ್ಲಿಮರಿಗೆ ಆಗಬೇಕು. ಈ ಉದ್ದೇಶ ಈಡೇರಿಕೆಗೆ ವಕ್ಫ್ ಮಸೂದೆಯ ಅಗತ್ಯವಿದೆ ಎಂದು ಪ್ರತಿಪಾದಿಸಿದರು. ವಕ್ಫ್ ಆಸ್ತಿಯನ್ನು ಸರಿಯಾಗಿ ಬಳಸಿಕೊಂಡರೆ ವರ್ಷಕ್ಕೆ 12,000 ಕೋಟಿ ರೂ. ಆದಾಯ ಗಳಿಸಬಹುದು ಎಂದು ಸಾಚಾರ್ ಸಮಿತಿ ಹೇಳಿತ್ತು. 2006 ರಲ್ಲಿ ತನ್ನ ವರದಿಯನ್ನು ಸಲ್ಲಿಸಿದ ಸಾಚಾರ್ ಸಮಿತಿಯು, ಈ ಆಸ್ತಿಗಳನ್ನು ಸಮರ್ಥ ಮತ್ತು ಮಾರುಕಟ್ಟೆ ಬಳಕೆಗೆ ಒಳಪಡಿಸಿ ಕನಿಷ್ಟ ಶೇ.10 ರಷ್ಟು ಬಳಕೆ ಮಾಡಿದರೆ ವರ್ಷಕ್ಕೆ ಸುಮಾರು 12,000 ಕೋಟಿ ರೂಪಾಯಿಗಳ ಆದಾಯವನ್ನು ಗಳಿಸಬಹುದು ಎಂದು ಉಲ್ಲೇಖಿಸಿತ್ತು. ಸರ್ಕಾರಿ ಮಾಹಿತಿಯ ಪ್ರಕಾರ ವಕ್ಫ್ ಮಂಡಳಿಗಳು ಪ್ರಸ್ತುತ ಭಾರತದಾದ್ಯಂತ 9.4 ಲಕ್ಷ ಎಕರೆಗಳಷ್ಟು ವಿಸ್ತೀರ್ಣ ಹೊಂದಿರುವ 8.7 ಲಕ್ಷ ಆಸ್ತಿಗಳ ನಿಯಂತ್ರಣ ಹೊಂದಿದೆ. ಈ ಎಲ್ಲಾ ಆಸ್ತಿಗಳ ಮೌಲ್ಯ 1.2 ಲಕ್ಷ ಕೋಟಿ ರೂ. ಸಶಸ್ತ್ರ ಪಡೆಗಳು ಮತ್ತು ಭಾರತೀಯ ರೈಲ್ವೆಯ ನಂತರ ವಕ್ಫ್ ಮಂಡಳಿಯು ಭಾರತದಲ್ಲಿ ಅತೀ ಹೆಚ್ಚು ಭೂಮಿಯನ್ನು ಹೊಂದಿದ ಸಂಸ್ಥೆಯಾಗಿದೆ. ವಕ್ಫ್ ಮಂಡಳಿಯ ಅಡಿಯಲ್ಲಿ 8,72,328 ಸ್ಥಿರ ಮತ್ತು 16,713 ಚರ ಆಸ್ತಿಗಳನ್ನು ನೋಂದಣಿ ಮಾಡಲಾಗಿದೆ. ವಕ್ಫ್ ಮಂಡಳಿಯ ಅಡಿಯಲ್ಲಿ 3,56,051 ವಕ್ಫ್ ಎಸ್ಟೇಟ್‌ಗಳು ನೋಂದಾಯಿಸಲ್ಪಟ್ಟಿವೆ. ಅತಿ ಹೆಚ್ಚು ವಕ್ಫ್ ಆಸ್ತಿ ಇರುವ ರಾಜ್ಯಗಳ ಪೈಕಿ ಉತ್ತರ ಪ್ರದೇಶ (2,32,547) ಮೊದಲ ಸ್ಥಾನದಲ್ಲಿದ್ದರೆ ಪಶ್ಚಿಮ ಬಂಗಾಳ (80,480) ಎರಡನೇ ಸ್ಥಾನ ಹೊಂದಿದೆ ಎಂದರು.

ಇಡಿ ತಕರಾರು ಅರ್ಜಿ

ಈ ಅರ್ಜಿಯನ್ನು ಎತ್ತಿಹಿಡಿದ ರಾಜಭವನ ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡಿತ್ತು. ಇದನ್ನು ಪ್ರಶ್ನಿಸಿ, ಸಿದ್ದರಾಮಯ್ಯ ನ್ಯಾಯಾಲಯದ ಮೊರೆ ಹೋಗಿದ್ದರು. ರಾಜಭವನದ ನಿರ್ಧಾರವನ್ನು ಎತ್ತಿಹಿಡಿದಿದ್ದ ಹೈಕೋರ್ಟ್ ತನಿಖೆಗೆ ಆದೇಶಿಸಿತ್ತು ಇದರನ್ವಯ ವಿಚಾರಣಾ ನ್ಯಾಯಾಲಯ ಪ್ರಕರಣವನ್ನು ಲೋಕಾಯುಕ್ತ ತನಿಖೆಗೆ ವಹಿಸಿ 3 ತಿಂಗಳಲ್ಲಿ ವರದಿ ನೀಡುವಂತೆ ಸೂಚಿಸಿತ್ತು. ನಿವೇಶನ ಹಂಚಿಕೆ ಪ್ರಕರಣದಲ್ಲಿ ಕೋಟ್ಯಾಂತರ ರೂ. ಕೈಬದಲಾವಣೆ ಆಗಿದೆ ಎಂಬ ದೂರಿನ ಹಿನ್ನೆಲೆಯಲ್ಲಿ ಇ.ಡಿ. ಮಧ್ಯಪ್ರವೇಶ ಮಾಡಿ ತನಿಖೆ ನಡೆಸಿ ಕೆಲವು ದಾಖಲೆಗಳನ್ನು ವಶಪಡಿಸಿಕೊಂಡಿದ್ದಲ್ಲದೆ, ಕೆಲವು ಅಧಿಕಾರಿಗಳ ಮನೆ ಮೇಲೆ ದಾಳಿಯನ್ನೂ ನಡೆಸಿತ್ತು. ಪ್ರಮುಖ ಆರೋಪಿಗಳಾದ ಪಾರ್ವತಿ ಸಿದ್ದರಾಮಯ್ಯ ಹಾಗೂ ನಗರಾಭಿವೃದ್ಧಿ ಸಚಿವ ಬೈರತಿ ಸುರೇಶ್ ಅವರಿಗೆ ವಿಚಾರಣೆಗೆ ಹಾಜರಾಗುವಂತೆ ಎರಡು ಬಾರಿ ನೋಟಿಸ್ ನೀಡಿತ್ತು. ಇದನ್ನು ಪ್ರಶ್ನಿಸಿ ಆರೋಪಿಗಳು ನ್ಯಾಯಾಲಯದಿಂದ ವಿನಾಯಿತಿ ಪಡೆದಿದ್ದರು. ಇದರ ನಡುವೆ ಲೋಕಾಯುಕ್ತ ಪೊಲೀಸರು 14 ಬಿಡಿ ನಿವೇಶನಗಳ ಹಂಚಿಕೆಗೆ ಸಂಬಂಧಿಸಿದಂತೆ ತನಿಖೆ ನಡೆಸಿ ಜನಪ್ರತಿನಿಧಿಗಳ ನ್ಯಾಯಾಲಯಕ್ಕೆ ವರದಿ ಸಲ್ಲಿಸಿದ್ದರು. ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಅವರ ಪತ್ನಿ ಪಾರ್ವತಿ ಸೇರಿದಂತೆ ನಾಲ್ವರು ಪ್ರಮುಖ ಆರೋಪಿಗಳಿಗೂ ವರದಿಯಲ್ಲಿ ಕ್ಲೀನ್‌ಚಿಟ್ ನೀಡಲಾಗಿತ್ತು. ಇದನ್ನು ಪ್ರಶ್ನಿಸಿದ್ದ ಸ್ನೇಹಮಯಿ ಕೃಷ್ಣ, ಪ್ರಕರಣದ ತನಿಖೆಯನ್ನು ಸಿಬಿಐಗೆ ವಹಿಸುವಂತೆ ಹೈಕೋರ್ಟ್ ಮೆಟ್ಟಿಲೇರಿದ್ದರು. ಇವರ ಅರ್ಜಿಯನ್ನು ವಜಾಗೊಳಿಸಿದ ನ್ಯಾಯಾಲಯ ಲೋಕಾಯುಕ್ತ ವರದಿಯನ್ನು ಎತ್ತಿಹಿಡಿದಿತ್ತು. ಈಗ ಇ.ಡಿ. ಲೋಕಾಯುಕ್ತ ವರದಿಯನ್ನೇ ಪ್ರಶ್ನಿಸಿ, ತಕರಾರು ಅರ್ಜಿ ಸಲ್ಲಿಸಿರುವುದು ಮುಖ್ಯಮಂತ್ರಿ ಅವರು ಮತ್ತೆ ಸಂಕಷ್ಟ ಎದುರಿಸುವಂತಾಗಿದೆ.

ಇಡಿ ತನಿಖೆಗೆ ಹೈಕೋರ್ಟ್ ಅನುಮತಿ

ಕೆ.ವಿ.ಅರವಿಂದ್ ಅವರನ್ನೊಳಗೊಂಡ ವಿಭಾಗೀಯ ಪೀಠ, ಕಾನೂನು ಪ್ರಕಾರ ಇತರ ಆರೋಪಿಗಳ ವಿರುದ್ಧ ತನಿಖೆ ಮುಂದುವರಿಸಲು ಇಡಿಗೆ ಅರ್ಹತೆ ಇದೆ ಎಂದು ತೀರ್ಪು ನೀಡಿದೆ. ಹೀಗಾಗಿ ಸಿದ್ದರಾಮಯ್ಯ ಸೇರಿದಂತೆ ಹಲವರಿಗೆ ಇಡಿ ತನಿಖೆಯ ಸಂಕಷ್ಟ ಎದುರಾಗುವ ಸಾಧ್ಯತೆ ಇದೆ. ಈ ಹಿಂದೆ ಹೈಕೋರ್ಟ್ ಏಕಸದಸ್ಯ ಪೀಠ, ಮುಡಾ ಮಾಜಿ ಆಯುಕ್ತ ಡಿ.ಬಿ.ನಟೇಶ್ ಹೇಳಿಕೆ, ಅವರ ನಿವಾಸದಲ್ಲಿ ಶೋಧನೆ, ದಾಖಲೆ ಜಪ್ತಿ ಆದೇಶ ರದ್ದುಪಡಿಸಿತ್ತು. ಈ ಆದೇಶ ಆಧರಿಸಿ ಸಿದ್ದರಾಮಯ್ಯ ಪತ್ನಿ ಶ್ರೀಮತಿ ಪಾರ್ವತಿ ಹಾಗೂ ಸಚಿವ ಭೈರತಿ ಸುರೇಶ್ ಅವರ ವಿರುದ್ಧದ ಇಡಿ ಸಮನ್ಸ್ ಅನ್ನು ಹೈಕೋರ್ಟ್ ಏಕಸದಸ್ಯ ಪೀಠ ರದ್ದುಪಡಿಸಿತ್ತು. ಹೀಗಾಗಿ ಈ ಆದೇಶ ಪ್ರಶ್ನಿಸಿ ಇಡಿ ಹೈಕೋರ್ಟ್ ವಿಭಾಗೀಯ ಪೀಠಕ್ಕೆ ಮೇಲ್ಮನವಿ ಸಲ್ಲಿಸಿತ್ತು. ಇಡಿ ಮೇಲ್ಮನವಿ ಅರ್ಜಿ ವಿಚಾರಣೆ ನಡೆಸಿದ ವಿಭಾಗೀಯ ಪೀಠ, ಏಕಸದಸ್ಯ ಪೀಠದ ಆದೇಶಕ್ಕೆ ತಡೆ ನೀಡಲು ನಿರಾಕರಿಸಿದೆ. ಆದರೆ ಡಿ.ಬಿ.ನಟೇಶ್ ಹೇಳಿಕೆ, ಅವರಿಂದ ಸಿಕ್ಕ ದಾಖಲೆ ಆಧರಿಸಿ ಇತರೆ ಆರೋಪಿಗಳ ವಿರುದ್ಧ ಇಡಿ ತನಿಖೆ ನಡೆಸಬಹುದೆಂದು ಹೈಕೋರ್ಟ್ ವಿಭಾಗೀಯ ಪೀಠ ಸ್ಪಷ್ಟಪಡಿಸಿದೆ. ಮುಡಾ ನಿವೇಶನ ಹಂಚಿಕೆ ಪ್ರಕರಣದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಅವರ ಪತ್ನಿ ಪಾರ್ವತಿ ಬಿ.ಎಂ, ಅವರ ಸಹೋದರ ಮಲ್ಲಿಕಾರ್ಜುನ ಸ್ವಾಮಿ ಮತ್ತು ಭೂಮಿ ಮಾರಾಟ ಮಾಡಿದ ದೇವರಾಜು ಅವರು ಆರೋಪಿಗಳಾಗಿದ್ದಾರೆ.

ವಕ್ಫ್ ಮಂಡಳಿ ಭೂಕಬಳಿಕೆ ಉದಾಹರಣೆಗಳು!

ಹೊನ್ವಾಡ್ ಗ್ರಾಮದಲ್ಲಿ ವಕ್ಫ್ ಮಂಡಳಿಯು ಹಕ್ಕು ಮಂಡಿಸಿದ ನಂತರ 1,500 ಎಕರೆ ಭೂಮಿ ವಿವಾದಕ್ಕೆ ಒಳಗಾಯಿತು. ಇದು ಕಾನೂನು ಮತ್ತು ಆಡಳಿತಾತ್ಮಕ ಸಂಘರ್ಷಗಳಿಗೆ ಕಾರಣವಾಯಿತು. ಪೂಜ್ಯ ದತ್ತಪೀಠ ದೇವಸ್ಥಾನಕ್ಕೆ ಸೇರಿದ ಭೂಮಿಯ ಮೇಲೆ ಕರ್ನಾಟಕ ವಕ್ಫ್ ಮಂಡಳಿಯು ಹಕ್ಕು ಮಂಡಿಸಿ, ಅದನ್ನು ಕಾನೂನು ವಿವಾದಕ್ಕೆ ಸಿಲುಕಿಸಿತು. ಕೇರಳದ ಥಳಿಪರಂಬ ಪಟ್ಟಣದಲ್ಲಿ 600 ಎಕರೆ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳುವುದನ್ನು ಸಮರ್ಥಿಸಲು 7,500 ವರ್ಷಗಳ ಹಿಂದಿನ ಹಕ್ಕನ್ನು ಉಲ್ಲೇಖಿಸಲಾಯಿತು. ತಮಿಳುನಾಡಿನಲ್ಲಿ ದೇವಸ್ಥಾನದ ಭೂಮಿ ವಕ್ಫ್ ಬೋರ್ಡ್‌ಗೆ ಹಂಚಿಕೆ ಮಾಡಲಾಗಿದೆ. 1500 ವರ್ಷಗಳ ಪುರಾತನ ದೇವಸ್ಥಾನದ ಭೂಮಿ ಕೊಟ್ಟಿದ್ದಾರೆ. ಈಸಾಯಿ ಸಮುದಾಯದ ಜಮೀನನ್ನು ವಕ್ಫ್ ಬೋರ್ಡ್ ಕಬಳಿಸಿದೆ. ವಕ್ಫ್ ಮಂಡಳಿಯು ಮಹಾರಾಷ್ಟ್ರದ ಕೊಲ್ಹಾಪುರದಲ್ಲಿರುವ ಮಹಾದೇವ ಮಂದಿರಕ್ಕೆ ಸೇರಿದ ಭೂಮಿಯ ಮೇಲೆ ಹಕ್ಕು ಮಂಡಿಸಿತು. ಇದು ಹಿಂದೂ ದೇವಾಲಯ ಅಧಿಕಾರಿಗಳು ಮತ್ತು ವಕ್ಫ್ ಅಧಿಕಾರಿಗಳ ನಡುವೆ ವಿವಾದಗಳಿಗೆ ಕಾರಣವಾಯಿತು. ಪ್ರಯಾಗರಾಜ್‌ನಲ್ಲೂ ವಕ್ಫ್ ಬೋರ್ಡ್‌ಗೆ ಆಸ್ತಿ ಕೊಟ್ಟಿದ್ದಾರೆ. ಯುಪಿಎ ಸರ್ಕಾರ ವಕ್ಫ್ ಬೋರ್ಡ್‌ಗೆ ಆಸ್ತಿ ಕೊಟ್ಟಿದೆ. ಎಲ್ಲ ರಾಜ್ಯಗಳಲ್ಲೂ ವಕ್ಫ್ ಬೋರ್ಡ್ ಸರ್ಕಾರಿ ಆಸ್ತಿಯನ್ನು ಕಬಳಿಸಿದೆ.

ಬಿಜೆಪಿ ಅಹೋರಾತ್ರಿ ಧರಣಿ

ಬಡ್ಡಿ ಸಮೇತ ಜನರಿಂದ ವಸೂಲಿ ಮಾಡುವ ದಂಧೆಗೆ ಸರ್ಕಾರ ಇಳಿದಿದೆ. ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ದಿನದಿಂದ ಇಲ್ಲಿವರೆಗೆ 50 ವಸ್ತುಗಳ ದರ ಹೆಚ್ಚಳ ಮಾಡಿ ಬಡವರು ಮತ್ತು ಮಧ್ಯಮ ವರ್ಗದವರ ಮೇಲೆ ಗದಾಪ್ರಹಾರ ನಡೆಸಿದೆ. ಜನರ ಸಂಕಷ್ಟಕ್ಕೆ ಕವಡೆ ಕಾಸಿನ ಕಿಮ್ಮತ್ತು ನೀಡದೆ, ತಮ್ಮ ರಾಜಕೀಯ ಹಿತಾಸಕ್ತಿ ಕಾಪಾಡಿಕೊಳ್ಳಲು ಸರ್ಕಾರ ಹಗಲು ದರೋಡೆಗೆ ಇಳಿದಿದೆ ಎಂದು ದೂರಿದರು. ಆರ್ಥಿಕವಾಗಿ ಸಂಕಷ್ಟಕ್ಕೆ ಸಿಲುಕಿರುವ ರಾಜ್ಯ ಸರ್ಕಾರ ಸಂಪನ್ಮೂಲ ಕ್ರೋಢೀಕರಣಕ್ಕೆ ಕಂಡ ಕಂಡ ವಸ್ತುಗಳ ಬೆಲೆ ಏರಿಕೆ ಮಾಡಿ ಜನರ ಕಷ್ಟಕ್ಕೆ ಕಿಂಚಿತ್ತೂ ಕಾಳಜಿ ತೋರದೆ ನಿರ್ದಯಿಯಾಗಿದೆ. ಪ್ರಕೃತಿದತ್ತ ಜೀವ ಅನಿಲ ಹೊರತುಪಡಿಸಿ ಎಲ್ಲದರ ಮೇಲೂ ದರ ಏರಿಕೆ ಮಾಡಿ ರಾಜ್ಯ ಸರ್ಕಾರ ಅಮಾನವೀಯತೆ ಮೆರೆದಿದೆ ಎಂದು ಪ್ರತಿಪಕ್ಷ ಬಿಜೆಪಿ ಟೀಕಿಸಿದೆ. ರಾಜ್ಯದಲ್ಲಿರುವುದು ಬೆಲೆ ಏರಿಕೆ ಗ್ಯಾರಂಟಿ ಕೊಡುವ ಕಾಂಗ್ರೆಸ್ ಸರ್ಕಾರ, ನುಡಿದಂತೆ ನಡೆದ ಸರ್ಕಾರ ಎಂಬುದಾಗಿ ಜಾಹೀರಾತು ನೀಡುತ್ತಾರೆ. ಆದರೆ, ಇದು ಮನುಷ್ಯತ್ವ ಇಲ್ಲದ ಸರ್ಕಾರ ಎಂದು ಆಕ್ಷೇಪಿಸಿದರು. ಮುಖ್ಯಮಂತ್ರಿಗಳೇ ಹವಾನಿಯಂತ್ರಣ ಕೊಠಡಿಯಿಂದ ಹೊರಬನ್ನಿ. ನಿಮಗೆ ಮುಖ್ಯಮಂತ್ರಿ ಕುರ್ಚಿಯ ಅಭದ್ರತೆ ಕಾಡುತ್ತಿದ್ದರೆ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ ಅವರನ್ನೂ ಜೊತೆಗೇ ಕರೆದುಕೊಂಡು ಹೋಗಿ ಎಂದು ವ್ಯಂಗ್ಯವಾಡಿದರು. ಕಳೆದ 20 ತಿಂಗಳ ನಿಮ್ಮ ಆಡಳಿತದಲ್ಲಿ ಜನರು ಖುಷಿಯಾಗಿದ್ದಾರಾ ಎಂಬುದನ್ನು ಅರಿಯಲು ರಾಜ್ಯ ಪ್ರವಾಸ ಮಾಡಿ. ಮಹಿಳೆಯರಿಗೆ 2 ಸಾವಿರ ರೂ., ಪುಕ್ಕಟೆ ವಿದ್ಯುತ್ ಸೇರಿ ವಿವಿಧ ಯೋಜನೆಗಳು ಸರಿಯಾಗಿ ಅನುಷ್ಠಾನ ಆಗಿಲ್ಲ. ಜನರ ಮೇಲೆ ಬೆಲೆ ಏರಿಕೆ ಬರೆ ಎಳೆಯುವ ಕೆಲಸವನ್ನಷ್ಟೇ ಮಾಡುತ್ತಿದೆ. ಬಡವರು, ರೈತರು, ಜನಸಾಮಾನ್ಯರು ನೆಮ್ಮದಿಯಿಂದ ಬದುಕಲು ಸಾಧ್ಯವಿಲ್ಲದ ದುಃಸ್ಥಿತಿ ಬಂದಿದೆ ಎಂದರು.

ಕರ್ನಾಟಕವನ್ನು ಬರ್ಬಾತ್ ಮಾಡ್ತಾರೆ...!

ಫಲಾನುಭವಿಗಳನ್ನು ಆಯ್ಕೆ ಮಾಡಬೇಕು ಎಂದು ನಿರ್ಧರಿಸಲಿ ಎಂದು ಸಲಹೆ ನೀಡಿದರು.

ಡಿ.ಕೆ.ಶಿವಕುಮಾರ್ ಸಿಎಂ ಆಗಲು ಅರ್ಹರು: ಡಿ.ಕೆ.ಶಿವಕುಮಾರ್ ಅವರು ಕಾಂಗ್ರೆಸ್ ಪಕ್ಷ ಕಟ್ಟಿ ಬೆಳೆಸಿದ್ದಾರೆ. ಇದರಿಂದ ಅವರು ಮುಖ್ಯಮಂತ್ರಿ ಆಗಲು ಅರ್ಹರಾಗಿದ್ದಾರೆ. ಆದರೆ ನಾನು ಸೇರಿದಂತೆ ಹಲವರು ಪರಿಶ್ರಮ ಪಟ್ಟು ಕಟ್ಟಿದ ಕಾಂಗ್ರೆಸ್ ಪಕ್ಷಕ್ಕೆ ಸಿದ್ದರಾಮಯ್ಯ ಸೇರಿದ್ದಾರೆ. ಪಕ್ಷಕ್ಕಾಗಿ ಇವರ ಕೊಡುಗೆ ಏನೇನು ಇಲ್ಲ ಎಂದರು.

ಯತ್ನಾಳ್ ಅಡ್ಜೆಸ್ಟ್‌ಮೆಂಟ್ ಪಾರ್ಟಿ: ಬಸವರಾಜ ಪಾಟೀಲ್ ಯತ್ನಾಳ್ ಅವರ ಹೋರಾಟಕ್ಕೆ ಬೆಂಬಲ ನೀಡುತ್ತೀರಾ ಎಂಬ ಪ್ರಶ್ನೆಗೆ, ಅಯ್ಯೋ, ಆ ಯತ್ನಾಳ್ ಕೂಡ ಅಡ್ಜೆಸ್ಟ್‌ಮೆಂಟ್ ಪಾರ್ಟಿ. ಯಡಿಯೂರಪ್ಪ ಹಾಗೂ ಸಿದ್ದರಾಮಯ್ಯನಂತೆ ಎಂ.ಬಿ. ಪಾಟೀಲ್ ಜೊತೆ ಅಡ್ಜೆಸ್ಟ್‌ಮೆಂಟ್ ಮಾಡಿಕೊಂಡಿದ್ದಾರೆ ಎಂದು ವಿಶ್ವನಾಥ್ ಆಪಾದಿಸಿದರು.

ಬಿಜೆಪಿಯ ಕಿರಿಯ ಮುಖಂಡ!!

ಸಿದ್ದರಾಮಯ್ಯ ಅವರನ್ನು ನಾನು ಕಾಂಗ್ರೆಸ್ ಪಕ್ಷಕ್ಕೆ ಕರೆ ತರಲಿಲ್ಲವೆಂದರೆ ಅವರು ಸಿಎಂ ಆಗಲು ಹೇಗೆ ಸಾಧ್ಯವಾಗುತ್ತಿತ್ತು. ತಮ್ಮ ರಾಜಕೀಯ ಜೀವನದಲ್ಲಿ ಉತ್ತುಂಗಕ್ಕೇರಿದ ಅಂದಿನ ಬೆಳವಣಿಗೆಗೆ ಕಾರಣಕರ್ತರಾದವರ ಸಿದ್ದರಾಮಯ್ಯ ನೆನೆಯಲಿ ಎಂದರು. ನಾನು ಶಿಕ್ಷಣ ಸಚಿವನಾಗಿ, ಸಹಕಾರ ಸಚಿವನಾಗಿ ಇಂದಿಗೂ ಜಾರಿಯಲ್ಲಿರುವ ಹಲವು ಯೋಜನೆಗಳನ್ನು ಕೊಡುಗೆಯಾಗಿ ನೀಡಿ, ಹೆಜ್ಜೆ ಗುರುತು ಮೂಡಿಸಿದ್ದೇನೆ. ಎರಡು ಬಾರಿ ಮುಖ್ಯಮಂತ್ರಿ ಆದ ಸಿದ್ದರಾಮಯ್ಯ ಏನು ಕೊಡುಗೆ ನೀಡಿದ್ದಾರೆ. ಯಾವ ಹೆಜ್ಜೆ ಗುರುತು ಮೂಡಿಸಿದ್ದಾರೆ ಹೇಳಲಿ ನೋಡೋಣ ಎಂದು ಸವಾಲು ಹಾಕಿದರು. 2016ರಲ್ಲಿ ಸಿದ್ದರಾಮಯ್ಯ ಅವರು ಮುಖ್ಯಮಂತ್ರಿ ಆಗಿದ್ದ ವೇಳೆ ನಾನು, ರಮೇಶ್ ಕುಮಾರ್ ಹಾಗೂ ಸಿ.ಎಂ.ಇಬ್ರಾಹಿಂ ಯೋಜನೆಗಳನ್ನು ರೂಪಿಸಿದ್ದೆವು. ಆದರೆ ಈಗ ಸಿದ್ದರಾಮಯ್ಯ ಅವರಿಗೆ ಸಲಹೆ ನೀಡಲು ಸಮರ್ಥ ವ್ಯಕ್ತಿ ಜೊತೆಯಲ್ಲಿಲ್ಲ ಎಂದು ಹೇಳಿದರು.

ಪಾದಚಾರಿ ಮಹಿಳೆ ಸಾವು

ಗಮನಿಸಿದ ಪ್ರಯಾಣಿಕರು, ಅವರನ್ನು ಎಬ್ಬಿಸಲು ಹೋದಾಗ ಆತನೂ ಮೃತಪಟ್ಟಿರುವುದು ಬೆಳಕಿಗೆ ಬಂದಿದೆ. ಘಟನೆ ವೇಳೆ ವಿದ್ಯುತ್ ಕಡಿತಗೊಂಡಿದ್ದರಿಂದ ಬಸ್‌ನಲ್ಲಿದ್ದ ಪ್ರಯಾಣಿಕರು ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಈ ಸಂದರ್ಭ ಬಸ್‌ನಲ್ಲಿದ್ದ ಪ್ರಯಾಣಿಕರು ಪೊಲೀಸರಿಗೆ ವಿಷಯ ಮುಟ್ಟಿಸಿದ್ದು, ಸ್ಥಳಕ್ಕಾಗಮಿಸಿದ ಅಂತರಸಂತೆ ಠಾಣೆ ಪೊಲೀಸರು ಪರಿಶೀಲಿಸಿ ಶವಗಳನ್ನು ಹೆಚ್.ಡಿ.ಕೋಟೆ ಸರ್ಕಾರಿ ಆಸ್ಪತ್ರೆ ಶವಾಗಾರಕ್ಕೆ ರವಾನಿಸಿದರು. ಸ್ಥಳಕ್ಕಾಗಮಿಸಿದ ಹೆಚ್.ಡಿ.ಕೋಟೆ ಬಸ್ ಡಿಪೋ ಅಧಿಕಾರಿಗಳು ಪ್ರಯಾಣಿಕರಿಗೆ ಬದಲಿ ಬಸ್ ವ್ಯವಸ್ಥೆ ಮಾಡಿ, ಮುಂದಿನ ಪ್ರಯಾಣಕ್ಕೆ ಅವಕಾಶ ಕಲ್ಪಿಸಿದರು. ಸುನೀಲ್ ಕಳೆದ ತಿಂಗಳಿಂದ ಹೊರ ಗುತ್ತಿಗೆ ಆಧಾರದ ಮೇಲೆ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯಲ್ಲಿ ಚಾಲಕರಾಗಿ ಸೇವೆ ಸಲ್ಲಿಸುತ್ತಿದ್ದರು ಎನ್ನಲಾಗಿದೆ. ಈ ಸಂಬಂಧ ಅಂತರಸಂತೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಆಸ್ಪತ್ರೆ ಶವಾಗಾರದ ಎದುರು ಸುನೀಲ್‌ಕುಮಾರ್ ಕುಟುಂಬದವರ ಆಕ್ರಂದನ ಮುಗಿಲು ಮುಟ್ಟಿತ್ತು.

ಮೈಸೂರಲ್ಲಿ ದೇವರ ದಾಸಿಮಯ್ಯ ಜಯಂತಿ ಆಚರಣೆ




ಮೈಸೂರಿನ ಕಲಾಮಂದಿರದಲ್ಲಿ ಜಿಲ್ಲಾಡಳಿತದ ವತಿಯಿಂದ ಬುಧವಾರ ಆಯೋಜಿಸಿದ್ದ ದೇವರ ದಾಸಿಮಯ್ಯ ಜಯಂತಿ ಕಾರ್ಯಕ್ರಮದಲ್ಲಿ ದೇವರ ದಾಸಿಮಯ್ಯ ಭಾವಚಿತ್ರಕ್ಕೆ ರಾಮಕೃಷ್ಣ ಆಶ್ರಮದ ಶ್ರೀ ರಾಮಕೃಷ್ಣ ವಿದ್ಯಾಶಾಲೆಯ ಶ್ರೀ ಸ್ವಾಮಿ ಆಘಹರನಂದಾಜೀ ಮಹರಾಜ್ ಹಾಗೂ ಗಣ್ಯರು ಪುಷ್ಪ ನಮನ ಸಲ್ಲಿಸಿದರು. ಮತ್ತೊಂದು ಚಿತ್ರದಲ್ಲಿ ವಿವಿಧ ಜಾನಪದ ಕಲಾತಂಡಗಳೊಂದಿಗೆ ದೇವರ ದಾಸಿಮಯ್ಯ ಭಾವಚಿತ್ರದ ಮೆರವಣಿಗೆಗೆ ಶಾಸಕ ಕೆ.ಹರೀಶ್‌ಗೌಡ ಅವರು ಚಾಲನೆ ನೀಡಿದ್ದನ್ನು ಕಾಣಬಹುದು.

ಮೈಸೂರು,ಏ.2 (ಎಂಟಿವೈ)– ಮೈಸೂರಿನ ಕಲಾಮಂದಿರದಲ್ಲಿ ಜಿಲ್ಲಾಡಳಿತದ ವತಿಯಿಂದ ದೇವರ ದಾಸಿಮಯ್ಯ ಜಯಂತಿಯನ್ನು ಆಚರಿಸಿ, ಗೌರವ ಸಮರ್ಪಿಸಲಾಯಿತು.

ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಮೈಸೂರು ಜಿಲ್ಲಾ ನೇಕಾರರ ಸಮುದಾಯಗಳ ಒಕ್ಕೂಟದ ಸಂಯುಕ್ತಾಶ್ರಯದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ದೇವರ ದಾಸಿಮಯ್ಯ ಅವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಲಾಯಿತು.

ಬಳಿಕ ನಡೆದ ಸಭಾ ಕಾರ್ಯಕ್ರಮದಲ್ಲಿ ದೇವರ ದಾಸಿಮಯ್ಯ ಅವರ ವಿಚಾರಧಾರೆ ಕುರಿತು ಬೆಂಗಳೂರಿನ ರಾಜರಾಜೇಶ್ವರಿ ಇಂಜಿನಿಯರಿಂಗ್ ಕಾಲೇಜಿನ ಪ್ರಾಧ್ಯಾಪಕರಾದ ಡಾ.ಕೆ.ಎಸ್.ಲಕ್ಷ್ಮೀನಾರಾಯಣ ಮಾತನಾಡಿ, ಸಮಾಜ ಸುಧಾರಣೆಗೆ ದೇವರ ದಾಸಿಮಯ್ಯ ಅವರ ಕೊಡುಗೆ ಅಪಾರ. ವಚನಗಳ ಮೂಲಕ ಗುರುಗಳಿಗೆ ಹೆಚ್ಚು ಪ್ರಾಮುಖ್ಯತೆ ನೀಡಿದ್ದಾರೆ. ಗುರುಗಳಿಗೆ ತಮ್ಮನ್ನು ತಾವು ಅರ್ಪಿಸಿಕೊಂಡಿದ್ದರು.

ದೇವರ ದಾಸಿಮಯ್ಯ ಅವರ 176 ವಚನಗಳು ಲಭ್ಯವಿದೆ. ಆ ವಚನಗಳು ಸಿಹಿ ನುಡಿಯಿಂದ, ಒಳ್ಳೆಯ ಸಂದೇಶದಿಂದ ಕೂಡಿವೆ. ಅಲ್ಲದೆ, ತಾತ್ಪರ್ಯ, ಎಚ್ಚರಿಕೆಯ ಮಾತು, ವ್ಯಂಗ್ಯದಿಂದ ಅವರ ವಚನಗಳು ಕೂಡಿವೆ. ಇವರು ಬಸವಣ್ಣನವರಿಗಿಂತ ಹಿರಿಯವರಾಗಿದ್ದರು. ತಮ್ಮ ಹೆಂಡತಿಯ ಮೇಲೆಯೂ ವಚನ ಬರೆಯುತ್ತಿದ್ದರು. ಅನ್ನಕ್ಕೆ ಹೆಚ್ಚು ಪ್ರಾಮುಖ್ಯತೆಯನ್ನು ನೀಡುತ್ತಿದ್ದರು. ಮಾತಿನಲ್ಲಿ ಉತ್ತರ ನೀಡದೇ ತಮ್ಮ ವಚನಗಳ ಮೂಲಕ ಉತ್ತರ ನೀಡುತ್ತಿದ್ದರು ಎಂದು ಹೇಳಿದರು.

ಯಾದವಗಿರಿ ರಾಮಕೃಷ್ಣ ಆಶ್ರಮದ ಶ್ರೀ ರಾಮಕೃಷ್ಣ ವಿದ್ಯಾಶಾಲೆಯ ಶ್ರೀ ಸ್ವಾಮಿ ಆಘಹರನಂದಾಜೀ ಮಹರಾಜ್ ಮಾತನಾಡಿ, ಕಾಯಕವೇ ಕೈಲಾಸ ಎಂಬ ಮಾತಿನಂತೆ ಎಲ್ಲರೂ ತಮ್ಮ ಕರ್ತವ್ಯವನ್ನು ಶ್ರದ್ಧೆ ಮತ್ತು ನಿಷ್ಠೆಯಿಂದ ಮಾಡುವ ಮೂಲಕ ದೇವರನ್ನು ಕಾಣಬಹುದು. ಯಾವುದೇ ವೃತ್ತಿ ಮೇಲೂ ಅಲ್ಲ, ಕೀಳೂ ಅಲ್ಲ. ಪ್ರತಿಯೊಂದು ವೃತ್ತಿಗೂ ಅದರದೇ ಆದ ಗೌರವವಿರುತ್ತದೆ. ನಾವು ಮಾಡುವಂತಹ ವೃತ್ತಿ ದೇವರನ್ನು ಪೂಜೆ ಮಾಡುವ ರೀತಿಯಲ್ಲಿ ಇರಬೇಕು. ದೇವರ ದಾಸಿಮಯ್ಯ ಮಹಾ ಶಿವಭಕ್ತರಾಗಿದ್ದರು. ನಿಸ್ವಾರ್ಥ ಮನೋಭಾವದಿಂದ ಕೆಲಸ ಮಾಡಬೇಕು. ನಿಸ್ವಾರ್ಥ ಭಕ್ತಿಯೇ ನಿಸ್ವಾರ್ಥ ಸೇವೆಯಾಗುತ್ತದೆ ಎಂದು ಅಭಿಪ್ರಾಯಪಟ್ಟರು.

ಕಾರ್ಯಕ್ರಮದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್.ಮಲ್ಲಿಕಾರ್ಜುನ ಸ್ವಾಮಿ, ಸಹಾಯಕ ನಿರ್ದೇಶಕ ಡಾ.ಎಂ.ಡಿ.ಸುದರ್ಶನ್, ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್, ಮೈಸೂರು ಜಿಲ್ಲಾ ನೇಕಾರರ ಸಮುದಾಯಗಳ ಒಕ್ಕೂಟದ ಗೌರವಾಧ್ಯಕ್ಷ ಆರ್.ಮೂರ್ತಿ, ನಗರಪಾಲಿಕೆ ಮಾಜಿ ಸದಸ್ಯರಾದ ಆರ್.ಸುನೀಲ್, ಶೋಭ ಸುನೀಲ್, ಹೇಮಾ ಗಂಗಪ್ಪ, ಬಾಲರಾಜ್, ಮಹಿಳಾ ಸಂಘದ ಅಧ್ಯಕ್ಷೆ ಮಂಜುಳ ಶ್ರೀನಿವಾಸ್, ನೇಕಾರ ಒಕ್ಕೂಟದ ಅಧ್ಯಕ್ಷ ದಿನೇಶ್, ಒಕ್ಕೂಟದ ಪ್ರಧಾನ ಕಾರ್ಯದರ್ಶಿ ನರಸಿಂಹ ಮೂರ್ತಿ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ದೇವರ ದಾಸಿಮಯ್ಯ ಅವರ ವಚನಗಳು ಪ್ರಸ್ತುತ: ದೇವರ ದಾಸಿಮಯ್ಯ ಅವರ ಜಯಂತಿ ಅಂಗವಾಗಿ ಮೈಸೂರು ಅರಮನೆಯ ದ್ವಾರದಲ್ಲಿರುವ ಕೋಟೆ ಆಂಜನೇಯಸ್ವಾಮಿ ದೇವಾಲಯದ ಮುಂಭಾಗದಿಂದ ದೇವರ ದಾಸಿಮಯ್ಯ ಅವರ ಭಾವಚಿತ್ರದ ಮೆರವಣಿಗೆಗೆ ಶಾಸಕ ಕೆ.ಹರೀಶ್ ಗೌಡ ಚಾಲನೆ ನೀಡಿದರು. ಅಲಂಕೃತ ವಾಹನದಲ್ಲಿಡಲಾಗಿದ್ದ ದೇವರ ದಾಸಿಮಯ್ಯ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿದ ಬಳಿಕ ಮಾತನಾಡಿ, ದೇವರ ದಾಸಿಮಯ್ಯ ಅವರಂತಹ ಮಹನೀಯರ ಆದರ್ಶವನ್ನು ನಾವೆಲ್ಲರೂ ಪಾಲಿಸಬೇಕು. ನಿಜ ಜೀವನದಲ್ಲಿ ದಾರ್ಶನಿಕರ ಸಂದೇಶ ಅಳವಡಿಸಿಕೊಂಡಾಗ ಆದರ್ಶ ಜೀವನ ನಡೆಸಬಹುದು. ದೇವರ ದಾಸಿಮಯ್ಯ ಅವರ ವಚನಗಳಲ್ಲಿರುವ ಸಾರ ಎಲ್ಲ ಕಾಲಕ್ಕೂ ಪ್ರಸ್ತುತ. ಅವರ ವಚನಗಳನ್ನು ಯುವ ಜನರಿಗೆ ಅರ್ಥ ಮಾಡಿಕೊಡುವ ಕೆಲಸ ಆಗಬೇಕು ಎಂದರು. ವಿವಿಧ ಜಾನಪದ ಕಲಾತಂಡಗಳೊಂದಿಗೆ ದೇವರ ದಾಸಿಮಯ್ಯ ಅವರ ಭಾವಚಿತ್ರದ ಮೆರವಣಿಗೆ ನಡೆಸಲಾಯಿತು. ಕೆ.ಆರ್.ವೃತ್ತ, ಡಿ.ದೇವರಾಜ ಅರಸ್ ರಸ್ತೆ, ಜೆಎಲ್‌ಬಿ ರಸ್ತೆ, ವಿನೋಬಾ ರಸ್ತೆ ಮೂಲಕ ಕಲಾಮಂದಿರದ ಆವರಣ ತಲುಪಿತು.

ಈ ಮೆರವಣಿಗೆಯಲ್ಲಿ ಮೈಸೂರು ಜಿಲ್ಲೆಯ ವಿವಿಧೆಡೆಯಿಂದ ನೇಕಾರ ಸಮುದಾಯ ಜನ ಪಾಲ್ಗೊಂಡಿದ್ದರು.

ಶ್ರೀ ಕಾಲಭೈರವೇಶ್ವರ ಸ್ವಾಮಿ ಅದ್ದೂರಿ ರಥೋತ್ಸವ



ಮೈಸೂರಿನ ಗಾಂಧಿನಗರದ ಶ್ರೀ ಕಾಲಭೈರವೇಶ್ವರಸ್ವಾಮಿ ದೇವಸ್ಥಾನ ಸೇವಾ ಸಮಿತಿ ವತಿಯಿಂದ ಶ್ರೀ ಕಾಲಭೈರವೇಶ್ವರ ಸ್ವಾಮಿ ರಥೋತ್ಸವ ಅದ್ದೂರಿಯಿಂದ ನಡೆಯಿತು.

ಮೈಸೂರು, ಏ.2(ಜಿಎ)–ಮೈಸೂರಿನ ಗಾಂಧಿನಗರದಲ್ಲಿರುವ ಶ್ರೀ ಕಾಲಭೈರವೇಶ್ವರಸ್ವಾಮಿ ದೇವಸ್ಥಾನ ಸೇವಾ ಸಮಿತಿ ವತಿಯಿಂದ ಶ್ರೀ ಕಾಲಭೈರವೇಶ್ವರ ಸ್ವಾಮಿ ರಥೋತ್ಸವ ಭಾನುವಾರ ಅದ್ದೂರಿಯಿಂದ ನಡೆಯಿತು.

ಸಂಜೆ ಗಾಂಧಿನಗರದ ಪ್ರಮುಖ ಬೀದಿಗಳಲ್ಲಿ ಸಾಂಸ್ಕೃತಿಕ ಕಲಾ ತಂಡಗಳು ಹಾಗೂ ದೀಪಾಲಂಕಾರಗಳೊಂದಿಗೆ ಶ್ರೀ ಕಾಲಭೈರವೇಶ್ವರ ಸ್ವಾಮಿ ರಥೋತ್ಸವವನ್ನು ಸಾಗಿತು. ರಥೋತ್ಸವಕ್ಕೆ ಗಾಂಧಿನಗರದ ಉರಿಲಿಂಗ ಪೆದ್ದಿ ಮಠದ ಶ್ರೀ ಜ್ಞಾನಪ್ರಕಾಶ ಸ್ವಾಮೀಜಿ ಮತ್ತು ಮೈಸೂರು ಆದಿಚುಂಚನಗಿರಿ ಶಾಖಾ ಮಠದ ಶ್ರೀ ಸೋಮನಾಥ ಸ್ವಾಮೀಜಿ ಚಾಲನೆ ನೀಡಿದರು. ಸೋಮವಾರ ಅನ್ನಸಂತರ್ಪಣೆ ಏರ್ಪಡಿಸಲಾಗಿತ್ತು. ಹೆಚ್ಚಿನ ಸಂಖ್ಯೆಯಲ್ಲಿ ಭಕ್ತಾದಿಗಳು ಬಂದು ಪ್ರಸಾದ ಸ್ವೀಕರಿಸಿದರು. ಈ ಸಂದರ್ಭದಲ್ಲಿ ಸಮಾಜ ಸೇವಕರು ಪದ್ಮನಾಭ (ಗುಂಡಣ್ಣ) ಹಾಗೂ ದೊಡ್ಡ ಯಜಮಾನರು ಬಸವರಾಜು ಮತ್ತು ಸಾಗರ್ ಬಿ, ಅಮರ್‌ನಾಥ್, ವರುಣ್, ಗಿರೀಶ್, ಯೋಗೇಶ್ ಮತ್ತಿತರರು ಉಪಸ್ಥಿತರಿದ್ದರು.

ಕುವೆಂಪುನಗರ ಸರ್ಕಾರಿ ಕಾಲೇಜಿನಲ್ಲಿ ಉದ್ಯೋಗ ಮೇಳ

500 ವಿದ್ಯಾರ್ಥಿಗಳು ಸಂದರ್ಶನಕ್ಕೆ ಹಾಜರು, 47 ಮಂದಿಗೆ ಉದ್ಯೋಗ



ಮೈಸೂರಿನ ಕುವೆಂಪುನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ನಡೆದ ಉದ್ಯೋಗ ಮೇಳದಲ್ಲಿ ಪಾಲ್ಗೊಂಡಿರುವ ವಿದ್ಯಾರ್ಥಿಗಳು.

ಮೈಸೂರು,ಏ.2(ಎಂಟಿವೈ)– ಮೈಸೂರಿನ ಕುವೆಂಪುನರದಲ್ಲಿರುವ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಬುಧವಾರ ನಡೆದ ಉದ್ಯೋಗ ಮೇಳದಲ್ಲಿ ಕಾಲೇಜಿನ 500ಕ್ಕೂ ಹೆಚ್ಚು ವಿದ್ಯಾರ್ಥಿಗಳು ಸಂದರ್ಶನ ಎದುರಿಸಿ, 47 ಮಂದಿ ವಿವಿಧ ಕಂಪನಿಗಳಲ್ಲಿ ಉದ್ಯೋಗಗಿಟ್ಟಿಸಿಕೊಂಡರು.

ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ, ಕುವೆಂಪುನಗರ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಐಕ್ಯೂಎಸಿ, ವೃತ್ತಿ ಮಾರ್ಗದರ್ಶನ ಮತ್ತು ಉದ್ಯೋಗ ಮಾಹಿತಿ ಕೋಶ, ಆರ್‌ಡಿ ಟೆಕ್ನಾಲಜಿ ಸಂಯುಕ್ತಾಶ್ರಯದಲ್ಲಿ ಕಾಲೇಜು ಆವರಣದಲ್ಲಿ ನಡೆದ ಉದ್ಯೋಗ ಮೇಳದಲ್ಲಿ ಎಸ್‌ಬಿಐ, ಆಕ್ಸಿಸ್ ಬ್ಯಾಂಕ್, ಆರ್‌ಡಿ ಟೆಕ್ನಾಲಜಿ, ಬೋನಿಯನ್, ಕ್ಯಾಡ್ ಮ್ಯಾಕ್ಸ್, ಟಾಟಾ ಎಲೆಕ್ಟ್ರಾನಿಕ್ಸ್ ಸೇರಿದಂತೆ ಇನ್ನಿತರ ಕಂಪನಿ ಪಾಲ್ಗೊಂಡಿದ್ದವು. ಖಾಲಿಯಿರುವ 700 ಹುದ್ದೆಗಳಿಗೆ ನಡೆದ ಸಂದರ್ಶನದಲ್ಲಿ 500ಕ್ಕೂ ಹೆಚ್ಚು ವಿದ್ಯಾರ್ಥಿಗಳು ಪಾಲ್ಗೊಂಡು ಸಂದರ್ಶನ ಎದುರಿಸಿದರು. ಮೇಳದಲ್ಲಿ ಕುವೆಂಪುನಗರ ಸರ್ಕಾರಿ ಕಾಲೇಜು ಮಾತ್ರವಲ್ಲದೆ, ಜಿಲ್ಲೆಯ ವಿವಿಧ ಕಾಲೇಜು ವಿದ್ಯಾರ್ಥಿಗಳು ಹಾಗೂ ಕೊಡಗು ಜಿಲ್ಲೆಯ ಕೆಲವು ಕಾಲೇಜುಗಳ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

ಸಂದರ್ಶನ ಎದುರಿಸಿದ ವಿದ್ಯಾರ್ಥಿಗಳಲ್ಲಿ 47 ಮಂದಿಗೆ ವಿವಿಧ ಹುದ್ದೆಗಳಿಗೆ ಸ್ಥಳದಲ್ಲಿಯೇ ನೇಮಕಾತಿ ಪತ್ರ ವಿತರಿಸಲಾಯಿತು. 200 ಮಂದಿಯ ಅಂತಿಮ ಪಟ್ಟಿ ತಯಾರಿಸಿದ್ದು, ಅವರಿಗೆ ಕೌಶಲ ತರಬೇತಿ ನೀಡಿ ಉದ್ಯೋಗ ನೀಡಲು ಕಂಪನಿಗಳು ನಿರ್ಧರಿಸಿವೆ ಎಂದು ಕಾಲೇಜಿನ ಐಕ್ಯೂಎಸಿ ಸಂಚಾಲಕ ಡಾ.ಎಸ್.ವಿ ಮುರಳೀಧರ ತಿಳಿಸಿದ್ದಾರೆ.

ಮೇಳದಲ್ಲಿ ಫ್ಯೂಚರ್ ವರ್ಲ್ಡ್ ಕಂಪನಿ ವ್ಯವಸ್ಥಾಪಕ ನಿರ್ದೇಶಕ ಡಿ.ಸಂತೋಷ್, ಆರ್‌ಡಿ ಟೆಕ್ನಾಲಜಿಯ ಮಾನವ ಸಂಪನ್ಮೂಲ ಅಧಿಕಾರಿ ಪಿ.ಪ್ರಗತಿ ಗೌಡ, ಕಾಲೇಜು ಪ್ರಾಂಶುಪಾಲ ಡಾ.ಪುಟ್ಟರಾಜ, ಪತ್ರಾಂಕಿತ ವ್ಯವಸ್ಥಾಪಕ ಎಂ.ವಿದ್ಯಾರಣ್ಯ, ಹಿರಿಯ ವಿದ್ಯಾರ್ಥಿಗಳ ಸಂಘದ ಸಂಚಾಲಕಿ ಡಾ.ಎ.ಉಷಾದೇವಿ, ವೃತ್ತಿ ಮಾರ್ಗದರ್ಶನ ಮತ್ತು ಉದ್ಯೋಗಕೋಶದ ಸಂಚಾಲಕಿ ಡಾ.ಎನ್.ಶೋಭಲತಾ, ಹಿರಿಯ ಪ್ರಾಧ್ಯಾಪಕರಾದ ಬೆಟ್ಟೇಗೌಡ, ಲಿಂಗಣ್ಣ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ಚಿಣ್ಣರ ಮೇಳ

ಮಕ್ಕಳ ರಂಗ ತರಬೇತಿ ಶಿಬಿರಕ್ಕೆ ಏ.6ರಂದು ಅರ್ಜಿ ವಿತರಣೆ

ಮೈಸೂರು,ಏ.2–ಮೈಸೂರು ರಂಗಾಯಣವು 21ನೇ ವರ್ಷದ ಚಿಣ್ಣರ ಮೇಳವನ್ನು ಏ.14ರಿಂದ ಮೇ 10 ರವರೆಗೆ ರಂಗಾಯಣದ ಆವರಣದಲ್ಲಿ ನಡೆಸಲು ಯೋಜಿಸಲಾಗಿದೆ. ಮಾ.31ಕ್ಕೆ 7 ವರ್ಷಗಳು ತುಂಬಿದ ಮತ್ತು ಈ ದಿನಾಂಕಕ್ಕೆ 15 ವರ್ಷ ಮೀರಿರದ ಮಕ್ಕಳಿಗೆ ಪ್ರವೇಶಾವಕಾಶವಿದೆ.

ಏ.6ರಂದು ಬೆಳಗ್ಗೆ 10 ಗಂಟೆಗೆ ರಂಗಾಯಣದ ಕಚೇರಿಯಲ್ಲಿ ಒಬ್ಬರಿಗೆ ಒಂದರಂತೆ ಅರ್ಜಿ ವಿತರಿಸಲಾಗುವುದು. ಮೊದಲು ಬಂದವರಿಗೆ ಮೊದಲ ಆದ್ಯತೆ. ಭರ್ತಿ ಮಾಡಿದ ಅರ್ಜಿಗಳನ್ನು ಏ.9ರ ಸಂಜೆ 5 ಗಂಟೆಯೊಳಗೆ ರಂಗಾಯಣದ ಕಚೇರಿಗೆ ಖುದ್ದಾಗಿ ಸಲ್ಲಿಸಬೇಕು. ಉಪನಿರ್ದೇಶಕರು, ರಂಗಾಯಣ ಮೈಸೂರು ಇವರ ಹೆಸರಿಗೆ ಡಿಡಿ ತೆಗೆದು ಅರ್ಜಿ ಜೊತೆ ಲಗತ್ತಿಸುವುದು. ಮಗುವಿನ ಜನ್ಮದಿನದ ದೃಢೀಕರಣಕ್ಕಾಗಿ ಆಧಾರ್ ಕಾರ್ಡ್ ಪ್ರತಿ ಅಥವಾ ಮಗುವಿನ ಹೆಸರು ನಮೂದಿಸಿರುವ ಜನನ ಪ್ರಮಾಣ ಪತ್ರವನ್ನು ಅರ್ಜಿ ಜೊತೆ ಲಗತ್ತಿಸಬೇಕು.

ಬಾಬೂಜಿ ಜಯಂತಿ ಸಂಬಂಧ ಪೂರ್ವಭಾವಿ ಸಭೆ



ಡಾ.ಬಾಬು ಜಗಜೀವನ ರಾಮ್ ಜಯಂತಿಯ ಪೂರ್ವಭಾವಿ ಸಭೆಯನ್ನು ಜಲದರ್ಶಿನಿಯ ಸರ್ಕಾರಿ ಅತಿಥಿ ಗೃಹದಲ್ಲಿ ವಿಧಾನಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ ನೇತೃತ್ವದಲ್ಲಿ ಬುಧವಾರ ನಡೆಸಲಾಯಿತು.

ಮೈಸೂರು, ಏ.2(ಜಿಎ)–ಡಾ.ಬಾಬು ಜಗಜೀವನ ರಾಮ್ ಜಯಂತಿಯ ಪೂರ್ವಭಾವಿ ಸಭೆಯನ್ನು ಜಲದರ್ಶಿನಿಯ ಸರ್ಕಾರಿ ಅತಿಥಿ ಗೃಹದಲ್ಲಿ ವಿಧಾನಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ ನೇತೃತ್ವದಲ್ಲಿ ಬುಧವಾರ ನಡೆಸಲಾಯಿತು. ಅದ್ದೂರಿಯಾಗಿ ಬಾಬೂಜಿ ಜಯಂತಿ ಆಚರಿಸಲು ನಿರ್ಧರಿಸಲಾಯಿತು.

ಸಭೆಯಲ್ಲಿ ಮುಖಂಡರು ಮಾತನಾಡಿ, ಬಾಬು ಜಗಜೀವನ ರಾಮ್ ಜಯಂತಿಯನ್ನು ಸರ್ಕಾರದ ವತಿಯಿಂದ ಆಚರಿಸಿ, ರಜೆ ಘೋಷಿಸಬೇಕೆಂದು ಮುಖಂಡರು ಒತ್ತಾಯಿಸಿದರು. ನಂತರ ಡಾ.ಡಿ.ತಿಮ್ಮಯ್ಯ ಮಾತನಾಡಿ, ಬಾಬು ಜಗಜೀವನ ರಾಮ್ ಜಯಂತಿಯನ್ನು ಅದ್ದೂರಿಯಾಗಿ ಆಚರಿಸುವಂತೆ ಅಧಿಕಾರಿಗಳಿಗೆ ಸೂಚಿಸಿದರು. ಈ ಸಂದರ್ಭದಲ್ಲಿ ಜಿಲ್ಲಾ ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕ ರಂಗೇಗೌಡ, ಮುಖಂಡರಾದ ಸೋಮಶೇಖರ್ ಸೇರಿದಂತೆ ಜಿಲ್ಲೆಯ ಮುಖಂಡರು ಉಪಸ್ಥಿತರಿದ್ದರು.



ಅಹೋರಾತ್ರಿ ಧರಣಿಯಲ್ಲಿ ಭಾಗಿ

ಅಗತ್ಯ ವಸ್ತುಗಳ ದರ ಏರಿಕೆ ಖಂಡಿಸಿ ಕಾಂಗ್ರೆಸ್ ಸರ್ಕಾರದ ವಿರುದ್ಧ ಬೆಂಗಳೂರಿನ ಫ್ರೀಡಂ ಪಾರ್ಕ್ ಬಳಿ ಅಹೋರಾತ್ರಿ ಧರಣಿಯಲ್ಲಿ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಅವರೊಂದಿಗೆ ಮೈಸೂರು ಬಿಜೆಪಿ ನಗರಾಧ್ಯಕ್ಷ ಎಲ್.ನಾಗೇಂದ್ರ ಪಾಲ್ಗೊಂಡಿದ್ದರು. ಬಿಜೆಪಿ ಇನ್ನಿತರೆ ಮುಖಂಡರು ಇದ್ದರು.

ವಕ್ಫ್ ತಿದ್ದುಪಡಿ ಕಾಯ್ದೆಯನ್ನು ಬೆಂಬಲಿಸಿ ಬೀದಿಗಿಳಿದ ಮುಸ್ಲಿಂ ಮಹಿಳೆಯರು: ಪಟಾಕಿ ಸಿಡಿಸಿ ಸಂಭ್ರಮ



ಭೋಪಾಲ್, ಏ.2– ದೇಶಾದ್ಯಂತ ಪ್ರತಿಭಟನೆಗಳ ನಡುವೆಯೂ ವಕ್ಫ್ ತಿದ್ದುಪಡಿ ಮಸೂದೆ 2025 ಅನ್ನು ಬುಧವಾರ ಸಂಸತ್ತಿನಲ್ಲಿ ಮಂಡಿಸಲಾಯಿತು. ಇತ್ತ, ಮಧ್ಯಪ್ರದೇಶದ ರಾಜಧಾನಿ ಭೋಪಾಲ್‌ನಲ್ಲಿ ಬೇರೆಯದೇ ದೃಶ್ಯ ಕಂಡುಬಂತು. ಇಲ್ಲಿ ಬುರ್ಖಾ ಧರಿಸಿದ ಮಹಿಳೆಯರು ಕೈಯಲ್ಲಿ ಗುಲಾಬಿಗಳನ್ನು ಹಿಡಿದು 'ಧನ್ಯವಾದ ಮೋದಿ ಜೀ' ಎಂಬ ಫಲಕಗಳನ್ನು ಹಿಡಿದು ಬೀದಿಗಿಳಿದರು. ಅವರೆಲ್ಲರೂ ವಕ್ಫ್ ತಿದ್ದುಪಡಿ ಮಸೂದೆಯನ್ನು ಬೆಂಬಲಿಸಿ ಒಟ್ಟುಗೂಡಿದ್ದರು.

ಭೋಪಾಲ್‌ನ ಆನಂದಪುರ ಮತ್ತು ಕೊಕ್ತಾ ಪ್ರದೇಶಗಳಲ್ಲಿ ಬುರ್ಖಾ ಧರಿಸಿದ ಮುಸ್ಲಿಂ ಮಹಿಳೆಯರು ಕೈಯಲ್ಲಿ ಗುಲಾಬಿಗಳನ್ನು ಹಿಡಿದಿದ್ದರು. ಅವರು 'ಧನ್ಯವಾದಗಳು ಮೋದಿ ಜಿ' ಮತ್ತು 'ನಾವು ಮೋದಿ ಜಿ ಅವರನ್ನು ಬೆಂಬಲಿಸುತ್ತೇವೆ' ಎಂದು ಬರೆದಿರುವ ಫಲಕಗಳನ್ನು ಹಿಡಿದುಕೊಂಡಿದ್ದರು. ಭೋಪಾಲ್‌ನ ಹಥೈ ಖೇಡಾ ಅಣೆಕಟ್ಟು ಬಳಿ ಮುಸ್ಲಿಂ ಯುವಕರು ಸಹ ಆಚರಣೆಗಳನ್ನು ನಡೆಸಿದರು. ಈ ಸಮಯದಲ್ಲಿ, ಮುಸ್ಲಿಂ ಯುವಕರು ಪಟಾಕಿಗಳನ್ನು ಸಿಡಿಸುತ್ತಿರುವುದು ಕಂಡುಬಂದಿತು.

ವಕ್ಫ್ ಮಂಡಳಿಯಿಂದ ಭೂಮಿಯನ್ನು ವಶಪಡಿಸಿಕೊಂಡಿರುವ ಶ್ರೀಮಂತ ಮುಸ್ಲಿಂ ನಾಯಕರಿಗೆ ಮಾತ್ರ ಹೊಟ್ಟೆ ನೋವು ಇದೆ ಎಂದು ಸಚಿವ ವಿಶ್ವಾಸ್ ಸಾರಂಗ್ ಹೇಳಿದರು. ಭೋಪಾಲ್‌ನಲ್ಲಿ ಸಾವಿರಾರು ಮುಸ್ಲಿಂ ಸಹೋದರ ಸಹೋದರಿಯರು ಪ್ರಧಾನಿ ನರೇಂದ್ರ ಮೋದಿ ಮತ್ತು ವಕ್ಫ್ ತಿದ್ದುಪಡಿ ಮಸೂದೆಯನ್ನು ಬೆಂಬಲಿಸಿದ್ದಾರೆ. ಈ ಮಸೂದೆ ಸಾಮಾನ್ಯ ಮುಸ್ಲಿಮರ ವಿರುದ್ಧವಲ್ಲ, ಆದರೆ ಕೆಲವು ನಾಯಕರು ತಮ್ಮ ರಾಜಕೀಯ ಹಿತಾಸಕ್ತಿಗಳನ್ನು ಹೆಚ್ಚಿಸಲು ಜನರನ್ನು ದಾರಿ ತಪ್ಪಿಸುತ್ತಿದ್ದಾರೆ ಎಂದರು.

ದೇಶ - ವಿದೇಶ

ಬಲೂಚಿಸ್ತಾನ ಹೆದ್ದಾರಿಗಳಲ್ಲಿ ರಾತ್ರಿ ಸಂಚಾರಕ್ಕೆ ನಿರ್ಬಂಧ



ಬಲೂಚಿಸ್ತಾನ: ಭಯೋತ್ಪಾದಕ ಚಟುವಟಿಕೆಗಳು ಹೆಚ್ಚಾಗುತ್ತಿರುವ ಹಿನ್ನೆಲೆಯಲ್ಲಿ ಬಲೂಚಿಸ್ತಾನ ಪ್ರಾಂತ್ಯದ ಹಲವಾರು ಜಿಲ್ಲೆಗಳ ಪ್ರಮುಖ ಹೆದ್ದಾರಿಗಳಲ್ಲಿ ರಾತ್ರಿ ಸಂಚಾರ ನಿಷೇಧಿಸಿ ಬಲೂಚಿಸ್ತಾನ ಸರ್ಕಾರ ಆದೇಶ ಹೊರಡಿಸಿದೆ ಎಂದು ಡಾನ್ ನ್ಯೂಸ್ ವರದಿ ಮಾಡಿದೆ. ಇದರಿಂದ ನಾಗರಿಕರು ರಾತ್ರಿ ಹೊತ್ತಿನಲ್ಲಿ ಹೆದ್ದಾರಿಗಳಲ್ಲಿ ಸಂಚರಿಸುವುದು ಸಂಪೂರ್ಣ ಬಂದ್ ಆಗಲಿದೆ.

ಪ್ರಾಂತ್ಯದಾದ್ಯಂತ ಪ್ರಯಾಣಿಕರನ್ನು ಗುರಿಯಾಗಿಸಿಕೊಂಡು ಭಯೋತ್ಪಾದಕ ದಾಳಿಗಳು ಹೆಚ್ಚಾದ ನಂತರ ಈ ಕ್ರಮ ಕೈಗೊಳ್ಳಲಾಗಿದೆ. ಗ್ವಾದರ್, ಕಛಿ, ಝೋಬ್, ನೊಶ್ಕಿ ಮತ್ತು ಮುಸಾಖೇಲ್ ಜಿಲ್ಲೆಗಳಲ್ಲಿ ರಾತ್ರಿಯ ಸಮಯದಲ್ಲಿ ಪ್ರಯಾಣವನ್ನು ನಿರ್ಬಂಧಿಸಿ ಅಧಿಕಾರಿಗಳು ಅಧಿಕೃತ ಅಧಿಸೂಚನೆಗಳನ್ನು ಹೊರಡಿಸಿದ್ದಾರೆ. ಹಾಗೆಯೇ ಕ್ವೆಟ್ಟಾದಿಂದ ರಾತ್ರಿ ಸಮಯದಲ್ಲಿ ಯಾವುದೇ ಸಂಚಾರಕ್ಕೆ ಅನುಮತಿ ಇರುವುದಿಲ್ಲ ಎಂದು ಕ್ವೆಟ್ಟಾ ಆಡಳಿತ ನಿರ್ದೇಶನ ನೀಡಿದೆ. ಈ ಕುರಿತಾದ ಸಭೆಯ ಅಧ್ಯಕ್ಷತೆ ವಹಿಸಿದ್ದ ಕ್ವೆಟ್ಟಾ ಆಯುಕ್ತ ಹಮ್ಜಾ ಶಫ್ಕತ್ ಮಾತನಾಡಿ, ಬಲೂಚಿಸ್ತಾನವನ್ನು ಸಿಂದ್‌ನೊಂದಿಗೆ ಸಂಪರ್ಕಿಸುವ ಕರಾಚಿ–ಕ್ವೆಟ್ಟಾ ಹೆದ್ದಾರಿಯಲ್ಲಿ ರಾತ್ರಿ ಪ್ರಯಾಣ ನಿಷೇಧಿಸಲು ನಿರ್ಧರಿಸಲಾಯಿತು.

ಎನ್‌ಕೌಂಟರ್‌ನಲ್ಲಿ ಇಬ್ಬರು ಶಸ್ತ್ರಸಜ್ಜಿತ ಮಹಿಳಾ ನಕ್ಸಲರ ಹತ್ಯೆ



ಭೋಪಾಲ್: ಮಧ್ಯಪ್ರದೇಶ ಪೊಲೀಸರು ಬುಧವಾರ ಬೆಳಗ್ಗೆ ನಡೆಸಿದ ಮಾವೋವಾದಿ ವಿರೋಧಿ ಕಾರ್ಯಾಚರಣೆಯಲ್ಲಿ ಮಾಂಡ್ಲಾ ಜಿಲ್ಲೆಯ ಕಾಡಿನಲ್ಲಿ ಇಬ್ಬರು ಶಸ್ತ್ರಸಜ್ಜಿತ ಮತ್ತು ವಾಂಟೆಡ್ ಮಹಿಳಾ ನಕ್ಸಲರನ್ನು ಗುಂಡಿಕ್ಕಿ ಹತ್ಯೆ ಮಾಡಿದ್ದಾರೆ.

ಕಾರ್ಯಾಚರಣೆಯನ್ನು ದೃಢಪಡಿಸಿದ ಮಧ್ಯಪ್ರದೇಶ ವಿಶೇಷ ಡಿಜಿ(ನಕ್ಸಲ್ ವಿರೋಧಿ) ಪಂಕಜ್ ಶ್ರೀವಾಸ್ತವ ಅವರು, ಹತ್ಯೆಗೀಡಾದ ಛತ್ತೀಸ್‌ಗಢ ಮೂಲದ ಈ ಮಹಿಳಾ ನಕ್ಸಲರ ತಲೆಗೆ ತಲಾ 14 ಲಕ್ಷ ರೂ. ಬಹುಮಾನ. ಅಂದರೆ ಒಟ್ಟಾರೆಯಾಗಿ 28 ಲಕ್ಷ ರೂ. ಬಹುಮಾನ ಹೊಂದಿದ್ದರು ಎಂದು ತಿಳಿಸಿದ್ದಾರೆ.

ಮಮತಾ ಮತ್ತು ಪ್ರಮೀಳಾ ಎಂದು ಗುರುತಿಸಲಾದ ಮಹಿಳಾ ಮಾವೋವಾದಿ ಜೋಡಿಯು ಛತ್ತೀಸ್‌ಗಢ ಮೂಲದವರಾಗಿದ್ದು, ಮಧ್ಯಪ್ರದೇಶ ಮತ್ತು ಛತ್ತೀಸ್‌ಗಢದ ಬಾಲಘಾಟ್, ಮಾಂಡ್ಲಾ ಮತ್ತು ಕವರ್ಧಾ ಜಿಲ್ಲೆಗಳಲ್ಲಿ ಸಕ್ರಿಯವಾಗಿರುವ ಎಡಪಂಥೀಯ ಉಗ್ರಗಾಮಿಗಳು ಕನ್ಹಾ–ಭೋರಾಮ್‌ದೇವ್ ವಿಭಾಗದ ಭಾಗವಾಗಿದ್ದರು ಎಂದು ಅವರು ಹೇಳಿದ್ದಾರೆ.

ಲಕ್ಷಾಂತರ ಅವಾಮಿ ಲೀಗ್ ಸದಸ್ಯರು ಭಾರತಕ್ಕೆ ಪಲಾಯನ



ಢಾಕಾ: ಬಾಂಗ್ಲಾದೇಶದ ಪದಚ್ಯುತ ಪ್ರಧಾನಿ ಶೇಖ್ ಹಸೀನಾ ಅವರ ಅವಾಮಿ ಲೀಗ್‌ನ ಒಂದು ಲಕ್ಷಕ್ಕೂ ಹೆಚ್ಚು ಸದಸ್ಯರು ಭಾರತಕ್ಕೆ ಪಲಾಯನ ಮಾಡಿದ್ದಾರೆ ಎಂದು ಮಧ್ಯಂತರ ಸರಕಾರದ ಮಾಹಿತಿ ಸಲಹೆಗಾರ ಮಹ್ಫುಜ್ ಆಲಂ ಹೇಳಿಕೊಂಡಿರುವುದಾಗಿ ಮಾಧ್ಯಮಗಳು ತಿಳಿಸಿವೆ. ಹಸೀನಾ ಅಧಿಕಾರಾವಧಿಯಲ್ಲಿ ನಾಪತ್ತೆಯಾದ ಅಥವಾ ಹತ್ಯೆಗೀಡಾದ ವ್ಯಕ್ತಿಗಳ ಕುಟುಂಬಗಳು ಭಾಗವಹಿಸಿದ್ದ ಢಾಕಾದಲ್ಲಿ ನಡೆದ ಈದ್ ಕೂಟದಲ್ಲಿ ಆಲಂ ಈ ಹೇಳಿಕೆ ನೀಡಿದ್ದಾರೆ. ಮಾನವ ಹಕ್ಕುಗಳ ಗುಂಪು ಮೇಯರ್ ಡಾಕ್ ನಗರದ ತೇಜ್‌ಗಾಂವ್ ಪ್ರದೇಶದಲ್ಲಿ ಈ ಕಾರ್ಯಕ್ರಮವನ್ನು ಆಯೋಜಿಸಿತ್ತು. ಹಸೀನಾ ಅವರನ್ನು ಟೀಕಿಸಿದ ಮಹ್ಫುಜ್, ತನ್ನ ಹೆತ್ತವರ ಹತ್ಯೆಗೆ ಸೇಡು ತೀರಿಸಿಕೊಳ್ಳಲು ಬಲವಂತದ ನಾಪತ್ತೆಗಳು ಮತ್ತು ಹತ್ಯೆಗಳನ್ನು ಬಳಸಿಕೊಂಡಿದ್ದಾರೆ ಎಂದು ರಾಜ್ಯ ಸ್ವಾಮ್ಯದ ಸುದ್ದಿ ಸಂಸ್ಥೆ ವರದಿ ಮಾಡಿದೆ. ಜನರು ತಮ್ಮ ಮತದಾನದ ಹಕ್ಕುಗಳಿಗಾಗಿ ಹೋರಾಡುತ್ತಿದ್ದ 2013 ಮತ್ತು 2014 ರಲ್ಲಿ ಅತೀ ಹೆಚ್ಚು ಬಲವಂತದ ನಾಪತ್ತೆಗಳು ವರದಿಯಾಗಿವೆ. ಈ ಕ್ರಮಗಳ ಹಿಂದಿನ ಪ್ರಮುಖ ಉದ್ದೇಶ ಚುನಾವಣಾ ವ್ಯವಸ್ಥೆಯನ್ನು ನಾಶ ಮಾಡುವುದಾಗಿತ್ತು ಎಂದು ಹೇಳಿದ್ದಾರೆ.

ನನ್ ಹೆಂಡ್ತಿ ಹೊಡೀತಾಳೆ.. ಪ್ಲೀಸ್, ಕಾಪಾಡಿ... ಕಾಪಾಡಿ...!



ಭೋಪಾಲ್: ನನ್ ಹೆಂಡ್ತಿ ಹೊಡೀತಾಳೆ... ಹೊಡೆದು ಕೊಂದು ಹಾಕ್ತಾಳೆ... ದಯವಿಟ್ಟು ನನ್ನನ್ನು ಕಾಪಾಡಿ ಸರ್ ಎಂದು ರೈಲ್ವೆ ಉದ್ಯೋಗಿಯೊಬ್ಬರು ಪೊಲೀಸರ ಮೊರೆ ಹೋಗಿರುವ ಆಘಾತಕಾರಿ ಘಟನೆ ವರದಿಯಾಗಿದೆ. ಮಧ್ಯಪ್ರದೇಶದ ಸತ್ನಾ ಜಿಲ್ಲೆಯ ಪನ್ನಾದಲ್ಲಿ 30 ವರ್ಷದ ಲೋಕೋ ಪೈಲಟ್ ಲೋಕೇಶ್ ಮಾಂಝಿ, ತಮ್ಮ ಪತ್ನಿ ಹರ್ಷಿತಾ ರಾಯಕ್ವಾರ್ ವಿರುದ್ಧವೇ ಪೊಲೀಸ್ ದೂರು ನೀಡಿದ್ದಾರೆ. ಅಲ್ಲದೆ ತಮ್ಮ ಮನೆಯಲ್ಲಿ ಪತ್ನಿ ಹಲ್ಲೆ ಮಾಡುತ್ತಿರುವ ಸಿಸಿಟಿವಿ ವಿಡಿಯೋವನ್ನೂ ಕೂಡ ಲೋಕೇಶ್ ಮಾಂಝಿ ಪೊಲೀಸರಿಗೆ ನೀಡಿದ್ದು ಕೂಡಲೇ ಆಕೆ ವಿರುದ್ಧ ಗೃಹ ಹಿಂಸೆ ಕಾಯ್ದೆಯಡಿ ಪ್ರಕರಣ ದಾಖಲಿಸಿಕೊಂಡು ಬಂಧಿಸುವಂತೆ ಒತ್ತಾಯಿಸಿದ್ದಾರೆ. ನನ್ನ ಪತ್ನಿ, ನಾನು ನನ್ನ ತಂದೆ–ತಾಯಿ ಕುಟುಂಬಸ್ಥರೊಂದಿಗೆ ಬೆರೆಯದಂತೆ ನಿರ್ಬಂಧಿಸುತ್ತಾಳೆ. ಸ್ನೇಹಿತರೊಂದಿಗೂ ಮಾತನಾಡಬಾರದು ಎಂದು ಹೇಳುತ್ತಾಳೆ. ಅವಳ ಮಾತು ಮೀರಿ ಜಗಳ ಮಾತ್ರವಲ್ಲ ಕೈಗೆ ಸಿಕ್ಕ ವಸ್ತುಗಳಿಂದ ಥಳಿಸುತ್ತಾಳೆ. ಇದಕ್ಕೆ ಪ್ರತಿರೋಧ ತೋರಿದರೆ ಗೃಹ ಹಿಂಸೆ, ವರದಕ್ಷಿಣೆ ಕಿರುಕುಳ ದೂರು ನೀಡುತ್ತೇನೆ ಎಂದು ಹೆದರಿಸುತ್ತಾಳೆ ಎಂದು ಲೋಕೇಶ್ ಮಾಂಝಿ ಪೊಲೀಸರ ಬಳಿ ನೆರವು ಕೋರಿದ್ದಾರೆ.

ಪೂಂಚ್‌ನಲ್ಲಿ ಭಾರತದೊಳಗೆ ನುಸುಳಿದ ಪಾಕ್ ಪಡೆಗಳು



ನವದೆಹಲಿ: ಜಮ್ಮು–ಕಾಶ್ಮೀರದ ಪೂಂಚ್ ಪ್ರದೇಶದ ಗಡಿ ನಿಯಂತ್ರಣ ರೇಖೆ (ಎಲ್‌ಒಸಿ) ಉದ್ದಕ್ಕೂ ಪಾಕಿಸ್ತಾನ ಕದನ ವಿರಾಮ ಉಲ್ಲಂಘನೆ ಮಾಡಿದ್ದು, ಪಾಕ್ ಸೇನೆಯಿಂದ ಅಪ್ರಚೋದಿತ ಗುಂಡಿನ ದಾಳಿ ಮತ್ತು ಅತಿಕ್ರಮಣ ನಡೆದಿದೆ ಎಂದು ವರದಿಯಾಗಿದೆ. ಇದಕ್ಕೆ ಭಾರತೀಯ ಸೇನೆಯು ತಕ್ಕ ಪ್ರತಿಕ್ರಿಯೆ ನೀಡಿದೆ ಎಂದು ಸೇನಾ ಸಾರ್ವಜನಿಕ ಸಂಪರ್ಕ ಅಧಿಕಾರಿ ಲೆಫ್ಟಿನೆಂಟ್ ಕರ್ನಲ್ ಸುನೀಲ್ ಬರ್ತ್ವಾಲ್ ಹೇಳಿದ್ದಾರೆ. ಏಪ್ರಿಲ್ 1 ರಂದು ಗಡಿ ನಿಯಂತ್ರಣ ರೇಖೆಯಾದ್ಯಂತ ದಾಟಿ ಪಾಕಿಸ್ತಾನ ಸೇನೆಯ ಒಳನುಸುಳುವಿಕೆಯ ಪರಿಣಾಮವಾಗಿ ಕೃಷ್ಣ ಘಾಟಿ ವಲಯದಲ್ಲಿ ಗಣಿ ಸ್ಫೋಟ ಸಂಭವಿಸಿದೆ. ಇದರ ನಂತರ ಕದನ ವಿರಾಮ ಒಪ್ಪಂದದ ಉಲ್ಲಂಘನೆ ಮಾಡಿರುವ ಪಾಕಿಸ್ತಾನ ಸೇನೆಯು ಅಪ್ರಚೋದಿತ ಗುಂಡಿನ ದಾಳಿ ನಡೆಸಿದೆ ಎಂದು ತಿಳಿಸಿದರು.

ಪಾಕಿಸ್ತಾನದ ಕಡೆಯಲ್ಲಿ ಸಾವುನೋವು ಸಂಭವಿಸಿದೆ ಎಂದು ಮತ್ತೊಂದು ಮೂಲ ವರದಿ ಮಾಡಿದೆ. ಆದರೆ, ಭಾರತದ ಕಡೆಯಲ್ಲಿ ಯಾವುದೇ ಸಾವುನೋವು ಸಂಭವಿಸಿಲ್ಲ ಎಂದು ವರದಿಯಾಗಿದೆ.

ತ್ಯಾಜ್ಯ ವಿಲೇವಾರಿ ಘಟಕ ನಿರ್ಮಾಣ: ಬಿಎಸ್‌ಪಿ-ಕಾಂಗ್ರೆಸ್ ತಿಕ್ಕಾಟ



ಕಾಂಗ್ರೆಸ್‌ನಿಂದ ಪ್ರತಿಭಟನಾ ಮೆರವಣಿಗೆ ನಡೆಯುತ್ತಿದ್ದರೆ, ಮತ್ತೊಂದೆಡೆ ಬಿಎಸ್‌ಪಿಯಿಂದ ಧರಣಿ ನಡೆಸುತ್ತಿರುವುದನ್ನು ಚಿತ್ರದಲ್ಲಿ ಕಾಣಬಹುದು.

ಸಿದ್ದಾಪುರ,ಏ.2– ಮಾಲ್ದಾರೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಕಲ್ಲಳದಲ್ಲಿ ತ್ಯಾಜ್ಯ ವಿಲೇವಾರಿ ಘಟಕ ನಿರ್ಮಾಣ ವಿರೋಧಿಸಿ ಬಹುಜನ ಸಮಾಜ ಪಾರ್ಟಿ ಮತ್ತು ಕಾಂಗ್ರೆಸ್ ನಡೆಸುತ್ತಿದ್ದ ಪ್ರತಿಭಟನೆ ವಿಕೋಪ ಪರಿಸ್ಥಿತಿಗೆ ಎಡೆ ಮಾಡಿಕೊಟ್ಟಿತು. ಸ್ಥಳದಲ್ಲಿದ್ದ ಪೊಲೀಸರು ಹಾಗೂ ಅಧಿಕಾರಿಗಳು ಪ್ರತಿಭಟನಾಕಾರರ ಎರಡೂ ಗುಂಪುಗಳನ್ನು ಸಮಾಧಾನಪಡಿಸಿ ಪರಿಸ್ಥಿತಿಯನ್ನು ತಿಳಿಗೊಳಿಸಿದರು.

ಮಾಲ್ದಾರೆ ಗ್ರಾಮ ಪಂಚಾಯಿತಿ ವ್ಯಾಪ್ತಿ ಚೊಟ್ಟೆಪಾಳಿ(ಕಲ್ಲಳ) ಎಂಬಲ್ಲಿ ಗ್ರಾಮ ಪಂಚಾಯಿತಿ ವತಿಯಿಂದ ನೂತನವಾಗಿ ಕಸ ವಿಲೇವಾರಿ ಕೇಂದ್ರ ನಿರ್ಮಿಸಲು ಮುಂದಾಗಿರುವ ಕ್ರಮವನ್ನು ಖಂಡಿಸಿ ಕಳೆದ 10 ದಿನಗಳಿಂದ ಬಹುಜನ ಸಮಾಜ ಪಾರ್ಟಿ ನೇತೃತ್ವದಲ್ಲಿ ಅಹೋರಾತ್ರಿ ಪ್ರತಿಭಟನೆ ನಡೆಸುತ್ತಿದೆ. ಈ ನಡುವೆ ಇಂದು ಕಾಂಗ್ರೆಸ್ ಸ್ಥಳೀಯರನ್ನು ಒಗ್ಗೂಡಿಸಿ ಉದ್ದೇಶಿತ ಜಾಗದಲ್ಲೇ ಘಟಕ ನಿರ್ಮಾಣ ಮಾಡಬೇಕೆಂದು ಪಟ್ಟು ಹಿಡಿದು ಪ್ರತಿಭಟನೆ ನಡೆಸಿದರು.

ಮಾಲ್ದಾರೆ ಗ್ರಾಪಂ ಮುಂದೆ ಎರಡು ಪ್ರತಿಭಟನೆಕಾರರ ಗುಂಪುಗಳು ಉದ್ರಿಕ್ತವಾಗಿ ಆಕ್ರೋಶ ವ್ಯಕ್ತಪಡಿಸಿ ಪರಸ್ಪರ ಧಿಕ್ಕಾರ ಘೋಷಣೆಗಳನ್ನು ಕೂಗಿದರು. ಇದೇ ವೇಳೆ ಕಾಂಗ್ರೆಸ್ ನೇತೃತ್ವದಲ್ಲಿ ತ್ಯಾಜ್ಯ ಘಟಕ ನಿರ್ಮಾಣಕ್ಕೆ ಪರವಹಿಸಿ ಮುಖ್ಯ ರಸ್ತೆಯಲ್ಲಿ ಪ್ರತಿಭಟನೆ ಮೆರವಣಿಗೆ ನಡೆಸಿದರು. ಗ್ರಾಮ ಪಂಚಾಯಿತಿ ಮುಂಭಾಗದಲ್ಲಿ ಜಮಾವಣೆಗೊಂಡ ಪ್ರತಿಭಟನಾಕಾರರು ಬಿಎಸ್‌ಪಿ ನೇತೃತ್ವದ ಪ್ರತಿಭಟನೆಗೆ ಧಿಕ್ಕಾರ ಘೋಷಣೆಗಳನ್ನು ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಜಿಪಂ ಮಾಜಿ ಸದಸ್ಯೆ ಕಾವೇರಿ ಮಾತನಾಡಿ, 25 ವರ್ಷಗಳಿಂದ ತ್ಯಾಜ್ಯ ವಿಲೇವಾರಿಗೆ ಸೂಕ್ತ ಜಾಗ ಕಂಡುಕೊಳ್ಳಲಾಗದ ಜನಪ್ರತಿನಿಧಿಗಳು ಅಸಹಾಯಕತೆ ತೋರಿದ್ದರು. ಇದೀಗ ಶಾಶ್ವತ ಪರಿಹಾರಕ್ಕೆ ಮುಂದಾಗಿರುವ ಶಾಸಕ ಎ.ಎಸ್ ಪೊನ್ನಣ್ಣ ವಿರುದ್ಧ ಪ್ರತಿಭಟನೆಗೆ ಮುಂದಾಗಿರುವುದು ನಾಚಿಕೆಗೇಡಿನ ವಿಷಯ ಎಂದು ಆಕ್ರೋಶಿಸಿದರು. ಮಾಜಿ ಶಾಸಕರು, ಸಂಸದರು ಘಟಕ ನಿರ್ಮಾಣಕ್ಕೆ ವಿರೋಧ ವ್ಯಕ್ತಪಡಿಸಿ ಬಿಎಸ್‌ಪಿ ಪ್ರತಿಭಟನೆಗೆ ಬೆಂಬಲ ಸೂಚಿಸಿದ್ದಾರೆ ಎಂದು ಆರೋಪಿಸಿದರು.

ವಲಯ ಕಾಂಗ್ರೆಸ್ ಅಧ್ಯಕ್ಷ ಸಜಿ ತೋಮಸ್ ಮಾತನಾಡಿ, ಸಿದ್ದಾಪುರ-ಮಾಲ್ದಾರೆ ಗ್ರಾಪಂ ವ್ಯಾಪ್ತಿಯಲ್ಲಿ ಶಾಶ್ವತವಾದ ತ್ಯಾಜ್ಯ ವಿಲೇವಾರಿಗೆ ಸ್ಥಳೀಯ ಸಂಸ್ಥೆಯೊಂದು ಜಾಗ ಖರೀದಿ ಮಾಡಿ ಉದಾರವಾಗಿ ನೀಡಿದೆ. ಆ ಜಾಗದಲ್ಲಿ ವೈಜ್ಞಾನಿಕ ತ್ಯಾಜ್ಯ ವಿಲೇವಾರಿ ಘಟಕ ಪ್ರಾರಂಭವಾಗುತ್ತಿದ್ದು ಸಾರ್ವಜನಿಕ ಹಿತಾಸಕ್ತಿಗಾಗಿ ಶಾಶ್ವತವಾದ ಘಟಕ ನಿರ್ಮಾಣವಾಗಲೇಬೇಕೆಂದು ಒತ್ತಾಯಿಸಿದರು.

ಪ್ರತಿಭಟನಾ ಸ್ಥಳಕ್ಕೆ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಆನಂದ್ ಪ್ರಕಾಶ್ ಮೀನ ಭೇಟಿ ನೀಡಿ ಎರಡು ಪ್ರತಿಭಟನಾಕಾರರ ಮನವಿಗಳನ್ನು ಆಲಿಸಿ ಸಮಸ್ಯೆ ಬಗೆಹರಿಸುವ ನಿಟ್ಟಿನಲ್ಲಿ ಅಧಿಕಾರಿಗಳೊಂದಿಗೆ ಸಭೆ ನಡೆಸಿ ಇತ್ಯರ್ಥಪಡಿಸುವುದಾಗಿ ಭರವಸೆ ನೀಡಿದರು. ಅಧಿಕಾರಿಗಳ ಭರವಸೆ ಹಿನ್ನೆಲೆ ಕಾಂಗ್ರೆಸ್ ಪ್ರತಿಭಟನೆಯನ್ನು ಹಿಂತೆಗೆದುಕೊಂಡರೆ ಬಿಎಸ್‌ಪಿ ಪ್ರತಿಭಟನೆಯನ್ನು ಮುಂದುವರೆಸಿದೆ.

ಕಾಂಗ್ರೆಸ್ ನೇತೃತ್ವದ ಪ್ರತಿಭಟನೆಯಲ್ಲಿ ತಾಪಂ ಸದಸ್ಯರಾದ ಜಾನ್ಸನ್, ಚಿನ್ನಮ್ಮ, ಗಣೇಶ್, ಎಂ.ವಿಜಯ್, ಮಾಜಿ ಸದಸ್ಯ ಗಣೇಶ್, ಕಾವೇರಿ, ವಲಯ ಕಾಂಗ್ರೆಸ್ ಅಧ್ಯಕ್ಷರಾದ ಎಂ.ಎಂ. ಕಾಳಪ್ಪ, ಪ್ರತಿಶ, ಸಜಿ ತೋಮಸ್, ಮಾಲ್ದಾರೆ ಗ್ರಾಮ ಪಂಚಾಯಿತಿ ಅಧ್ಯಕ್ಷ ಮಾಲತಿ, ಸಿದ್ದಾಪುರ ಗ್ರಾಮ ಪಂಚಾಯಿತಿ ಅಧ್ಯಕ್ಷೆ ಪ್ರೇಮ ಗೋಪಾಲ್, ಉಪಾಧ್ಯಕ್ಷ ಪಳನಿ ಸ್ವಾಮಿ, ಮಾಜಿ ಅಧ್ಯಕ್ಷ ವಿ.ಕೆ ಬಶೀರ್ ಸೇರಿದಂತೆ ಮಾಲ್ದಾರೆ ಹಾಗೂ ಸಿದ್ದಾಪುರ ಗ್ರಾಮ ಪಂಚಾಯಿತಿ ಸದಸ್ಯರುಗಳು, ಪಕ್ಷದ ಮುಖಂಡರು ಸ್ಥಳೀಯರು ಹಾಜರಿದ್ದರು.

ವಿರಾಜಪೇಟೆ ತಾಲೂಕು ತಹಶೀಲ್ದಾರ್ ಬಿ.ಅನಂತ ಶಂಕರ ಹಾಗೂ ತಾಲೂಕು ಕಾರ್ಯ ನಿರ್ವಹಣಾಧಿಕಾರಿ ಅಪ್ಪಣ್ಣ, ಮಡಿಕೇರಿ ಡಿವೈಎಸ್‌ಪಿ ಸೂರಜ್, ವೃತ್ತ ನಿರೀಕ್ಷಕ ರಾಜು, ಸಿದ್ದಾಪುರ ಠಾಣಾಧಿಕಾರಿ ರಾಘವೇಂದ್ರ, ಅಪರಾಧ ಪತ್ತೆದಳದ ಉಪ ನಿರೀಕ್ಷಕ ಶಿವಣ್ಣ, ಸೇರಿದಂತೆ ಪೊಲೀಸ್ ತುಕುಡಿಯನ್ನು ಸ್ಥಳದಲ್ಲಿ ನಿಂಯೋಜಿಸಿ ಬಂದು ಬಸ್ತ್ ಕೈಗೊಳ್ಳಲಾಗಿತ್ತು.

ಕುಶಾಲನಗರ ಸುತ್ತಮುತ್ತ ಭಾರಿ ಮಳೆ



ಕುಶಾಲನಗರ ಸೇರಿದಂತೆ ಸುತ್ತಮುತ್ತಲಿನ ಗ್ರಾಮಗಳಲ್ಲಿ ಜೋರು ಮಳೆ ಸುರಿದಿದೆ.

ಕುಶಾಲನಗರ,ಏ.2– ಪಟ್ಟಣ ಸೇರಿದಂತೆ ಸುತ್ತಮುತ್ತಲಿನ ಗ್ರಾಮಗಳಲ್ಲಿ ಸಂಜೆ ಒಂದು ತಾಸುಗಳಿಗೂ ಹೆಚ್ಚು ಕಾಲ ಗುಡುಗು ಸಹಿತ ಜೋರು ಮಳೆ ಸುರಿದಿದೆ.

ಬೆಳಿಗ್ಗೆಯಿಂದಲೇ ಮೋಡ ಕವಿದ ವಾತಾವರಣ ಇತ್ತು ಮಧ್ಯಾಹ್ನ ತುಂತುರು ಹನಿಗಳಿಂದ ಆರಂಭಗೊಂಡ ಮಳೆ ನಿರಂತರವಾಗಿ ಸುರಿದು ಮಳೆಯ ನೀರು ಚರಂಡಿಯಲ್ಲಿ ತುಂಬಿ ರಸ್ತೆ ಮೇಲೆ ಹರಿಯಿತು. ಇದರಿಂದ ವಾಹನ ಸಂಚಾರಕ್ಕೆ ತೊಂದರೆ ಆಯಿತು.

ಗುಡ್ಡೆಹೊಸೂರು, ಹಾರಂಗಿ, ಕೂಡಿಗೆ, ಹೆಬ್ಬಾಲೆ, ತೊರೆನೂರು ಗ್ರಾಮಗಳಲ್ಲಿ ಜೋರಾಗಿ ಮಳೆ ಬಂದಿದೆ. ಮಧ್ಯಾಹ್ನದಲ್ಲಿಯೂ ಆರಂಭವಾದ ಮಳೆ ಸಂಜೆಯು ಸುರಿಯಿತು. ಇದರಿಂದ ರಸ್ತೆಯಲ್ಲೆಲ್ಲಾ ನೀರು ಹರಿದು ಹಳ್ಳಗಳಲ್ಲಿ ತುಂಬಿ ನಿಂತಿತು. ಬಿಸಿಲಿನ ಧಗೆ ತೀವ್ರತೆಯಿಂದ ಕೂಡಿದ್ದ ಇಳೆಗೆ ಜೋರಾಗಿ ಬಂದ ಮಳೆಯಿಂದ ವಾತಾವರಣ ತಂಪಾಯಿತು.

ಗುಂಡಿ ಮುಚ್ಚಲು ಗ್ರಾಮಸ್ಥರ ಆಗ್ರಹ



ಸುಂಟಿಕೊಪ್ಪ,ಏ.2– ಇಲ್ಲಿನ ಕಂದಾಯ ಮತ್ತು ಕೃಷಿ ಇಲಾಖೆಯ ಕಚೇರಿಗಳಿಗೆ ತೆರಳುವ ರಸ್ತೆಯಲ್ಲಿ ಭಾರಿ ಗುಂಡಿ ಬಿದ್ದಿದ್ದು ವಾಹನ ಸವಾರರು ಅದರಲ್ಲೂ ದ್ವಿಚಕ್ರ ಸವಾರರು ಬಿದ್ದು ಪ್ರಾಣಕ್ಕೆ ಕಂಟಕವಾಗುವ ಸಾಧ್ಯತೆಗಳು ಹೆಚ್ಚಾಗುತ್ತಿವೆ. ರಸ್ತೆಯ ಗುಂಡಿಗಳು ದಿನ ನಿತ್ಯ ದೊಡ್ಡದಾಗುತ್ತಿದ್ದು ಗುಂಡಿ ತಪ್ಪಿಸುವ ಪ್ರಯತ್ನದಲ್ಲಿ ಪಾದಚಾರಿಗಳಿಗೂ ಅಪಾಯ ತಪ್ಪಿದಲ್ಲ. ಸಂಬಂಧಿಸಿದ ಅಧಿಕಾರಿಗಳು ಈ ಬಗ್ಗೆ ಗಮನಹರಿಸಿ ಗುಂಡಿ ಮುಚ್ಚುವ ಕಾರ್ಯಕ್ಕೆ ಮುಂದಾಗಬೇಕೆಂದು ಗ್ರಾಮಸ್ಥರು ಆಗ್ರಹಿಸಿದ್ದಾರೆ.

ನಾಳೆ ನಡಿಕೇರಿಯಂಡ ಚಿಣ್ಣಪ್ಪ ಜನ್ಮ ದಿನಾಚರಣೆ

ಕೊಡವಾಮೇರ ಕೊಂಡಾಟ ಲೋಗೋ

ವಿರಾಜಪೇಟೆ,ಏ.2– ಜಾನಪದ ಇತಿಹಾಸದಲ್ಲಿ ಪ್ರಪ್ರಥಮ ಜಾನಪದ ಆಧಾರಿತ ಸಂಗ್ರಹ ಪುಸ್ತಕ ಪಟ್ಟೋಲೆ ಪಳಮೆಯನ್ನು ಪ್ರಕಟಿಸಿದ, ಜಾನಪದ ಬ್ರಹ್ಮ ಎಂದೇ ಖ್ಯಾತರಾಗಿರುವ, ದಿ. ನಡಿಕೇರಿಯಂಡ ಚಿಣ್ಣಪ್ಪ ಅವರ 150ನೇ ಜನ್ಮ ದಿನಾಚರಣೆಯ ಅಂಗವಾಗಿ, ಕೊಡವಾಮೇರ ಕೊಂಡಾಟ ಸಂಘಟನೆ ವತಿಯಿಂದ ಏ.4 ರಂದು ಕೊಡವ ಜಾನಪದ ನಾಳ್ ಮತ್ತು ಕೊಡವಾಮೆಗಾಗಿ ಎಲೆಮರೆಯಲ್ಲಿ ದುಡಿಯುತ್ತಿರುವ ಸುಮಾರು 250 ಜನರಿಗೆ, ದಿವಂಗತ ಮುಕ್ಕಾಟಿರ ಶಿವು ಮಾದಪ್ಪ ನೆನಪಿನಲ್ಲಿ ಸ್ಮರಣಿಕೆ ವಿತರಣಾ ಕಾರ್ಯಕ್ರಮ ವಿರಾಜಪೇಟೆ ಕೊಡವ ಸಮಾಜದಲ್ಲಿ ನಡೆಯಲಿದೆ.

ಶಾಸಕ ಅಜ್ಜಿಕುಟ್ಟಿರ ಎಸ್. ಪೊನ್ನಣ್ಣ, ವಿಧಾನಪರಿಷತ್ ಸದಸ್ಯ ಮಂಡೆಪಂಡ ಸುಜಾ ಕುಶಾಲಪ್ಪ, ಅಖಿಲ ಕೊಡವ ಸಮಾಜ ಅಧ್ಯಕ್ಷ ಪರದಂಡ ಸುಬ್ರಮಣಿ, ಕೊಡವ ಸಮಾಜ ಒಕ್ಕೂಟದ ಅಧ್ಯಕ್ಷ ಕಳ್ಳಿಚಂಡ ವಿಷ್ಣು ಕಾರ್ಯಪ್ಪ ಅಖಿಲ ಕೊಡವ ಸಮಾಜ ಪೊಮ್ಮಕ್ಕಡ ಪರಿಷತ್ ಅಧ್ಯಕ್ಷೆ ಬಾಚರಣಿಯಂಡ ರಾಣೂ ಅಪ್ಪಣ್ಣ, ಅಖಿಲ ಅಮ್ಮ ಕೊಡವ ಸಮಾಜ ಅಧ್ಯಕ್ಷ ಬಾನಂಡ ಪ್ರತ್ಯು, ಕೊಡವ ಭಾಷಿಕ ಸಮಾಜ ಒಕ್ಕೂಟ ಅಧ್ಯಕ್ಷ ಮೇಚಿರ ಸುಭಾಶ್ ನಾಣಯ್ಯ, ನಡಿಕೇರಿಯಂಡ ಒಕ್ಕ ಅಧ್ಯಕ್ಷ ನಡಿಕೇರಿಯಂಡ ಕಿಶೋರ್ ತಿಮ್ಮಯ್ಯ, ಸರ್ಕಂಡ ಸೋಮಯ್ಯ ಭಾಗವಹಿಸಲಿದ್ದಾರೆ.

ಈ ಸ್ಮರಣಿಕೆಯನ್ನು ಇತ್ತೀಚಿಗೆ ಅಗಲಿದ ಯುವ ನಾಯಕ, ಮುಕ್ಕಾಟಿರ ಶಿವು ಮಾದಪ್ಪ ಅವರ ನೆನಪಿನಲ್ಲಿ, ಪ್ರಾಯೋಜಿಸಿದ್ದಾರೆ ಎಂದು ಕೊಡವಾಮೇರ ಕೊಂಡಾಟ ಸಂಘಟನೆ ತಿಳಿಸಿದೆ.

ಮುದ್ದಂಡ ಕಪ್ ಹಾಕಿ: 21 ತಂಡಗಳ ಗೆಲುವು



ಚಿಲ್ಲವಂಡ ಮತ್ತು ಮುದ್ದಂಡ ತಂಡಗಳ ನಡುವಿನ ಬಿರುಸಿನ ಆಟ

ಮಡಿಕೇರಿ,ಏ.2–ನಗರದಲ್ಲಿ ಆಯೋಜಿತ ಮುದ್ದಂಡ ಕಪ್ ಹಾಕಿ ನಮ್ಮೆಯ ಇಂದು ನಡೆದ ಪಂದ್ಯಾವಳಿಯಲ್ಲಿ ಪಟ್ಟಮಾಡ, ಮುದ್ದಿಯಡ, ಬೊಳೆಯಾಡಿರ, ಕೊಂಡಿರ, ಕುಟ್ಟಂಡ (ಕಾರ್ಮಾಡ್), ಚಿಲ್ಲವಂಡ, ಕಂಜಿತಂಡ, ಮೇವಡ, ನಾಪನೆರವಂಡ, ಕೋಣಿಯಂಡ, ಮಲ್ಲಂಡ, ಪಾಂಡಿರ, ಮಾಳೆಯಂಡ, ಮುಂಡಚಾಡಿರ, ಚೆಂಬಂಡ, ಬೊಟ್ಟಂಗಡ, ಚಿಂಡಮಾಡ, ಅರಮಣಮಾಡ, ತೇಲಪಂಡ, ಕುಂಡ್ರಂಡ, ಮಳವಂಡ ತಂಡಗಳು ಗೆಲುವು ಸಾಧಿಸಿ ಮುಂದಿನ ಹಂತ ಪ್ರವೇಶಿಸಿವೆ.

ಇಂದಿನ ಪಂದ್ಯಾವಳಿ

ಮೈದಾನ–1: ಬೆಳಿಗ್ಗೆ 9 ಗಂಟೆಗೆ ಕುಂದೀರ–ಪೊನ್ನಿಮಾಡ, 10 ಗಂಟೆಗೆ ಚಟ್ಟಂಗಡ–ಕುಟ್ಟಂಡ (ಅಮ್ಮತಿ), 11 ಗಂಟೆಗೆ ಕನ್ನಂಬೀರ–ಪಾಲೆಂಗಡ, ಮಧ್ಯಾಹ್ನ 12 ಗಂಟೆಗೆ ಕುಟ್ಟೇಟಿರ–ಪುಟ್ಟಿಚಂಡ, 1 ಗಂಟೆಗೆ ಬೈರೇಟಿ–ಪಳೆಯಂಡ(ಹಮ್ಮಿಯಾಲ), 2 ಗಂಟೆಗೆ ಮಂದಂಗಡ–ಐಮಂಡ, 3 ಗಂಟೆಗೆ ಮಂಡೇಡ–ದೇಯಂಡ

ಮೈದಾನ–2: ಬೆಳಿಗ್ಗೆ 9 ಗಂಟೆಗೆ ಬಟ್ಟಕಾಳಂಡ–ಅನ್ನಡಿಯಂಡ, 10 ಗಂಟೆಗೆ ಚೇರಂಡ–ಚೆನ್ನಪಂಡ, 11 ಗಂಟೆಗೆ ನಂದಿನೆರವಂಡ–ಐತಿಚಂಡ, ಮಧ್ಯಾಹ್ನ 12 ಗಂಟೆಗೆ ಮುಂಡಂಡ–ಅಮ್ಮಂಡ, 1 ಗಂಟೆಗೆ ಕಟ್ಟೇರ–ಮಾಳೇಟಿರ (ಕೆದಮುಳ್ಳೂರು), 2 ಗಂಟೆಗೆ ಚೇಂದ್ರಿಮಾಡ –ಸುಳ್ಳಿಮಾಡ, 3 ಗಂಟೆಗೆ ಮಂಡೇಟಿರ–ಚೋಡುಮಾಡ

ಮೈದಾನ–3: ಬೆಳಿಗ್ಗೆ 9 ಗಂಟೆಗೆ ಚೋಕಿರ–ವಳ್ಳಂಡ, 10 ಗಂಟೆಗೆ ಚೊಟ್ಟೆಯಂಡ–ತೆಕ್ಕಡ, 11 ಗಂಟೆಗೆ ಕಾಯಪಂಡ–ಉಪ್ಪಂಗಡ, ಮಧ್ಯಾಹ್ನ 12 ಗಂಟೆಗೆ ಮಾಳೇಟೀರ(ಕುಕ್ಲೂರು)–ಅವರೆಮಾಡಂಡ, 1 ಗಂಟೆಗೆ ಕಾವಡಿಚಂಡ– ಕಾಳಚಂಡ, 2 ಗಂಟೆಗೆ ಮೇಕೇರಿರ–ಕೈಬುಲಿರ, 3 ಗಂಟೆಗೆ ತೊಲಂಡ–ಉಳ್ಳಿಯಡ ತಂಡಗಳ ನಡುವೆ ಪೈಪೋಟಿ ನಡೆಯಲಿದೆ.

ಏ.21 ರಿಂದ ಕಂದಾಯ ನಿಗದಿ ಅಳತೆ ಕಾರ್ಯ

ಮಡಿಕೇರಿ ಏ.2–ತಾಲ್ಲೂಕಿನ ಪಹಣಿಯಲ್ಲಿ ಕಂದಾಯ ನಿಗದಿಯಾಗದ ಜಮೀನುಗಳಿಗೆ ಕಂದಾಯ ನಿಗಧಿಗೊಳಿಸುವ ಸಲುವಾಗಿ ಪ್ರಾಯೋಗಿಕ ಗ್ರಾಮವನ್ನಾಗಿ ಕೊಡಂಬೂರು ಗ್ರಾಮವನ್ನು ಆಯ್ಕೆ ಮಾಡಲಾಗಿದೆ.

ಈ ಪ್ರಕ್ರಿಯೆಯು 2025ರ ಏಪ್ರಿಲ್, 21 ರಿಂದ ಪ್ರಾರಂಭಗೊಂಡು ಜೂನ್, 15 ರವರೆಗೆ ಅಳತೆ ಕಾರ್ಯ ನಿರ್ವಹಿಸಲು ವೇಳಾಪಟ್ಟಿ ನಿಗದಿಪಡಿಸಲಾಗಿದೆ ಎಂದು ಮಡಿಕೇರಿ ಹೋಬಳಿ ಕಸಬಾ ಕಂದಾಯ ಪರಿವೀಕ್ಷಕರು ತಿಳಿಸಿದ್ದಾರೆ.



ಮುಕ್ಕಾಟೀರ ರಘು ಸುಬ್ರಮಣಿ ನಿಧನ

ನಾಪೋಕ್ಲು: ಇಲ್ಲಿಗೆ ಸಮೀಪದ ಬಲ್ಲಮ್ಮವಟ್ಟಿ ಗ್ರಾಮ ಪಂಚಾಯಿತಿಯ ದೊಡ್ಡಪುಲಿಕೋಟು ನಿವಾಸಿ ಮಾಜಿ ಸೈನಿಕ ಮುಕ್ಕಾಟೀರ ರಘು ಸುಬ್ರಮಣಿ 62) ಅನಾರೋಗ್ಯದಿಂದ ನಿಧನರಾದರು.

ಮೃತರು ಪತ್ನಿ ಜಮುನಾ ಹಾಗೂ ಒಂದು ಹೆಣ್ಣು ಮಗಳನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ದೊಡ್ಡಪುಲಿಕೊಟುವಿನಲ್ಲಿರುವ ಮೃತರ ಸ್ವಗೃಹದಲ್ಲಿ ಬುಧವಾರ ನೆರವೇರಿಸಲಾಯಿತು.

ರಸ್ತೆ ಬದಿ ಒಣಗಿದ ಎಲೆಗಳ ರಾಶಿ: ಅರಣ್ಯ ಇಲಾಖೆ ನಿರ್ಲಕ್ಷ್ಯ



ಬಿಆರ್‌ಟಿ ಹುಲಿ ಸಂರಕ್ಷಿತ ಪ್ರದೇಶ ವ್ಯಾಪ್ತಿಯ ರಸ್ತೆ ಬದಿಯಲ್ಲಿ ಬಿದ್ದಿರುವ ಒಣಗಿದ ಎಲೆಗಳ ರಾಶಿ.

ಯಳಂದೂರು, ಏ.2– ಬಿಆರ್‌ಟಿ ಹುಲಿ ಸಂರಕ್ಷಿತ ಪ್ರದೇಶ ವ್ಯಾಪ್ತಿಯ ರಸ್ತೆ ಬದಿಯಲ್ಲಿ ಬಿದ್ದಿರುವ ಒಣಗಿದ ಎಲೆಗಳ ರಾಶಿಯನ್ನು ತೆರವುಗೊಳಿಸದೇ ನಿರ್ಲಕ್ಷ್ಯ ಮಾಡಿರುವ ಪರಿಣಾಮ ಅರಣ್ಯಕ್ಕೆ ಕಾಡ್ಗಿಚ್ಚಿನ ಭೀತಿ ಎದುರಾಗಿದೆ. ಈಗಾಗಲೇ ಬೇಸಿಗೆ ಪ್ರಾರಂಭವಾಗಿದ್ದು ಅರಣ್ಯದಲ್ಲಿ ಸಂಭವಿಸುವ ಕಾಡ್ಗಿಚ್ಚನ್ನು ತಪ್ಪಿಸುವ ನಿಟ್ಟಿನಲ್ಲಿ ಜನವರಿಯಲ್ಲಿಯೇ ಅರಣ್ಯದ ಮುಖ್ಯರಸ್ತೆ, ಗೇಮ್ ರಸ್ತೆ ಬದಿಗಳಲ್ಲಿ ಬೆಂಕಿ ರೇಖೆ ನಿರ್ಮಾಣ ಮಾಡುತ್ತದೆ. ಅದರಂತೆ ಬಿಆರ್‌ಟಿ ಅರಣ್ಯದಲ್ಲಿಯೂ ಜನವರಿ ತಿಂಗಳಲ್ಲಿಯೇ ಬೆಂಕಿ ರೇಖೆ ನಿರ್ಮಾಣ ಮಾಡಲಾಗಿದೆ. ಬೇಸಿಗೆ ಆರಂಭವಾಗುತ್ತಿದ್ದಂತೆಯೇ ಎಲೆಗಳು ಉದುರಿ ರಸ್ತೆ ಬದಿಯಲ್ಲಿ ರಾಶಿಗಟ್ಟಲೇ ಬಿದ್ದಿವೆ. ಕಾಡ್ಗಿಚ್ಚು ಸಂಭವಿಸದಂತೆ ಮುಂಜಾಗ್ರತಾ ಕ್ರಮಕೈಗೊಳ್ಳಲು ಮುಂದಾಗುವ ಅರಣ್ಯ ಇಲಾಖೆ ಒಣಗಿದ ಎಲೆಗಳ ರಾಶಿಯನ್ನು ಬೆಂಕಿ ಹಾಕಿ ಸುಡುವುದಾಗಲೀ ಅಥವಾ ತೆರವುಗೊಳಿಸುವುದಾಗಲೀ ಮಾಡದೇ ನಿರ್ಲಕ್ಷ್ಯ ಮಾಡಿದೆ. ಇದರಿಂದಾಗಿ ರಸ್ತೆ ಬದಿಯಲ್ಲಿ ತೆರಳುವವರು ಬೀಡಿ, ಸಿಗರೇಟ್ ಸೇದಿ ಬಿಸಾಡಿದರೆ ಅನಾಹುತ ಸಂಭವಿಸುವುದರಲ್ಲಿ ಯಾವುದೇ ಅನುಮಾನವಿಲ್ಲ.

ರಸ್ತೆ ಬದಿಯಲ್ಲಿ ಎಲೆಗಳ ರಾಶಿ: ಬಿಆರ್‌ಟಿ ಅರಣ್ಯದಲ್ಲಿ ಸಾಮಾನ್ಯವಾಗಿ ಅಗಲ ಎಲೆಯುಳ್ಳ ಅನೇಕ ಮರಗಳು ಇವೆ. ಬೇಸಿಗೆ ಆರಂಭವಾಗುತ್ತಿದ್ದಂತೆ ಎಲೆಗಳು ಉದುರುತ್ತವೆ. ಇದರಿಂದಾಗಿ ಹೊಂಡರಬಾಳು ಚೆಕ್‌ಪೋಸ್ಟ್‌ನಿಂದ ಕೆ.ಗುಡಿ ತನಕ ರಸ್ತೆ ಬದಿಯಲ್ಲಿ ಒಣಗಿದ ಎಲೆಗಳ ರಾಶಿಯೇ ಇದೆ. ಬೆಂಕಿ ರೇಖೆಯನ್ನು ನಿರ್ಮಿಸಿ ಕಾಡ್ಗಿಚ್ಚು ಸಂಭವಿಸದಂತೆ ನೋಡಿಕೊಳ್ಳಲು ವಾಚರ್‌ಗಳು ರಸ್ತೆ ಬದಿಯಲ್ಲಿ ಕಂಡುಬರುವುದಿಲ್ಲ.

ಹೆಚ್ಚು ಪ್ರವಾಸಿಗರ ಭೇಟಿ : ಬಿಆರ್‌ಟಿ ಅರಣ್ಯ ಪ್ರದೇಶ ವ್ಯಾಪ್ತಿಯಲ್ಲಿ ಬಿಳಿಗಿರಿರಂಗನ ಬೆಟ್ಟ ಹಾಗೂ ಕೆ.ಗುಡಿ ಸಫಾರಿ ಕೇಂದ್ರಗಳಿವೆ. ಇಲ್ಲಿಗೆ ದಿನನಿತ್ಯ ಹಾಗೂ ವಾರಾಂತ್ಯದಲ್ಲಿ ಸಾವಿರಾರು ಪ್ರವಾಸಿಗರು ಭೇಟಿ ನೀಡುತ್ತಾರೆ. ಹೊಂಡರಬಾಳು ಹಾಗೂ ಗುಂಬಳ್ಳಿ ಚೆಕ್‌ಪೋಸ್ಟ್ ಮೂಲಕ ವಾಹನಗಳಲ್ಲಿ ತೆರಳುತ್ತಾರೆ. ಈ ವೇಳೆ ಬೀಡಿ, ಸಿಗರೇಟ್ ಸೇದುವವರು ರಸ್ತೆ ಬದಿಯಲ್ಲಿ ಬೀಸಾಡಿದರು ಒಣಗಿದ ಎಲೆಗಳ ಮೂಲಕ ಬೆಂಕಿ ಹೊತ್ತುಕೊಳ್ಳುವ ಸಂಭವ ಕೂಡ ಇದೆ. ಆದ್ದರಿಂದ ಸಂಬಂಧಪಟ್ಟವರು ಇನ್ನಾದರೂ ರಸ್ತೆ ಬದಿ ಬಿದ್ದಿರುವ ಒಣಗಿದ ಎಲೆಗಳ ರಾಶಿಯನ್ನು ತೆರವುಗೊಳಿಸಲು ಕ್ರಮವಹಿಸಬೇಕಿದೆ.

ಬಿಆರ್‌ಟಿ ಅರಣ್ಯ ಪ್ರದೇಶ ವ್ಯಾಪ್ತಿಯಲ್ಲಿ ಜನವರಿಯಿಂದ ಫೆಬ್ರವರಿ ಮಧ್ಯದ ತನಕ ಬೆಂಕಿ ರೇಖೆ ನಿರ್ಮಾಣ ಮಾಡಲಾಗಿದೆ. ಈಗ ಬೆಂಕಿ ರೇಖೆ ಮಾಡುವುದಿಲ್ಲ. ರಸ್ತೆ ಬದಿ ಉದುರಿರುವ ಎಲೆಗಳನ್ನು ತೆರವುಗೊಳಿಸುವ ನಿಟ್ಟಿನಲ್ಲಿ ಕ್ರಮವಹಿಸಲಾಗುವುದು ಎಂದು ಬಿಆರ್‌ಟಿ ಹುಲಿ ಯೋಜನೆ ನಿರ್ದೇಶಕ ಶ್ರೀಪತಿ ಆಶ್ವಾಸನೆ ನೀಡಿದ್ದಾರೆ.

ವಿದ್ಯುತ್ ಅವಘಡ; ಹಾರ್ಡ್‌ವೇರ್ ಅಂಗಡಿಗೆ ಬೆಂಕಿ



ಹಾರ್ಡ್‌ವೇರ್ ಹಾಗೂ ಫರ್ನಿಚರ್ ಅಂಗಡಿಗೆ ವಿದ್ಯುತ್ ಅವಘಡದಿಂದ ಹಾನಿಯಾದ ಹಿನ್ನೆಲೆ ಶಾಸಕ ಸಿ.ಪುಟ್ಟರಂಗಶೆಟ್ಟಿ ಭೇಟಿನೀಡಿ ಪರಿಶೀಲಿಸಿದರು.

ಚಾಮರಾಜನಗರ. ಏ.2– ನಗರದ ಗುಂಡ್ಲುಪೇಟೆ ರಸ್ತೆಯಲ್ಲಿನ ಅಹಮದ್ ನಗರದ ಹಾರ್ಡ್‌ವೇರ್ ಹಾಗೂ ಫರ್ನಿಚರ್ ಅಂಗಡಿಗೆ ಬೆಂಕಿ ತಗುಲಿ ಲಕ್ಷಾಂತರ ರೂ. ಮೌಲ್ಯದ ವಸ್ತು ಸುಟ್ಟು ಹೋಗಿವೆ. ಅಗ್ನಿಶಾಮಕದಳದ ಸಿಬ್ಬಂದಿ ಸಕಾಲಕ್ಕೆ ಆಗಮಿಸಿ ಬೆಂಕಿಯನ್ನು ನಂದಿಸಿದ್ದಾರೆ.

ಇದೇ ವೇಳೆ ಶಾಸಕ ಸಿ.ಪುಟ್ಟರಂಗಶೆಟ್ಟಿ ಶನಿವಾರ ಅಂಗಡಿಗೆ ಭೇಟಿನೀಡಿ, ಅಂಗಡಿ ಮಾಲೀಕರಿಗೆ ವೈಯಕ್ತಿಕ ಪರಿಹಾರ ವಿತರಿಸಿದರು. ಈ ಸಂದರ್ಭದಲ್ಲಿ ಚುಡಾ ಅಧ್ಯಕ್ಷ ಮಹಮದ್ ಅಸ್ಗರ್, ಮಾಜಿ ಅಧ್ಯಕ್ಷರಾದ ಸಯ್ಯದ್‌ರಫಿ, ಸುಹೇಲ್ ಅಲಿಖಾನ್, ಮುಖಂಡರಾದ ಆಯುಬ್ ಖಾನ್, ನಯಾಜ್ ಪಾಷಾ, ನಗರಸಭೆ ಮಾಜಿಸದಸ್ಯ ಅತೀಕ್ ಅಹಮದ್, ಮುಸಾಯದ್, ಪರ್ವೇಜ್ ಹಾಜರಿದ್ದರು.

ಹಾಲಿನ ಬೆಲೆ ಹೆಚ್ಚಳ–ಬಿಜೆಪಿ ಅನಗತ್ಯ ಪ್ರಚಾರ: ಕೆ.ವೆಂಕಟೇಶ್



ಗುಂಡ್ಲುಪೇಟೆ ಪಟ್ಟಣದಲ್ಲಿ ಆಯೋಜಿಸಿದ್ದ ಕಾಂಗ್ರೆಸ್ ಕಾರ್ಯಕರ್ತರ ಸಭೆಯಲ್ಲಿ ಸಚಿವ ಕೆ.ವೆಂಕಟೇಶ್, ಶಾಸಕ ಹೆಚ್.ಎಂ.ಗಣೇಶ್ ಪ್ರಸಾದ್, ಡಾ.ತಿಮ್ಮಯ್ಯ, ಮರಿಸ್ವಾಮಿ ಇದ್ದರು.

ಗುಂಡ್ಲುಪೇಟೆ,ಏ.2– ಹಾಲಿನ ಉತ್ಪಾದಕರಿಗೆ ಅನುಕೂಲ ಮಾಡಿಕೊಡುವ ಸಲುವಾಗಿ ಬೆಲೆ ಹೆಚ್ಚಿಸಲಾಗಿದ್ದು ಇದು ನೇರವಾಗಿ ಉತ್ಪಾದಕರಿಗೆ ತಲುಪಲಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಕೆ.ವೆಂಕಟೇಶ್ ಹೇಳಿದರು.

ಪಟ್ಟಣದ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ಆಯೋಜಿಸಿದ್ದ ಕಾಂಗ್ರೆಸ್ ಕಾರ್ಯಕರ್ತರ ಸಭೆಯನ್ನು ಉದ್ಘಾಟಿಸಿ ಹಾಲಿನ ಉತ್ಪಾದನಾ ವೆಚ್ಚದ ಹೆಚ್ಚಳದಿಂದ ಉತ್ಪಾದಕರಿಗೆ ಅನುಕೂಲ ಮಾಡಿಕೊಡುವ ಸಲುವಾಗಿ ಬೆಲೆ ಹೆಚ್ಚಿಸಲಾಗಿದ್ದರೂ ಬಿಜೆಪಿ ಅನಗತ್ಯವಾಗಿ ಅಪಪ್ರಚಾರ ಮಾಡುತ್ತಿದೆ ಎಂದು ಆರೋಪಿಸಿದರು.

ಇದೇ ತಿಂಗಳ 24 ರಂದು ಜಿಲ್ಲೆಯ ಮಲೆ ಮಹದೇಶ್ವರ ಬೆಟ್ಟದಲ್ಲಿ ಸಚಿವ ಸಂಪುಟ ಸಭೆ ನಡೆಯಲಿದ್ದು, ಅಂದು ವಿಶೇಷವಾಗಿ ಜಿಲ್ಲೆಯ ಅಭಿವೃದ್ಧಿ ಕೆಲಸಗಳಿಗೆ ಸೇರಿದಂತೆ ವಿಶೇಷ ಯೋಜನೆಗಳನ್ನು ತರಲು ಅಂದು ಅನುದಾನ ಬಿಡುಗಡೆ ಮಾಡುವ ನಿರೀಕ್ಷೆ ಇದೆ ಎಂದು ಹೇಳಿದರು.

ಅಧ್ಯಕ್ಷತೆಯನ್ನು ವಹಿಸಿದ್ದ ಕ್ಷೇತ್ರದ ಶಾಸಕ ಹೆಚ್.ಎಂ.ಗಣೇಶ್ ಪ್ರಸಾದ್ ಮಾತನಾಡಿ, ಹಿಂದಿನ ಶಾಸಕರು ಯಡಿಯೂರಪ್ಪನವರ ಆಪ್ತರಾಗಿದ್ದರೂ ತಮ್ಮ ಅವಧಿಯಲ್ಲಿ ಕ್ಷೇತ್ರದ ಕೆಲಸಗಳನ್ನು ಮಾಡಲಾಗದೆ ಕೈ ಚೆಲ್ಲಿದರು, ಆದರೆ ನಾನು ಶಾಸಕನಾದ ಕೆಲವೇ ತಿಂಗಳಲ್ಲಿ ನೆನೆಗುದ್ದಿಗೆ ಬಿದ್ದಿದಂತಹ ಬೊಮ್ಮನಹಳ್ಳಿ ಅಂಬೇಡ್ಕರ್ ವಸತಿ ಶಾಲೆ, ಬೇಗೂರು ಹತ್ತಿ ಮಾರುಕಟ್ಟೆ, ಗರಗನಹಳ್ಳಿ ಮುರಾರ್ಜಿ ವಸತಿ ಶಾಲೆ ಮುಂತಾದ ಅನೇಕ ಉತ್ತಮ ಯೋಜನೆಗಳನ್ನು ಜಾರಿಗೊಳಿಸಿದ್ದಾಗಿ ಹೇಳಿಕೊಂಡರು.

ವಿಧಾನಪರಿಷತ್ ಸದಸ್ಯ ಡಾ.ತಿಮ್ಮಯ್ಯ, ಚಾಮುಲ್ ನಿರ್ದೇಶಕ ಹೆಚ್.ಎಸ್.ನಂಜುಂಡ ಪ್ರಸಾದ್, ಕಾಡಾ ಅಧ್ಯಕ್ಷ ಮರಿಸ್ವಾಮಿ, ಮಾಜಿ ಅಧ್ಯಕ್ಷ ಹೆಚ್.ಎಸ್.ನಂಜಪ್ಪ, ಪುರಸಭೆ ಅಧ್ಯಕ್ಷ ಜಿ.ಎಸ್.ಮಧುಸೂದನ್, ಉಪಾಧ್ಯಕ್ಷ ಅಣ್ಣಯ್ಯಸ್ವಾಮಿ, ಸದಸ್ಯ ಶಶಿಧರ್, ಮಾಜಿ ಸದಸ್ಯೆ ಲತಾರಾಜಶೇಖರ ಜತ್ತಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಮುನಿರಾಜು, ರಾಜಶೇಖರ್, ಪ್ರಧಾನಕಾರ್ಯದರ್ಶಿ ಬಿ.ಕುಮಾರಸ್ವಾಮಿ, ಜಿಪಂ ಮಾಜಿ ಸದಸ್ಯ ಕೆ.ಎಸ್.ಮಹೇಶ್, ಜಿ.ಕೆ.ಲೋಕೇಶ್ ಸೇರಿದಂತೆ ಹಲವರು ಇದ್ದರು.

ಸೋಮಹಳ್ಳಿ ಡೇರಿ ಕಾಂಗ್ರೆಸ್ ತೆಕ್ಕೆಗೆ; ಬಿಜೆಪಿಗೆ ಮುಖಭಂಗ

ಬೇಗೂರು,ಏ.2– ಸಮೀಪದ ಸೋಮಹಳ್ಳಿ ಗ್ರಾಮದ ಹಾಲು ಉತ್ಪಾದಕರ ಸಹಕಾರ ಸಂಘದ ಚುನಾವಣೆಯಲ್ಲಿ ಕಾಂಗ್ರೆಸ್ ಜಯಭೇರಿ ಭಾರಿಸಿದ್ದು, ಬಿಜೆಪಿ ತೀವ್ರ ಮುಖಭಂಗ ಅನುಭವಿಸಿದೆ.

ಸಂಘದ ಕಚೇರಿಯಲ್ಲಿ ನಡೆದ ಚುನಾವಣೆಯಲ್ಲಿ 12 ಕ್ಷೇತ್ರಗಳಲ್ಲಿ ಮೂರು ಕ್ಷೇತ್ರಗಳಲ್ಲಿ ಕಾಂಗ್ರೆಸ್ ಬೆಂಬಲಿತರಾದ ರತ್ನಮ್ಮ, ಮಂಗಳಮ್ಮ, ಸಿದ್ದಶೆಟ್ಟಿ, ಕೃಷ್ಣನಾಯಕ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಇನ್ನುಳಿದ 7 ಕ್ಷೇತ್ರಗಳಲ್ಲಿ ನಡೆದ ಚುನಾವಣೆಯಲ್ಲಿ ಎಸ್.ಜಿ.ಆನಂದಮೂರ್ತಿ, ನಾಗಪ್ಪ, ಎಸ್.ನಾಗರಾಜು, ಬಸವಣ್ಣ, ಮಹದೇವಪ್ಪ, ಎಸ್.ಮಹದೇವಪ್ಪ, ವಿ.ರವಿಕುಮಾರ ಭರ್ಜರಿ ಗೆಲುವು ಸಾಧಿಸಿದ್ದಾರೆ.

ಸೋಮಹಳ್ಳಿ ಹಾಲು ಉತ್ಪಾದಕರ ಸಹಕಾರ ಸಂಘದ ಚುನಾವಣೆಯಲ್ಲಿ ಆಯ್ಕೆಯಾದ ನೂತನ ನಿರ್ದೇಶಕರನ್ನು ಜಿಲ್ಲಾ ಸಹಕಾರ ಒಕ್ಕೂಟದ ಅಧ್ಯಕ್ಷರೂ ಆದ ಚಾಮುಲ್ ನಿರ್ದೇಶಕ ಎಚ್.ಎಸ್. ನಂಜುಂಡಪ್ರಸಾದ್ ಅಭಿನಂದಿಸಿದರು.

ನೂತನ ನಿರ್ದೇಶಕರ ಆಯ್ಕೆಯನ್ನು ಚುನಾವಣಾಧಿಕಾರಿ ಪದ್ಮನಾಭ ಘೋಷಿಸುತ್ತಿದ್ದಂತೆಯೇ ಕಾಂಗ್ರೆಸ್ ಪಕ್ಷದ ಕಾರ್ಯಕರ್ತರು ಪಟಾಕಿ ಸಿಡಿಸಿ ಸಂಭ್ರಮಿಸಿ ಕಾಂಗ್ರೆಸ್ ಜೈಕಾರ ಹಾಕಿದರು.

ಬಿಜೆಪಿಗೆ ಮುಖಭಂಗ: ಸಂಘದ ಚುನಾವಣೆಯಲ್ಲಿ ಬಿಜೆಪಿ ಬೆಂಬಲಿಗರು ಸ್ಪರ್ಧಿಸಿದ್ದ 7 ಕ್ಷೇತ್ರಗಳಲ್ಲಿಯೂ ಸೋಲು ಕಾಣುವ ಮೂಲಕ ಬಿಜೆಪಿ ತೀವ್ರ ಮುಖಭಂಗ ಅನುಭವಿಸಿದೆ. ಇತ್ತೀಚೆಗೆ ನಡೆದ ಸೋಮಹಳ್ಳಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಚುನಾವಣೆಯಲ್ಲೂ ಕಾಂಗ್ರೆಸ್ ಜಯಬೇರಿ ಭಾರಿಸಿತ್ತು.

ಕೆಪಿಸಿಸಿ ಮಾಜಿ ಕಾರ್ಯದರ್ಶಿ ಎಸ್.ಶಿವನಾಗಪ್ಪ ತಾಪಂ ಮಾಜಿ ಅಧ್ಯಕ್ಷ ಎಸ್.ಎಸ್. ಮಧುಶಂಕರ್, ಹಾಪ್ ಕಾಮ್ಸ್ ಮಾಜಿ ಅಧ್ಯಕ್ಷ ಎಸ್.ಎಂ.ಸದಾಶಿವಪ್ಪ, ಗೌಡಿಕೆ ಸದಾನಂದಮೂರ್ತಿ, ಸಂಘದ ಮಾಜಿ ಅಧ್ಯಕ್ಷ ಶಿವಪಾದಪ್ಪ, ಮುಖಂಡರಾದ ಎಚ್‌ಎನ್‌ಎಂ ರವಿ, ಪುಟ್ಟಸ್ವಾಮಿ ನಾಯಕ, ರವಿಕುಮಾರ್ ಇದ್ದರು.

ಎವಿಎಸ್‌ಎಸ್ ವತಿಯಿಂದ ಸಂವಿಧಾನ ಕುರಿತ ಸ್ಪರ್ಧಾತ್ಮಕ ಪರೀಕ್ಷೆ



ಸಂವಿಧಾನದ ಅಣಕು ಪರೀಕ್ಷೆಯ ಪೋಸ್ಟರ್ ಅನ್ನು ಅಧ್ಯಕ್ಷ ತುಂಬಲ ರಾಮಣ್ಣ ಬಿಡುಗಡೆ ಮಾಡಿದರು.

ಕೊಳ್ಳೇಗಾಲ,ಏ.2– ಭಾರತ ಸಂವಿಧಾನದ ಬಗ್ಗೆ ಜಾಗೃತಿಯನ್ನು ಮೂಡಿಸುವ ಸಲುವಾಗಿ ಸಂವಿಧಾನದ ಅಣಕು ಪರೀಕ್ಷೆಯನ್ನು ಇದೇ ಏ.20ರಂದು ಅಂಬೇಡ್ಕರ್ ವಿವಿಧೋದ್ದೇಶ ಸೇವಾ ಸಂಸ್ಥೆ (ಎವಿಎಸ್‌ಎಸ್) ವತಿಯಿಂದ ಅಯೋಜಿಸಲಾಗಿದೆ ಎಂದು ಅಧ್ಯಕ್ಷ ತುಂಬಲ ರಾಮಣ್ಣ ಹೇಳಿದ್ದಾರೆ.

ಪಟ್ಟಣದ ಶಾಖೆಯಲ್ಲಿ ಪೋಸ್ಟರ್ ಬಿಡುಗಡೆಗೊಳಿಸಿ ಮಾತನಾಡಿದ ಅವರು, ಪರೀಕ್ಷೆಯು ಕನ್ನಡ ಮಾಧ್ಯಮದಲ್ಲಿನ ನೂರು ಪ್ರಶ್ನೆಗಳನ್ನು ಒಳಗೊಂಡಿದ್ದು ಕೆಪಿಎಸ್ಸಿ, ಕೆಇಎ,ಕೆ ನಡೆಸುವ ಪರೀಕ್ಷೆಯಂತೆಯೇ ಬಹು ಆಯ್ಕೆಯ ಮಾದರಿಯದ್ದಾಗಿರುತ್ತದೆ,

ಈ ಪರೀಕ್ಷೆಯು ನಕರಾತ್ಮಕ ಮೌಲ್ಯಮಾಪನವನ್ನು ಒಳಗೊಂಡಿದ್ದು, ಪರೀಕ್ಷಾ ಅವಧಿಯು 90 ನಿಮಿಷಗಳನ್ನು ಒಳಗೊಂಡಿರುತ್ತದೆ. ಕೀ ಉತ್ತರದಲ್ಲಿ ಯಾವುದೇ ಆಕ್ಷೇಪಣೆಗಳು ಇದ್ದಲ್ಲಿ ಸ್ಪರ್ಧಾಳುಗಳು ಒಂದು ದಿನದ ಒಳಗಡೆ ಸಲ್ಲಿಸಬೇಕು. ಪರೀಕ್ಷೆಯಲ್ಲಿ ಮೊದಲ ಮೂರು ಸ್ಥಾನಗಳನ್ನು ಗಳಿಸುವ ಸ್ಪರ್ಧಾಳುಗಳಿಗೆ ಕ್ರಮವಾಗಿ 10 ಸಾವಿರ, 7 ಮತ್ತು 5 ಸಾವಿರ ನಗದು ಪುರಸ್ಕಾರ ನೀಡಲಾಗುವುದು ಉಳಿದಂತೆ ಉತ್ತಮ 10 ಮಂದಿಗೂ ನಗದು ಪುರಸ್ಕಾರ ಅಲ್ಲದೆ ಪರೀಕ್ಷೆಯಲ್ಲಿ ಪಾಲ್ಗೊಂಡವರಿಗೂ ಸಹಾ ಪ್ರಶಂಸಾ ಪತ್ರ ನೀಡಿ ಗೌರವಿಸಲಾಗುವುದು 18ರಿಂದ 40 ವರ್ಷದೊಳಗಿನ ಎಲ್ಲಾ ಜನಾಂಗಗಳ ಸ್ಪರ್ಧಾಳುಗಳು ಪರೀಕ್ಷೆಯಲ್ಲಿ ಭಾಗವಹಿಸಬಹುದು.

ಸಮಿತಿ ಸದಸ್ಯರಾದ ಮುಳ್ಳೂರು ಶಿವಮಲ್ಲು, ಶಂಕರ್, ಶಂಕನಪುರ ಮಹಾದೇವ, ಡಾ. ಶ್ರೀಧರ್, ಉದಯ್ ಶಂಕರ್, ಆನಂದರಾಜು, ಚಿಕ್ಕರಾಜು, ಜೋಸೆಫ್, ರಾಜೇಂದ್ರ ಸಾಮ್ರಾಟ್, ಶೇಷಗಿರಿ, ಸುನೀಲ್, ಶಂಕರ್, ಪ್ರೀತಮ್ ಇನ್ನಿತರಿದ್ದರು.

ಕಸಾಪದಿಂದ ಡಾ.ಶಿವಕುಮಾರಸ್ವಾಮಿ ಜಯಂತಿ ಆಚರಣೆ



ಡಾ.ಶಿವಕುಮಾರ ಸ್ವಾಮಿಯವರ ಜಯಂತಿಯನ್ನು ತಾಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ವತಿಯಿಂದ ಆಚರಿಸಲಾಯಿತು.

ಚಾಮರಾಜನಗರ,ಏ.2– ಸಂತ ಸಿದ್ದಗಂಗಾ ಮಠದ ಶ್ರೀ ಶಿವಕುಮಾರ ಸ್ವಾಮಿಯವರ ಜಯಂತಿ ಹಾಗೂ ದಾಸೋಹ ದಿನವನ್ನು ತಾಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ವತಿಯಿಂದ ಆಚರಿಸಲಾಯಿತು.

ಶಿವಕುಮಾರ ಸ್ವಾಮಿಯವರು ತಮ್ಮ ಇಡೀ ಜೀವನವನ್ನು ಅಭಿವೃದ್ಧಿ, ಶಿಕ್ಷಣ, ದಾಸೋಹ, ವಸತಿಗಾಗಿ ಮೀಸಲಿಟ್ಟು ಲಕ್ಷಾಂತರ ವಿದ್ಯಾರ್ಥಿಗಳ ಸಮಗ್ರ ವಿಕಾಸಕ್ಕೆ ಅಡಿಪಾಯ ಹಾಕಿ ಧರ್ಮದ ನೆಲೆಗಟ್ಟಿನಲ್ಲಿ ಶ್ರೇಷ್ಠ ಬದುಕನ್ನು ನಡೆಸಿದವರೆಂದು ತಾಲೂಕು ಪಂಚಾಯಿತಿ ಮಾಜಿ ಅಧ್ಯಕ್ಷ ಬಿ ಕೆ ರವಿಕುಮಾರ್ ತಿಳಿಸಿದರು.

ಶಿವಕುಮಾರ ಸ್ವಾಮಿಯವರ ಜೀವನ ಸೇವೆಯನ್ನು ಸ್ಮರಿಸುವ ಮೂಲಕ ಮಾನವನ ಆತ್ಮ ಕಲ್ಯಾಣವನ್ನು ಮಾಡುತ್ತಿರುವುದು ಹೆಮ್ಮೆಯ ವಿಷಯ ಎಂದು ಪರಿಷತ್ತಿನ ಮಾಜಿ ಜಿಲ್ಲಾ ಅಧ್ಯಕ್ಷ ಎಎಂ ನಾಗಮಲ್ಲಪ್ಪ ಹೇಳಿದರು.

ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಜಿಲ್ಲಾ ಉಪಾಧ್ಯಕ್ಷರಾದ ಯೋಗಾ ಪ್ರಕಾಶ್ ಮಾತನಾಡಿ ಶಿವಕುಮಾರ ಸ್ವಾಮಿಯವರು ಓರ್ವ ಸಂತ ರಾಗಿ ಮಹಾತ್ಮರಾಗಿ ಲಕ್ಷಾಂತರ ವಿದ್ಯಾರ್ಥಿಗಳಿಗೆ ಶಿಕ್ಷಣ, ದಾಸೋಹ ವಸತಿ ನೀಡಿ ಧರ್ಮ, ಶಿಸ್ತು ಪ್ರೀತಿ, ವಿಶ್ವಾಸ ಸಹಕಾರ ಗುಣಗಳನ್ನು ಪ್ರೋತ್ಸಾಹಿಸಿದ ಮಹಾನ್ ವ್ಯಕ್ತಿ ಎಂದು ಸ್ಮರಿಸಿದರೆ, ಪದ್ಮಾಕ್ಷಿ ಸ್ವ ರಚಿತ ಕವನವನ್ನು ಓದಿ ಸ್ವಾಮೀಜಿಯವರ ಇತಿಹಾಸವನ್ನು ಮೆಲುಕು ಹಾಕಿದರು.

ಸಭೆಯ ಅಧ್ಯಕ್ಷತೆ ವಹಿಸಿದ್ದ ಪರಿಷತ್ತಿನ ತಾಲೂಕು ಅಧ್ಯಕ್ಷ ಸುರೇಶ್ ಎನ್.ಋಗ್ವೇದಿ ಮಾತನಾಡಿ ಭಾರತೀಯ ಸನಾತನ ಧರ್ಮದ ಮೂಲತತ್ವವೇ ದಾಸೋಹವಾಗಿದೆ ದಾಸೋಹಕ್ಕೆ ಅರ್ಥ ಶಿವಕುಮಾರ ಸ್ವಾಮಿಯವರು ಎಂದರು. ಕಾರ್ಯಕ್ರಮದಲ್ಲಿ ವಿಶ್ವವಿದ್ಯಾಲಯದ ಪ್ರಾಧ್ಯಾಪಕ ಬಸವಣ್ಣ, ಲಕ್ಷ್ಮಿ ನರಸಿಂಹ, ಕನ್ನಡ ಸಾಹಿತ್ಯ ಪರಿಷತ್ತಿನ ಸರಸ್ವತಿ, ಶಿವಲಿಂಗ ಮೂರ್ತಿ, ಬಿ.ಕೆ ಆರಾಧ್ಯ, ಮಹದೇವಪ್ಪನವರು ಉಪಸ್ಥಿತರಿದ್ದರು.

ಬಳೇಪೇಟೆಯಲ್ಲಿ ಅದ್ದೂರಿ ಮಾರಮ್ಮನ ಕೊಂಡೋತ್ಸವ

ಯಳಂದೂರು: ಪಟ್ಟಣದ ಬಳೇಪೇಟೆಯ ಪರಿಶಿಷ್ಟ ಜನಾಂಗದ ಬಡಾವಣೆಯಲ್ಲಿ ನಾಡಮೇಗಲಮ್ಮ ಹಾಗೂ ಮಾರಮ್ಮನ ಕೊಂಡೋತ್ಸವವು ಅದ್ದೂರಿಯಾಗಿ ನಡೆಯಿತು.

ದೇವಸ್ಥಾನದ ಮುಂಭಾಗ ಹಾಕಲಾಗಿದ್ದ ಸೌದೆಯ ರಾಶಿಗೆ ಬೆಂಕಿ ಸ್ಪರ್ಶಿಸಲಾಯಿತು. ಹೊರವಲಯದಲ್ಲಿರುವ ಜಪದಕಟ್ಟೆಗೆ ದೇವರ ಉತ್ಸವಮೂರ್ತಿಗಳನ್ನು ಪಟ್ಟಣದ ಪ್ರಮುಖ ರಸ್ತೆಗಳಲ್ಲಿ ಸತ್ತಿಗೆ, ಸೂರಪಾಣಿ, ಛತ್ರಿಚಾಮರಗಳೊಂದಿಗೆ ಮೆರವಣಿಗೆ ನಡೆಸಲಾಯಿತು.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ

ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821– 2496522/23

Gurukrupa Handwriting Coaching Centre
Experience True Handwriting
HANDWRITING SUMMER CAMP
6th April to 5th May
*English *Kannada *Hindi
*Breathing Teachique *Interactive Games *Brain GYM *Handwriting analysis
Mysuru Saraswathipuram, Vijayanagar, Agrahara
9164442156

ಬೇಕಾಗಿದ್ದಾರೆ
ಇಲವಾಲದಲ್ಲಿ ಇರುವ ಶಾಲೆಯಲ್ಲಿ ಕೆಲಸ ಮಾಡಲು ನುರಿತ ನರ್ಸರಿ ಹಾಗೂ ಪ್ರಾಥಮಿಕ ತರಗತಿಯ ಶಿಕ್ಷಕಿಯರು, ಕಚೇರಿ ಸಿಬ್ಬಂದಿ, ಡ್ರೈವರ್, ಸೆಕ್ಯೂರಿಟಿ ಕುಟುಂಬ ಬೇಕಾಗಿದೆ. ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ
9148180700 9535332633

WANTED
ELECTRICAL ENGINEERS
BE / DIPLOMA
FRESHERS/ EXPERIENCED
epowerele@gmail.com
www.epowerelectricals.com
9035000016

ಬೇಕಾಗಿದ್ದಾರೆ
ಹೋಟೆಲ್ ಕೆಲಸಕ್ಕೆ ಕುಕ್ ಬೇಕಾಗಿದ್ದಾರೆ.
ತಂದೂರಿ ಹಾಗೂ ಚೈನೀಸ್ ಕುಕ್
ALROUND COOK
6366725494, 9901618261

ಹೊಸ ಮನೆ ಮಾರಾಟಕ್ಕಿದೆ
3 BHK, East Face
MUDA APPROVED
Near St. Joseph School, Yelwala, Huyilalu.
Mob: 8217851695

ಶ್ರೀ ಗೌರೀಶಂಕರ ಟ್ರಾವೆಲ್ಸ್
10-4-25 (6 ದಿನ): ಅಯೋಧ್ಯೆ, ಕಾಶಿ, ಪ್ರಯಾಗ್‌ರಾಜ್, ಗಯಾ.
21-5-25 (6 ದಿನ): ಗುರುವಾಯೂರು, ಮುನ್ನಾರ್, ತ್ರಿವೇಂಡ್ರಂ, ಇತ್ಯಾದಿ.
28-5-25 (6 ದಿನ): ಪಳನಿ, ಮಧುರೈ, ರಾಮೇಶ್ವರ, ಕನ್ಯಾಕುಮಾರಿ.
8-6-25 (12 ದಿನ): ಗಂಗೋತ್ರಿ, ಯಮುನೋತ್ರಿ, ಬದರಿನಾಥ್, ಕೇದಾರ್‌ನಾಥ್, ಹರಿದ್ವಾರ್
(ವಿಮಾನ, ಬಸ್, ಊಟ, ರೂಂ)
Mob: 9620002114

MUDA SITE FOR SALE
ದಟ್ಟಗಳ್ಳಿ ರಿಂಗ್ ರಸ್ತೆಯಿಂದ 500 ಮೀಟರ್ ಪಕ್ಕ
40'×60' ಈಸ್ಟ್ ಫೇಸಿಂಗ್ ಸೈಟ್.
ಬೆಲೆ : 5000/- Per Sqft
Mob: 9886048471

FOR RENT
ಅಗ್ರಹಾರ ಸರ್ಕಲ್ ಹತ್ತಿರ
400 sqft First Floor
ಆಫೀಸ್ ಸ್ಪೇಸ್ For Rent
9986063321

SITE FOR SALE
30X40, 30X50
Ready For Registration
Sri Rampura Ring Road, Mysore
8050345574

MUDA SITE FOR SALE
ಇನ್ಫೋಸಿಸ್ ಪಕ್ಕ "KBL ಸಿಲಿಕಾನ್ ಸಿಟಿ" ಸೈಟುಗಳು ಲಭ್ಯ.
Mob: 9886048471

ESHWAR VIDYALAYA
Survey No;-32/2,Choranahalli, Varuna Hobli, Mysore-570010
ADMISSIONS ARE OPEN FOR THE YEAR 2025-26
Applications are invited from Qualified and Experienced Candidates.
- Social Science cum English B.A / M.A., B.Ed
- Kindergarten academic co-ordinator and teacher
- Kindergarten Teacher

Contact :-+91 8762788533 ,+91 7411070266
Email ID :- principaleshwar@gmail.com

ಕೆಲಸಕ್ಕೆ ಬೇಕಾಗಿದ್ದಾರೆ
* ಗ್ರಾಫಿಕ್ ಡಿಸೈನರ್ -1
ಕೋರಲ್ ಡ್ರಾ + ಫೋಟೊ ಶಾಪ್ (Salary:25000)
* ಕಂಪ್ಯೂಟರ್ ಆಪರೇಟರ್ -1 (ಲೇಡೀಸ್)
* ಹೆಲ್ಪರ್ -1 (ಲೇಡೀಸ್)
8105863950 / 9980429367



Solar Water Heater SALES & SERVICE
BAJAJ FINSERV
SUNZONE SOLAR SYSTEM
VM Double Road, Kuvempunagar, Mysuru
9845175443

House For Sale
20/40 EAST
Ground 2 BHK + 1st floor Room
MUDA with Clear Documents
Own Borewell & Vastu
Police layout 2nd Stage
9380284276

HOUSE FOR SALE
20x30 east facing House for sale 2 individual 2BHK home with fully furnished
Address: Near Ashwini choultry Srirampura 2nd stage, mysuru
9353924515

ಬೇಕಾಗಿದ್ದಾರೆ
ಸೆಕ್ಯೂರಿಟಿ ಗಾರ್ಡ್ಸ್
ಸಂಬಳ: 11,000 ರಿಂದ 13000 (12 ಗಂಟೆಗೆ) ವಯಸ್ಸು : 25 ರಿಂದ 60 ರವರೆಗೆ. ಸ್ಥಳ: ಸಿದ್ಧಾರ್ಥ ಲೇಔಟ್ ಉತ್ತನಹಳ್ಳಿ, ಹೆಬ್ಬಾಳ್, ಬನ್ನಿಮಂಟಪ, ಉದ್ಬೂರು
9741616826 9741513227

ನಿರುದ್ಯೋಗಿಗಳಿಗೊಂದು ಸುವರ್ಣಾವಕಾಶ
ಮನೆಯಲ್ಲೇ ಕುಳಿತು ಟಾರ್ಗೆಟ್ ಇಲ್ಲದೆ ಬರವಣಿಗೆ ಮೂಲಕ 9 ರಿಂದ 30 ಸಾವಿರದವರೆಗೆ ಹಣಗಳಿಸುವ ಸುವರ್ಣಾವಕಾಶ. ಆಸಕ್ತರು ಸಂಪರ್ಕಿಸಿ:
6361056646, 7676844160

ಬೇಕಾಗಿದ್ದಾರೆ
ಹೂಟಗಳ್ಳಿ ಕೈಗಾರಿಕಾ ಪ್ರದೇಶದ ಕಾರ್ಖಾನೆಯಲ್ಲಿ ಕೆಲಸ ನಿರ್ವಹಿಸಲು, 35 ವರ್ಷದೊಳಗಿನ ITI/PUC/ SSLC ತೇರ್ಗಡೆಯಾದ ಹುಡುಗರು ಬೇಕಾಗಿದ್ದಾರೆ. 8 ಗಂಟೆಯ ಹಗಲು ಪಾಳಿ/ವಾರದ ರಜೆ/ESI/EPF/ Bonus ತಿಂಗಳ ವೇತನ 15273ರಿಂದ 16500 ಸಂಪರ್ಕಿಸಿ:
9900481819,9972945905

ಬೋಳು ತಲೆಯ ಸಮಸ್ಯೆಯೇ?

ಕಿಮೊತೆರಪಿ ಚಿಕಿತ್ಸೆಗೆ ಒಳಪಡುತ್ತಿರುವ ರೋಗಿಗಳಿಗೆ ಸ್ವಾಭಾವಿಕ ಬೆಲೆಯಲ್ಲಿ ಹೇರ್ ವಿಗ್‌ಗಳು ದೊರೆಯುತ್ತವೆ.
SMART HAIR FIXING
574, 9th Cross, Anikethana Road, kuvempunagar, Mysuru
MYSURU 9611028523 MANGALORE 9343142258

ಸುವರ್ಣ ಯಾತ್ರ
9 ದಿನಗಳ ನೇಪಾಳ, ಅಯೋಧ್ಯ ಹಾಗೂ ಮುಕ್ತಿನಾಥ ಪ್ರವಾಸ 27/4/2025.
11 ದಿನಗಳ ಶಿಮ್ಲಾ, ಕುಲು ಹಾಗೂ ಮನಾಲಿ ಪ್ರವಾಸ 29/4/2025.
7 ದಿನಗಳ ಅಂಡಮಾನ್ ಹಾಗೂ ನೇಲ್ ಐಲ್ಯಾಂಡ್ ಪ್ರವಾಸ 28/4/2025.
14 ದಿನಗಳ ಚಾರ್‌ಧಾಮ್ ಪ್ರವಾಸ 2/5/2025.
10 ದಿನಗಳ ಅಮರ್‌ನಾಥ್ ಪ್ರವಾಸ 26/6/2025.
6360146483, 9019462508

ಉಚಿತ ತರಬೇತಿ
ಮನೆಯಿಂದಲೇ ಬಟ್ಟಲು ಸಾಂಬ್ರಾಣಿ ಮತ್ತು ಅಣಬೆ ತಯಾರಿಸಿ ನಮಗೆ ಮರಳಿಸಿ ಪ್ರತಿದಿನ 500 ರಿಂದ 800 ರೂ. ವರೆಗೆ ಗಳಿಸಿ.
ತರಬೇತಿಗಾಗಿ:
7406375196, 9880548596

ಬೇಕಾಗಿದ್ದಾರೆ
ವೃದ್ಧರು, ರೋಗಿಗಳನ್ನು ಆರೈಕೆ ಮಾಡಲು, ಯುವಕ/ಯುವತಿಯರು, ಮಹಿಳೆಯರು, ವಿಧವೆಯರು/ವಿಚ್ಛೇದಿತಯರು ಹೋಮ್ ನರ್ಸ್ ಕೆಲಸಕ್ಕೆ ಬೇಕಾಗಿದ್ದಾರೆ. ನಮ್ಮಲ್ಲೇ ಕಡ್ಡಾಯವಾಗಿ ಉಳಿದುಕೊಳ್ಳುವರಿಗೆ ಮಾತ್ರ ಅವಕಾಶ. ಸಂಬಳ 20000 ರಿಂದ 23000ವರೆಗೆ ಉಚಿತ ಊಟ ಮತ್ತು ವಸತಿ ಸೌಲಭ್ಯವಿರುತ್ತದೆ. ಸಂಪರ್ಕಿಸಿ:
9591547239

ಬೇಕಾಗಿದ್ದಾರೆ
ನ್ಯೂ ಶಾರದ ರೆಸಾರ್ಟ್
ಕೆ.ಆರ್.ಎಸ್ ಮೇನ್ ರೋಡ್ ನಿಯರ್ ಪಂಪ್ ಹೌಸ್ ಸರ್ಕಲ್
1) ಹೆಡ್ ಕುಕ್ ಆಲ್ ರೌಂಡರ್
2) ರಿಷಪ್ಷನ್ ಬಾಯ್ ಆರ್ ಗರ್ಲ್
3) ಅಕೌಂಟ್‌ಟೆಂಟ್
ಅನುಭವ ಉಳ್ಳವರಿಗೆ ಮಾತ್ರ ಆದ್ಯತೆ
9880185785

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 6360485921

ಬೇಕಾಗಿದ್ದಾರೆ
ಅಶೋಕ ರಸ್ತೆ, ಗಾಂಧಿ ಚೌಕದ ಬಳಿಯಿರುವ ಹಾರ್ಡ್‌ವೇರ್ ಅಂಗಡಿಗೆ
ರಿಟೇಲ್ ಸ್ಟೋರ್ ಕೀಪರ್
ಕೆಲಸಕ್ಕೆ ವಿವಾಹಿತ ಮಹಿಳೆ ಬೇಕಾಗಿದ್ದಾರೆ. ಇಂಗ್ಲೀಷ್ ಓದಲು ಮತ್ತು ಬರೆಯಲು ಬರಬೇಕು ಪ್ರತ್ಯೇಕ ಶೌಚಾಲಯ ವ್ಯವಸ್ಥೆ ಇದೆ
ಕೆಲಸದ ಸಮಯ: ಬೆಳಗ್ಗೆ 9.30 ರಿಂದ ರಾತ್ರಿ 7.30 ರವರೆಗೆ. ಭಾನುವಾರ ರಜೆ. ಉತ್ತಮ ಸಂಬಳ.
ಸಂಪರ್ಕಿಸಿ: **99015 18513**

SITE FOR SALE
MUDA Approved 30*40
In Bhairava enclave 3km from bogadi ring road. Attached to vijayanagara 4th stage. Just 100 mtrs from bogadi Gaddige main road. Price 4200 per sqft.
87922 35466 / 8884616461

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 7204494854

ಕೇವಲ 2000 ರೂಪಾಯಿಗೆ
ದಪ್ಪನೆಯ Double ಹಾಸಿಗೆ 2 ದಿಂಬು ಸಹ ಒಂದು ಬೆಡ್‌ಶೀಟ್ ಮತ್ತು 2 ದಿಂಬಿನ ಕವರ್ ಮತ್ತು ಒಂದು ಸೂಟ್‌ಕೇಸ್ ರಗ್ಗು ಸೇರಿ.
8884179981

ಬೇಕಾಗಿದ್ದಾರೆ
ಪೆಟ್ರೋಲ್ ಬಂಕಿನಲ್ಲಿ ಕೆಲಸ ಮಾಡಲು ಹಗಲು/ರಾತ್ರಿ ಪಾಳಿಯಲ್ಲಿ ಕೆಲಸ ಮಾಡಲು ಹುಡುಗ/ ಹುಡುಗಿಯರು ಬೇಕಾಗಿದ್ದಾರೆ.
ಸಂಪರ್ಕಿಸಿ:
ವಿಜಯ ಸರ್ವೀಸ್ ಸ್ಟೇಷನ್ ಧನ್ವಂತರಿ ರಸ್ತೆ, ಮೈಸೂರು
9980131139

ಬೇಕಾಗಿದ್ದಾರೆ
ಮೈಸೂರಿನ ಪ್ರಸಿದ್ಧ ಸಸ್ಯಾಹಾರಿ ಹೋಟೆಲ್‌ಗೆ ಅನುಭವವುಳ್ಳ ಸಿಬ್ಬಂದಿಗಳು ಬೇಕಾಗಿದ್ದಾರೆ.
1. ಕ್ಯಾಪ್ಟನ್, 2) ವೇಯಿಟರ್ಸ್, 3) ಕ್ಯಾಶಿಯರ್, 4) ರುಬ್ಬುವವರು (Grainding)
7022287389 9880515109

SITE FOR SALE
30 X 40 East Facing
Site For Sale In KBL Wood Rose
Next to Shantaveri Gopalagowda Nagara
For more Details Call
98800 65122 / 76193 99919

PRAKRUTHI PROPERTIES
FOR SALE
40x60 Commercial Site @ Ramakrishna Ngr& Srirampura
30x45 Commercial Property @ Jayanagar
20x30,25x35 House @Giridharshni lyt, Srirampura
40x60 Shardha Lyt (JP Nagar)
30x40, 40x60 Duplex House Near Hari Vidyalaya Bogadi
Sites also available Near RT Nagar, Bogadi in & around Mysore
95386 90359, 90359 90359

ಆಲ್ಟ್ರೇಷನ್ ಕೆಲಸ ಮಾಡಿಕೊಡಲಾಗುತ್ತದೆ
ಹಳೇ ಮನೆ ಕೆಲಸ ಮತ್ತು ಬಣ್ಣದ ಕೆಲಸ, ಗಾರೆ ರಿಪೇರಿ ಮತ್ತು ತಾರಸಿ ಸೋರುವಿಕೆ ಸರಿಪಡಿಸಿಕೊಡಲಾಗುತ್ತದೆ.
Mob: 6360884930

ಶ್ರೀ ಸಂಜೀವಿನಿ ಗೋಲ್ಡ್ ಕಂಪನಿ
ನೀವು ಗಿರವಿ ಇಟ್ಟ ಚಿನ್ನವನ್ನು ಬಿಡಿಸಿ ಉಳಿದ ಹಣವನ್ನು ತಕ್ಷಣ ನಿಮ್ಮ ಸ್ಥಳದಲ್ಲೇ ನೀಡುತ್ತೇವೆ.
ಒಂದು ಗ್ರಾಂ ಚಿನ್ನಕ್ಕೆ Rs. 7,900 (24 CT)
Mob: 9108146123

STAFF REQUIRED
MALE / FEMALE
Education: SSLC / PUC / Degree with good computer knowledge. Full time job.
VIDYASAGAR STATIONARY
Vijayanagar 2nd Stage, Mysuru-17
Landmark: Near Podar School.
Mob: 9740246040

COMMERCIAL SPACE FOR RENT
BASEMENT - 2600SQFT
GROUND FLOOR - 2350SQFT
FIRST FLOOR - 2950 SQFT
SECOND FLOOR - 2950 SQFT
ROOFTOP -2950 SQFT
9449254477 9141446761
Address: KHB 80ft Road, Hootagalli, Mysore

Wanted Teachers
JNANAJYOTHI VIDYALAYA. HIGH SCHOOL. (English medium). Beerihundi. Wanted teachers for Mathematics, Science, Hindi, Social science. P.E.T. office worker immediately
9845390377 8197057626

ಬೇಕಾಗಿದ್ದಾರೆ
ಮಂಗಳೂರಿನ ಪ್ರತಿಷ್ಠಿತ ಸೆಕ್ಯೂರಿಟಿ ಸಂಸ್ಥೆಗೆ ಅನುಭವಿ ಸೆಕ್ಯೂರಿಟಿಗಾರ್ಡ್ಸ್ ಬೇಕಾಗಿದ್ದಾರೆ. ವಸತಿ ವ್ಯವಸ್ಥೆ ಕಲ್ಪಿಸಿ ಕೊಡಲಾಗುವುದು.
ಸಂಪರ್ಕಿಸಿರಿ:
96067 21223 80505 22890

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್ ಸೋಲಾರ್ ಸರ್ವೀಸ್
8197383645, 9008711654

SBIT TRAVELS
Group Tours
Dubai -4N5D
April 20, 22, 24, 26 | May 3, 5, 8, 22
Vietnam- 5N6D
April 10, 23, 27 | May 2, 9, 16
99015 24127
(Saraswathipuram, Mysuru)

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

JOBNET
ಮೊಬೈಲ್‌ನಲ್ಲಿ ಕೆಲಸ
ಮನೆಯಲ್ಲೇ ಕುಳಿತು ಮೊಬೈಲ್ ಮೂಲಕ ಫಾರಂ ಫಿಲ್ಲಿಂಗ್ ಮಾಡಿ ಪ್ರತಿ ತಿಂಗಳಿಗೆ 10,000 ದಿಂದ 20,000 ಸಂಪಾದಿಸಿ.
Mob: 9731891409

ಬೇಕಾಗಿದ್ದಾರೆ
ವಿಜಯನಗರ 2nd / 4th Stage ಮತ್ತು ವರುಣಾ ಗ್ರಾಮದ ಬಳಿಯ ಪ್ರಸಿದ್ಧ ರೆಸಾರ್ಟ್‌ಗೆ ಸೆಕ್ಯೂರಿಟಿ ಗಾರ್ಡ್‌ಗಳು
ಉಚಿತ ವಸತಿ/ಊಟ/ESI/PF
9242406261 9686422400

ಕೆಲಸಕ್ಕೆ ಬೇಕಾಗಿದ್ದಾರೆ
ಮೈಸೂರು ಮೇಟಗಳ್ಳಿ ಇಂಡಸ್ಟ್ರಿಯಲ್ ಏರಿಯಾದದಲ್ಲಿರುವ ಅನಿಮಲ್ ಫೀಡ್ ಕಂಪನಿಗೆ 18 ರಿಂದ 50 ವರ್ಷದ ಒಳಗಿನ ಪುರುಷರು ಲೋಡಿಂಗ್ ಅನ್ ಲೋಡಿಂಗ್ ಕೆಲಸಕ್ಕೆ ಬೇಕಾಗಿದ್ದಾರೆ.
ಸಂಬಳ : 20,000/–
ಸಂಪರ್ಕಿಸಿ: (ಲೋಕೇಶ್ ಎಸ್.)
8722844236

SITE FOR SALE
N/E Corner 60x70
Suvarna Nagara, Bogadi Road.
Mob: 8050821108

SITE FOR SALE
Prime location. KUBERANANDA SAGARA
45x60 S/F
Mob: 8050821108

SITE FOR SALE
(30x40) "Olive Enclave" (Near Manuganahally), Mys-Hunsur Highway, 8 km from Ring Road. DTCP Approved. 15 Lakhs.
Mob: 95388-39926

WANTED
A PU female office staff @ Saraswathipuram Double Road.
Mob: 93421-25252

HOUSE FOR SALE
30x40 North face
Ground + First Floor (8 years old). 30,000 rent yield per month. Vijayangar 4th Stage, 2nd face. Price: 2.1 crore.
BROKERS EXCUSE.
Mob: 9972399939

ಉದ್ಯೋಗವಕಾಶ
ಯುವತಿಯರು ಮತ್ತು ಮಹಿಳೆಯರು ಬೇಕಾಗಿದ್ದಾರೆ. ನಮ್ಮಲ್ಲೇ ಉಳಿದುಕೊಂಡು ಕೆಲಸ ಮಾಡುವುದು (ಉಚಿತ ಊಟ, ವಸತಿ) ಮತ್ತು Day/Night Shift
ಸೌಲಭ್ಯಗಳು: ESI, PF and Attendance Bonus.
9606514441 08214242351

ತಕ್ಷಣ ಬೇಕಾಗಿದ್ದಾರೆ
ನಮ್ಮ ಹೆಲ್ತ್‌ಕೇರ್ ಸಂಸ್ಥೆಗೆ ಮಹಿಳೆಯರು ಹಾಗೂ ಪುರುಷರು ಕೆಲಸಕ್ಕೆ ಬೇಕಾಗಿದ್ದಾರೆ.
ಸಂಬಳ: 15000/- to 23000/-
ಮೊದಲು ಬಂದವರಿಗೆ ಆದ್ಯತೆ
9964124199

SITE FOR SALE
Anandasagar Layout
40x60 South face.
40 feet road. Excellent location.
BROKERS EXCUSE
Mob: 9972399939

WANTED
Office assistant - 1 post
Typist [Kannada & English] - 1 post
Bhogadi Mysore
7975269652 | 8073300783

SKANDA Manpower Services
Our Services Includes :
1) Security Guards 4) Home Nurse
2) Security Supervisor 5) Kids Care
3) House Keeping 6) Staffing
Ph:9379888558

SITE FOR SALE
30*40 site is available for sale in J CUBE PALACIA and GATEWAY MYSORE layout.Opposite to Manipal hospital.Attached to Mysore ring road. Price 5500 per sqft.
8884616461 | 8073300783

SITE FOR SALE
20X40 near Hari vidyalaya school Railway layout SBM bogadi 5000/sqft Slightly negotiable. Call
8792235466 | 8884616461

ತಕ್ಷಣ ಬೇಕಾಗಿದ್ದಾರೆ
ಹುಣಸೂರಿನ ಕಟ್ಟೆಮಳವಾಡಿ ಏರಿಯಾದಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡುಗಳು ಬೇಕಾಗಿದ್ದಾರೆ.
ವಿದ್ಯಾರ್ಹತೆ : SSLC & ಮೇಲ್ಪಟ್ಟು
ಸಂಬಳ: 18000 W/o
ಊಟ ತಿಂಡಿ ಸೌಲಭ್ಯವಿರುತ್ತದೆ.
9620667819 9880727819

LAND FOR SALE
3 acres land for sale with 30 coconut trees, tar road attached at Ramnathpur hundi near Gargeshwari. Brokers excuse.
For its location and video contact :
9066102267

ಹೊಸ ಮನೆ ಮಾರಾಟಕ್ಕಿದೆ
3 BHK, East Face
MUDA APPROVED
Near St. Joseph School, Yelwala, Huyilalu.
Mob: 8217851695

ಬೇಕಾಗಿದ್ದಾರೆ
ಮೈಸೂರಿನಲ್ಲಿರುವ A.W.B.M. Company ಗೆ SSLC (Pass), PUC, ITI, Dip. any Degree ಆದಂತಹ 219 ಅಭ್ಯರ್ಥಿಗಳು ಬೇಕಾಗಿದ್ದಾರೆ. (ನೇರ ಸಂದರ್ಶನ + ನೇರ ಆಯ್ಕೆ). ವಯೋಮಿತಿ: 18 – 32 ವರ್ಷಗಳು. ತಿಂಗಳಿಗೆ: 21,000 – 27,000. (ಉಚಿತ ಊಟ + ವಸತಿಯಿದೆ).
ಕೂಡಲೇ ಕರೆಮಾಡಿ.
ಶ್ರೇಷ್ಠ: **7349699460, 7090212014**

ಬೇಕಾಗಿದ್ದಾರೆ
ಫುಡ್ ಫ್ಯಾಕ್ಟರಿಯಲ್ಲಿ ಹೆಲ್ಪರ್ ಕೆಲಕ್ಕೆ ಪುರುಷರು ಬೇಕಾಗಿದ್ದಾರೆ. ವಯಸ್ಸು: 18-45. ಸಂಬಳ ESI, PF ಕಳೆದು 17,500. 8 ಗಂಟೆ ಕೆಲಸ, 3 ಶಿಫ್ಟ್‌ಗಳು ಇರುತ್ತದೆ. ವಿದ್ಯಾರ್ಹತೆ ಬೇಕಿಲ್ಲ. ಹೆಚ್ಚಿನ ಮಾಹಿತಿಗಾಗಿ ಸ್ಥಳಕ್ಕೆ ಭೇಟಿ ನೀಡಿ. ಸ್ಥಳ: CIPET ಕಾಲೇಜ್ ಹತ್ತಿರ, ಮೇಟಗಳ್ಳಿ, ಮೈಸೂರು.
9986874574

ತಕ್ಷಣ ಬೇಕಾಗಿದ್ದಾರೆ
ಮೇಟಗಳ್ಳಿ ಇಂಡಸ್ಟ್ರಿಯಲ್ ಏರಿಯಾದಲ್ಲಿ ಕೆಲಸ ಮಾಡಲು SSLC, ITI pass or fail.ಹುಡುಗರು ಬೇಕಾಗಿದ್ದಾರೆ. (Age limit 18 - 40). ಸಂಬಳ: 15,000.
ಅನುಕೂಲತೆ: ESI, PF, Canteen ಸೌಲಭ್ಯವಿರುತ್ತದೆ. ಸಂಪರ್ಕಿಸಿ:
6362491336, 8105651601

ಬೇಕಾಗಿದ್ದಾರೆ Vacancy
ಮೈಸೂರು ಮೇಟಗಳ್ಳಿ ಇಂಡಸ್ಟ್ರಿಯಲ್ ಏರಿಯಾದಲ್ಲಿರುವ ಕೋಳಿ ಫೀಡ್ ಕಂಪನಿಗೆ 18 – 45 ವರ್ಷದೊಳಗಿನ ಪುರುಷರು ಲೋಡಿಂಗ್, ಪ್ಯಾಕಿಂಗ್, ಪೌಡರಿಂಗ್ ಇತ್ಯಾದಿ ಕೆಲಸ ಮಾಡಲು ಬೇಕಾಗಿದ್ದಾರೆ. ಕೆಲಸ ಮಾಡುವ ವೇಳೆ ಮೆಡಿಸಿನ್ ವಾಸನೆಯಿರುತ್ತದೆ. ವಿದ್ಯಾರ್ಹತೆ ಆವಶ್ಯಕತೆಯಿಲ್ಲ. ಸಂಬಳ: 19,000 ರಿಂದ ಓಟಿ ಸೇರಿ 23,000 ಸಾವಿರದವರೆಗೆ ತೆಗೆದುಕೊಳ್ಳಬಹುದು.
ಸಂಪರ್ಕಿಸಿ: ಸಾಯಿಕೇಪ ಎಂಟರ್‌ಪ್ರೈಸಸ್
ರತ್ನಯ್ಯ ಪ್ರಕಾಶ
9900889325, 8971460235

ವಧು ಬೇಕಾಗಿದೆ
ಮೈಸೂರಿನಲ್ಲಿ ವಾಸವಿರುವ 42 ವರ್ಷದ ವೀರಶೈವ ಲಿಂಗಾಯತ ವರನಿಗೆ 30 ವರ್ಷ ಮೇಲ್ಪಟ್ಟ ವೀರಶೈವ ಲಿಂಗಾಯತ ವಧು ಬೇಕಾಗಿದೆ.
9945646919

ಬೆಂಗಳೂರಿನಲ್ಲಿ ಆಫೀಸ್ ಕೆಲಸಕ್ಕೆ ಬೇಕಾಗಿದ್ದಾರೆ
ಉಚಿತ Room ವಸತಿಯೊಂದಿಗೆ, ಕನ್ನಡ ಓದಲು ಬರೆಯಲು ಬಲ್ಲ 21 ಯುವತಿಯರನ್ನು ತಕ್ಷಣ ನೇರ ನೇಮಕಾತಿ ಮಾಡಲಾಗುತ್ತಿದೆ.
SSLC, PUC, ITI, any Degree 8000-15000. ಪ್ರಿಯ:
9108151618 9008357980

ಬೇಕಾಗಿದ್ದಾರೆ
ವೆಜಿಟೇರಿಯನ್ ಕ್ಯಾಂಟೀನ್‌ನಲ್ಲಿ ಕೆಲಸ ಮಾಡಲು ಹೆಲ್ಪರ್ ಬೇಕಾಗಿದ್ದಾರೆ.
ಸಮಯ: ಬೆಳಗ್ಗೆ 8 ಗಂಟೆಯಿಂದ ರಾತ್ರಿ 8 ಗಂಟೆ. ಪ್ರತಿ ಭಾನುವಾರ ರಜೆ. ಸ್ಥಳ: ಶಾರದಾದೇವಿನಗರ, ಮೈಸೂರು. ಸಂಪರ್ಕಿಸಿ:
8951753615

7-5-2025, 2-6-2025 ರಿಂದ 17 ದಿನಗಳು. ಪುರಿ ಜಗನ್ನಾಥ್, ಕೊನಾರ್ಕ್, ಭುವನೇಶ್ವರ್, ಕಾಶಿ, ಗಯಾ, ಪ್ರಯಾಗ್‌ರಾಜ್, ಅಯೋಧ್ಯೆ, ನೇಪಾಳ, ಮುಕ್ತನಾಥ. 7-5-2025 ರಿಂದ 14 ದಿನಗಳು ದೆಹಲಿ, ಹರಿದ್ವಾರ್, ಯಮುನೋತ್ರಿ, ಗಂಗೋತ್ರಿ, ಬದರಿನಾಥ್, ಕೇದಾರ್‌ನಾಥ್. 28-6-2025 ರಿಂದ 13 ದಿನಗಳು. ದೆಹಲಿ ಕುರುಕ್ಷೇತ್ರ, ವೈಷ್ಣೋದೇವಿ, ಗುಲ್‌ಮಾರ್ಗ್, ಕಾಶ್ಮೀರ್, ಅಮರನಾಥ್, ಅಮೃತ್‌ಸರ್, ವಾಘ ಬಾರ್ಡರ್. ಸಂಪರ್ಕಿಸಿ: ಐಶ್ವನ್ ಟೂರ್ಸ್ ಅಂಡ್ ಟ್ರಾವೆಲ್ಸ್, ಬೆಂಗಳೂರು-70
9342287551, 9482239855

DOCUMENT LOST
I, B.N. Vijayanarasimha, have lost allotment letter of Site No. 77, Nagarika Yogakshema Matthu Gruha Nirmana Sangha, Bogadi 1st Stage, Mysuru. Finders contact:
9845115273

ಉದ್ಯೋಗ ಅವಕಾಶ
ಒಂದ ದಿನವೇ ಕೆಲಸ (ಮಾರ್ಕೆಟಿಂಗ್ ಅಲ್ಲ) ಮೈಸೂರಿನ ಪ್ರತಿಷ್ಠಿತ MNC ಹಾಗೂ IT ಕಂಪನಿಗಳಿಗೆ 4th, SSLC, PUC, ITI, Any Degree ಪಾಸ್ / ಫೇಲ್ ಆದ ಯುವಕ / ಯುವತಿಯರು ಇಂದೇ ಬೇಕಾಗಿದ್ದಾರೆ. ESI / PF ಜೊತೆಗೆ ಊಟ, ವಸತಿಯಿರುತ್ತದೆ. ಸಂಬಳ – ರೂ. 15200 – 86,000.
7337645977, 7892046990

ನಮ್ಮಲ್ಲಿ ಬಾದಾಮಿ, ಗೋಡಂಬಿ, ಪಿಸ್ತಾ, ಅಂಜೂರ, ಒಣದ್ರಾಕ್ಷಿ, ಖರ್ಜೂರ, ಮುಂತಾದ ಡ್ರೈಫ್ರೂಟ್ಸ್ ದೊರೆಯುತ್ತದೆ. (5 ಕಿ.ಮೀ ವರೆಗೂ ಉಚಿತ ಡೆಲಿವರಿ) ಸಂಪರ್ಕಿಸಿ:
ರಾಜ್ ಗುರು ಡ್ರೈಫ್ರೂಟ್ಸ್, ನಾರಾಯಣ ಶಾಸ್ತ್ರಿ ರಸ್ತೆ, ಮೈಸೂರು
7022293342 9845460211

ಶ್ರೀ ಚಾಮುಂಡೇಶ್ವರಿ ಕೃಪಾ
SS ಸೈಟ್ ಮಾರ್ಕೆಟಿಂಗ್
ಇಲವಾಲ ಸೇರಿದಂತೆ ಮೈಸೂರಿನ ಸುತ್ತಮುತ್ತಲು ಸೈಟ್ ಮತ್ತು ಜಮೀನು ನೋಡಿಕೊಳ್ಳಲು ಮಾರಲು ಹಾಗೂ ಜಮೀನು JV ಗೆ ಬೇಕಾಗಿದೆ
ಮೈಸೂರ್ ಸುತ್ತಮುತ್ತ ಸಂಪರ್ಕಿಸಿ:
ಸುರೇಶ್‌ಪಿ: **9972125827**
ಶಂಕರ್: **7259407518**

ಬೇಕಾಗಿದ್ದಾರೆ
HP ಪೆಟ್ರೋಲ್ ಬಂಕ್, ಆಲನಹಳ್ಳಿ, ದೇವೇಗೌಡ ಸರ್ಕಲ್, ಮೈಸೂರು ರಿಂಗ್ ರೋಡಿನಲ್ಲಿರುವ ಬಂಕ್ ಕೆಲಸಕ್ಕೆ ಹುಡುಗರು & ಮಹಿಳೆಯರು ಬೇಕಾಗಿದ್ದಾರೆ.
ಹಾಗೂ ಮ್ಯಾನೇಜರ್ ಬೇಕಾಗಿದ್ದಾರೆ
9845882299 9113223005

ಡ್ರೈವರ್ ಬೇಕಾಗಿದ್ದಾರೆ
ಸಂಬಳ: 16,0000/–
ವಯೋಮಿತಿ 55 ವರ್ಷಗಳು
ಸಂಪರ್ಕಿಸಿ ಹರೀಶ್
9663311557

ಪ್ರಗತಿ ವಧುವರರ ಅನ್ವೇಷಣೆ ಮೈಸೂರು
SC/ST ಕ್ರಿಶ್ಚಿಯನ್, ಲಿಂಗಾಯತ, ಕುರುಬ, ಒಕ್ಕಲಿಗ
CONTACT **9844396822**
SECOND MARRIAGE ALSO

ಗೋಪಾಲಗೌಡ & ನಿರ್ಮಲ ಆಸ್ಪತ್ರೆ ಕ್ಯಾಂಟೀನ್
1) ಸಸ್ಯಾಹಾರಿ ಅಡುಗೆ ಮಾಡಲು ಇಬ್ಬರು ಭಟ್ಟರು ಬೇಕಾಗಿದ್ದಾರೆ. ವೇತನ: 20,000/–
2) ಫುಡ್ ಸರ್ವಿಸ್ ಮಾಡಲು ಹುಡುಗ ಅಥವಾ ಹುಡುಗಿ ಬೇಕಾಗಿದ್ದಾರೆ.
ವೇತನ 11000 ರೂ.ಗಳು ಊಟ, ತಿಂಡಿ ವ್ಯವಸ್ಥೆ ಇರುತ್ತದೆ. ವಸತಿ ಸೌಲಭ್ಯವಿದೆ
9663150577 7022941158

ಮತ್ತಷ್ಟು ವರ್ಗೀಕೃತ ಜಾಹೀರಾತು ಪುಟ 10 ರಲ್ಲಿ

ಮೈಸೂರು ಮಿತ್ರ

ಡೀಸೆಲ್ ಬೆಲೆ ಏರಿಕೆ ಖಂಡಿಸಿ ಪ್ರತಿಭಟನೆ



ಡೀಸೆಲ್ ಬೆಲೆ ಏರಿಕೆ ಖಂಡಿಸಿ ಪ್ರತಿಭಟನೆ ನಡೆಸಲಾಯಿತು.

ನಂಜನಗೂಡು, ಏ.2– ರಾಜ್ಯ ಸರ್ಕಾರ ಡೀಸೆಲ್ ಬೆಲೆಯನ್ನು ಎರಡು ರೂಪಾಯಿ ಏರಿಕೆ ಮಾಡಿರುವ ಕ್ರಮ ಖಂಡಿಸಿ ನಂಜನಗೂಡು ಲಾರಿ ಮಾಲೀಕರ ಸಂಘದ ವತಿಯಿಂದ ಪ್ರತಿಭಟನೆ ನಡೆಸಲಾಯಿತು.

ನಗರದ ಡಾ.ಬಿ.ಆರ್.ಅಂಬೇಡ್ಕರ್ ಪುತ್ಥಳಿ ಬಳಿ ಜಮಾಯಿಸಿದ ಲಾರಿ ಮಾಲೀಕರು ಹಾಗೂ ಚಾಲಕರ ಸಂಘದ ಪದಾಧಿಕಾರಿಗಳು ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರಗಳ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.


ಲಾರಿ ಮಾಲೀಕರ ಸಂಘದ ಅಧ್ಯಕ್ಷ ವಿಶ್ವನಾಥ್ ಮಾತನಾಡಿ, ಈಗಾಗಲೇ ಲಾರಿ ಬಿಡಿ ಭಾಗಗಳ ಬೆಲೆ ಏರಿಕೆಯಿಂದ ಕಂಗಾಲಾಗಿರುವ ನಮಗೆ ರಾಜ್ಯ ಸರ್ಕಾರ ಡೀಸೆಲ್ ಬೆಲೆಯನ್ನು ಎರಡು ರೂಪಾಯಿ ಏರಿಕೆ ಮಾಡಿದೆ. ಇದರಿಂದ ಲಾರಿ ಮಾಲೀಕರು ಸಂಕಷ್ಟಕ್ಕೆ ಸಿಲುಕಿ ಆತ್ಮಹತ್ಯೆ ದಾರಿ ಹಿಡಿಯುವಂತಾಗಿದೆ. ಅಲ್ಲದೇ ಕೇಂದ್ರ ಸರ್ಕಾರ ಕೂಡ ಟೋಲ್ ಬೆಲೆಯನ್ನು ಶೇ.5ರಷ್ಟು ಏರಿಕೆ ಮಾಡಿದೆ. ಆದರೆ ರಾಜ್ಯ, ಕೇಂದ್ರ ಸರ್ಕಾರವಾಗಲಿ ಲಾರಿ ಮಾಲೀಕರ ಸಂಕಷ್ಟ ಆಲಿಸುವ ಕೆಲಸ ಮಾಡಿಲ್ಲ. ದೇಶಾದ್ಯಂತ ಒಂದೇ ರೀತಿ ಬಾಡಿಗೆ ನಿಗದಿಗೊಳಿಸುವಂತಹ ಕ್ರಮಕ್ಕೆ ಮುಂದಾಗಿಲ್ಲ. ಇದರಿಂದಾಗಿ ರಸ್ತೆ ತೆರಿಗೆ, ಇನ್ಸೂರೆನ್ಸ್, ಟೋಲ್ ಶುಲ್ಕ ಹೆಚ್ಚಿನ ಹೊರೆಯಾಗಿದೆ. ಅಲ್ಲದೆ ಆರ್‌ಟಿಓ ಮತ್ತು ಪೊಲೀಸರ ಕಿರುಕುಳದ ಜೊತೆಗೆ ಚೆಕ್‌ಪೋಸ್ಟ್‌ಗಳಲ್ಲಿ ಹಫ್ತಾ ವಸೂಲಿ ಮಾಡುತ್ತಿರುವುದರಿಂದ ಲಾರಿ ಮಾಲೀಕರು ಲಾರಿಯನ್ನೇ ಓಡಿಸಲಾಗದ ಸ್ಥಿತಿಗೆ ತಲುಪಿದ್ದೇವೆ ಎಂದರು.

ಕೂಡಲೇ ರಾಜ್ಯ ಸರ್ಕಾರ ಡೀಸೆಲ್ ಬೆಲೆ ಏರಿಕೆ ಹಿಂಪಡೆಯಬೇಕು. ಜೊತೆಗೆ ಚೆಕ್‌ಪೋಸ್ಟ್‌ಗಳಲ್ಲಿ ಭ್ರಷ್ಟಾಚಾರ ಅಧಿಕವಾಗಿರುವ ಕಾರಣ ಅವುಗಳನ್ನು ತೆರವುಗೊಳಿಸಬೇಕು. ಆರ್‌ಟಿಓ ಅಧಿಕಾರಿಗಳು ಮತ್ತು ಪೊಲೀಸರ ಕಿರುಕುಳ ತಪ್ಪಿಸಬೇಕು. ಇಲ್ಲವಾದಲ್ಲಿ ಕಾರ್ಖಾನೆಗಳಿಗೆ ಲಾರಿ ಬಾಡಿಗೆಗಳನ್ನು ಶೇ.25 ರಷ್ಟು ಹೆಚ್ಚಿಸುವಂತೆ ಆದೇಶ ಹೊರಡಿಸಬೇಕು. ನಮ್ಮ ಬೇಡಿಕೆ ಈಡೇರದೆ ಹೋದಲ್ಲಿ ಎಲ್ಲಾ ಲಾರಿಗಳನ್ನು ಜಿಲ್ಲಾಧಿಕಾರಿಗಳ ಕಚೇರಿ ಮುಂದೆ ತಂದು ನಿಲ್ಲಿಸುವ ಮೂಲಕ ಪ್ರತಿಭಟನೆ ತೀವ್ರಗೊಳಿಸಲಾಗುವುದು ಎಂದರು.

ಪ್ರತಿಭಟನೆಯಲ್ಲಿ ಲಾರಿ ಮಾಲಿಕರ ಸಂಘದ ಕಾರ್ಯದರ್ಶಿ ಗಣೇಶ್, ಉಪಾಧ್ಯಕ್ಷ ಮಣಿ, ರಫೀಕ್, ರಾಮರಾಜ್, ಮನ್ಸೂರ್, ಭಾಗ್ಯರಾಜು, ಶಿವು, ನವೀನ, ಕೀರ್ತಿ, ವಿಶ್ವ, ಸೇರಿದಂತೆ ಲಾರಿ ಮಾಲೀಕರ ಸಂಘದ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಹಾಲು, ಮೊಸರು ಲೀಟರ್‌ಗೆ 4 ರೂ. ಹೆಚ್ಚಳ

ಇದರ ಫಲ ರೈತರಿಗೆ: ಮೈಮುಲ್ ಅಧ್ಯಕ್ಷ ಆರ್.ಚಲುವರಾಜ್



ತಿ.ನರಸೀಪುರ, ಏ.2– ನಂದಿನಿ ಹಾಲು ಮತ್ತು ಮೊಸರು ಮಾರಾಟ ದರವನ್ನು ಪ್ರತಿ ಲೀಟರ್‌ಗೆ 4 ರೂ. ಹೆಚ್ಚಿಸಲಾಗಿದ್ದು, ದರ ಪರಿಷ್ಕರಣೆ ಮೊತ್ತ ಹಾಲು ಉತ್ಪಾದಕರಿಗೆ ನೇರವಾಗಿ ತಲುಪುವಂತೆ ಕ್ರಮ ವಹಿಸಲಾಗಿದೆ ಎಂದು ಮೈಮುಲ್ ಅಧ್ಯಕ್ಷ ಆರ್.ಚಲುವರಾಜು ತಿಳಿಸಿದ್ದಾರೆ.

ಈ ಬಗ್ಗೆ ಪ್ರಕಟಣೆ ನೀಡಿರುವ ಅವರು ಸರ್ಕಾರದ ಸಮ್ಮತಿಯಂತೆ ಈ ಕ್ರಮ ಕೈಗೊಳ್ಳಲಾಗಿದೆ. ಒಕ್ಕೂಟ ವ್ಯಾಪ್ತಿಯಲ್ಲಿ 1,220 ಹಾಲು ಉತ್ಪಾದಕರ ಸಹಕಾರ ಸಂಘಗಳು ಕಾರ್ಯ ನಿರ್ವಹಿಸುತ್ತಿದ್ದು, ಹೈನುಗಾರರ ಪೈಕಿ 1.05 ಲಕ್ಷ ಮಂದಿ ಪ್ರತಿದಿನ ಸಹಕಾರ ಸಂಘಗಳಿಗೆ ಹಾಲು ಪೂರೈಕೆ ಮಾಡುತ್ತಿದ್ದಾರೆ. ಒಕ್ಕೂಟವು ಉತ್ಪಾದಕರಿಂದ ಹಾಲು ಖರೀದಿಸಿ ಸಂಸ್ಕರಿಸಿ 'ನಂದಿನಿ' ಬ್ರಾಂಡ್‌ನಲ್ಲಿ ವಿವಿಧ ಉತ್ಪನ್ನಗಳನ್ನು ಮಾರುಕಟ್ಟೆಗೆ ಒದಗಿಸುತ್ತಿದೆ. ರೈತರು ಹೈನುಗಾರಿಕೆಯನ್ನು ಉಪಕಸುಬಾಗಿ ಅಳವಡಿಸಿಕೊಂಡಿದ್ದು, ಅವರ ಸಾಮಾಜಿಕ ಹಾಗೂ ಆರ್ಥಿಕ ಅಭಿವೃದ್ಧಿಗಾಗಿ ಒಕ್ಕೂಟವು ಹಲವು ಯೋಜನೆಗಳ ಮೂಲಕ ನಿರಂತರವಾಗಿ ಶ್ರಮಿಸುತ್ತಿದೆ ಎಂದು ತಿಳಿಸಿದ್ದಾರೆ.

2024ರ ಜೂ.26ರಂದು ಪ್ರತಿ 1 ಲೀಟರ್ ನಂದಿನಿ ಹಾಲಿನ ಪಾಕೆಟ್‌ನಲ್ಲಿ 50 ಮಿ.ಲಿ. ಹೆಚ್ಚುವರಿ ನೀಡಿ ಆ ಪ್ರಮಾಣಕ್ಕೆ 2 ರಂತೆ ಹೆಚ್ಚಿಸಲಾಗಿದ್ದ ದರವನ್ನು ಉಳಿಸಿಕೊಳ್ಳಲಾಗಿದೆ. ಪ್ರಸ್ತುತ 4 ಹೆಚ್ಚುವರಿ ದರ ಅಳವಡಿಸಿಕೊಂಡು ಮಾರಾಟಕ್ಕೆ ಕ್ರಮ ವಹಿಸಲಾಗಿದೆ. ಪ್ರಸ್ತುತ ಪರಿಷ್ಕೃತ ದರದೊಂದಿಗೆ ನಂದಿನಿ ಹಾಲಿನ ದರವು ಇತರ ಪ್ರಮುಖ ರಾಜ್ಯಗಳ ಹಾಲು ಮಾರಾಟ ದರಗಳಿಗಿಂತ ಸ್ಪರ್ಧಾತ್ಮಕವಾಗಿದೆ. ಗ್ರಾಹಕರಿಗೆ ಇನ್ನೂ ಅಗ್ಗದ ದರದಲ್ಲಿ ಲಭ್ಯವಿದೆ ಎಂದು ಮಾಹಿತಿ ನೀಡಿದ್ದಾರೆ.

ಲೀಟರ್ ಹಾಲಿಗೆ ಕೇರಳದಲ್ಲಿ 52, ಗುಜರಾತ್‌ನಲ್ಲಿ 53, ದೆಹಲಿಯಲ್ಲಿ 55, ಮಹಾರಾಷ್ಟ್ರದಲ್ಲಿ 52 ಹಾಗೂ ತೆಲಂಗಾಣದಲ್ಲಿ 58 ಇದೆ. ಕರ್ನಾಟಕದಲ್ಲಿ ಲೀಟರ್ 'ನಂದಿನಿ' ಹಾಲನ್ನು 46ಕ್ಕೆ ಮಾರಲಾಗುತ್ತಿದೆ. ದರ ಹೆಚ್ಚಳ ಸಂಬಂಧ ಕೆಲವು ಕಡೆ ವಿರೋಧ ವ್ಯಕ್ತವಾಗುತ್ತಿದೆ. ಈ ಪರಿಷ್ಕೃತ ಮೊತ್ತವು ಸಂಪೂರ್ಣವಾಗಿ ಉತ್ಪಾದಕರಿಗೆ ನೇರವಾಗಿ ತಲುಪುವುದರಿಂದ ಅನ್ಯಥಾ ಭಾವಿಸುವ ಅಗತ್ಯವಿಲ್ಲ ಎಂದು ತಿಳಿಸಿದ್ದಾರೆ.

ನಾಗಲಗೆರೆಯಲ್ಲಿ ಭಾರತೀಯ ಕಿಸಾನ್ ಸಂಘ ರಚನೆ

ಅಧ್ಯಕ್ಷರಾಗಿ ರಂಗಸ್ವಾಮಿ, ಕಾರ್ಯದರ್ಶಿಯಾಗಿ ಆನಂದ್ ಆಯ್ಕೆ



ಭಾರತೀಯ ಕಿಸಾನ್ ಸಂಘದ ಗ್ರಾಮ ಘಟಕದ ಅಧ್ಯಕ್ಷರಾಗಿ ಎಂ.ರಂಗಸ್ವಾಮಿ, ಕಾರ್ಯದರ್ಶಿಯಾಗಿ ಆನಂದ್ ಆಯ್ಕೆಯಾದರು.

ತಿ.ನರಸೀಪುರ, ಏ.2– ತಾಲೂಕಿನ ನಾಗಲಗೆರೆ ಗ್ರಾಮದಲ್ಲಿ ಭಾರತೀಯ ಕಿಸಾನ್ ಸಂಘದ ಗ್ರಾಮ ಸಮಿತಿ ರಚಿಸಿ, ಗ್ರಾಮ ಘಟಕದ ಅಧ್ಯಕ್ಷರಾಗಿ ಎಂ.ರಂಗಸ್ವಾಮಿ ಹಾಗೂ ಕಾರ್ಯದರ್ಶಿಯಾಗಿ ಆನಂದ ಅವರನ್ನು ಸರ್ವಾನುಮತದಿಂದ ಆಯ್ಕೆ ಮಾಡಲಾಯಿತು.

ದಕ್ಷಿಣ ಪ್ರಾಂತ್ಯ ಸಂಘಟನಾ ಕಾರ್ಯದರ್ಶಿ ನಾರಾಯಣಸ್ವಾಮಿ ಮಾತನಾಡಿ, ಸಂಘವನ್ನು ಹಳ್ಳಿಗಳಲ್ಲಿ ಉತ್ತಮವಾಗಿ ಸಂಘಟನೆ ಮಾಡಿದರೆ ರೈತರಿಗೆ ಅನುಕೂಲವಾಗುತ್ತದೆ. ಸರ್ಕಾರದ ಸವಲತ್ತು ಪ್ರತಿಯೊಬ್ಬ ರೈತನಿಗೂ ತಲುಪಬೇಕೆಂಬುದೆ ನಮ್ಮ ಸಂಘದ ಆಸೆ ಎಂದರು.

ತಾಲೂಕು ಅಧ್ಯಕ್ಷ ನಾಗಲಗೆರೆ ಶಿವಕುಮಾರ ಮಾತನಾಡಿ, ಹಳ್ಳಿಗಳಲ್ಲಿ ಯಾವುದೇ ಕುಂದು ಕೊರತೆಗಳಿದ್ದರೂ ನಮ್ಮ ಸಂಘಕ್ಕೆ ತಿಳಿಸಬೇಕು ಎಂದು ಮನವಿ ಮಾಡಿದ ಅವರು ರೈತರು ಹಾಗೂ ಅಧಿಕಾರಿಗಳ ಸಂಬಂಧ ಚೆನ್ನಾಗಿದ್ದರೆ ರೈತರಿಗೆ ತಲುಪಬೇಕಾದ ಎಲ್ಲಾ ಸವಲತ್ತುಗಳು ತಲುಪುತ್ತದೆ ಎಂದರು.

ಗ್ರಾಮ ಘಟಕದ ಅಧ್ಯಕ್ಷ ರಂಗಸ್ವಾಮಿ ಮಾತನಾಡಿ, ಗ್ರಾಮಗಳಲ್ಲಿ ಕುಡಿಯುವ ನೀರಿನ ಸಮಸ್ಯೆ, ಚರಂಡಿ ಸೇರಿದಂತೆ ಇನ್ನಿತರ ಮೂಲ ಸೌಕರ್ಯ ಒದಗಿಸುವುದು ಸೇರಿದಂತೆ ನಮ್ಮ ಸಂಘದಿಂದ ಆಗುವ ಕೆಲಸವನ್ನು ಶ್ರದ್ಧೆಯಿಂದ ಮಾಡುತ್ತೇನೆ ಎಂದರು.

ಕಾರ್ಯದರ್ಶಿ ಆನಂದ್ ಮಾತನಾಡಿದರು. ಸದಸ್ಯರಾದ ಗುರುಮಲ್ಲಯ್ಯ, ಸಿದ್ದರಾಜು, ರಾಜು, ಉಮೇಶ, ನಾಗರಾಜು, ಮಹದೇವಯ್ಯ, ನಿಂಗರಾಜು, ಕಾಳಯ್ಯ, ರಾಚಪ್ಪಾಜಿ, ಮಹಾದೇವ ಇನ್ನಿತರರಿದ್ದರು.

ಸಾರಿಗೆ ಬಸ್ ಡಿಕ್ಕಿ: ಸೈಕಲ್ ಸವಾರ ಸಾವು



ಕೆ.ಆರ್.ನಗರ, ಏ.2– ಸಾರಿಗೆ ಬಸ್ ಡಿಕ್ಕಿ ಹೊಡೆದ ಪರಿಣಾಮ ಸೈಕಲ್ ಸವಾರ ಸ್ಥಳದಲ್ಲೇ ಸಾವನ್ನಪ್ಪಿರುವ ಘಟನೆ ಬುಧವಾರ ತಾಲೂಕಿನ ಹಂಪಾಪುರದಲ್ಲಿ ನಡೆದಿದೆ.

ಗ್ರಾಮದ ನಿವಾಸಿ ಚಂದವಾರಶೆಟ್ಟಿ (62) ಸಾವನ್ನಪ್ಪಿದವರು. ಬುಧವಾರ ಬೆಳಗ್ಗೆ ತನ್ನ ಸೈಕಲ್‌ನಲ್ಲಿ ಡೈರಿಗೆ ಹಾಲು ಹಾಕಲು ತೆರಳಿದ್ದ ಅವರು ಮನೆಗೆ ವಾಪಸ್ಸಾಗಿರಲಿಲ್ಲ. ಬಸ್ ಸೈಕಲ್‌ಗೆ ಡಿಕ್ಕಿ ಹೊಡೆದು ಚಂದವಾರಶೆಟ್ಟಿ ತಲೆ ಮೇಲೆ ಹರಿದ ಪರಿಣಾಮ ತೀವ್ರ ಗಾಯಗೊಂಡು ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ. ಘಟನೆ ಬಳಿಕ ಬಸ್ ಚಾಲಕ, ನಿರ್ವಾಹಕ ಸ್ಥಳದಿಂದ ಪರಾರಿಯಾಗಿದ್ದಾರೆ.

ರಸ್ತೆತಡೆ: ಘಟನೆ ಖಂಡಿಸಿ ಹಂಪಾಪುರ ಗ್ರಾಮಸ್ಥರು ಒಂದು ಗಂಟೆಗೂ ಹೆಚ್ಚು ಕಾಲ ರಸ್ತೆ ತಡೆ ನಡೆಸಿದ್ದರಿಂದ ಸಂಚಾರ ಅಸ್ತವ್ಯಸ್ತಗೊಂಡಿತ್ತು. ಅಲ್ಲದೇ ಎಸ್‌ಎಸ್‌ಎಲ್‌ಸಿ ಪರೀಕ್ಷೆ ಬರೆಯಲು ತೆರಳುತ್ತಿದ್ದ ವಿದ್ಯಾರ್ಥಿಗಳು ತೊಂದರೆ ಅನುಭವಿಸಬೇಕಾಯಿತು. ಈ ವೇಳೆ ಸಾರ್ವಜನಿಕರು ಬೈಕ್ ಮತ್ತು ಕಾರುಗಳಲ್ಲಿ ವಿದ್ಯಾರ್ಥಿಗಳು ಪರೀಕ್ಷಾ ಕೇಂದ್ರಕ್ಕೆ ತೆರಳಲು ಸಹಕಾರ ನೀಡಿದರು. ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಕೆ.ಆರ್.ನಗರ ಠಾಣೆ ಪೊಲೀಸರು ಪರಿಶೀಲನೆ ನಡೆಸಿ ಶವವನ್ನು ಕೆ.ಆರ್.ನಗರದ ಸಾರ್ವಜನಿಕ ಆಸ್ಪತ್ರೆಗೆ ರವಾನಿಸಿ ಮರಣೋತ್ತರ ಪರೀಕ್ಷೆ ಬಳಿಕ ವಾರಸುದಾರರಿಗೆ ಹಸ್ತಾಂತರಿಸಿದರು. ಈ ಸಂಬಂಧ ಕೆ.ಆರ್.ನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸಚಿವ ವೆಂಕಟೇಶ್‌ಗೆ ಸನ್ಮಾನ



ತಿ.ನರಸೀಪುರ ಪಿಎಲ್‌ಡಿ ಬ್ಯಾಂಕ್ ಅಧ್ಯಕ್ಷ ಕೆಂಪಯ್ಯನಹುಂಡಿ ಮಹದೇವಣ್ಣ, ಉಪಾಧ್ಯಕ್ಷ ಮಹದೇವಸ್ವಾಮಿ ಅವರು ಸಚಿವ ಕೆ.ವೆಂಕಟೇಶ್ ಅವರನ್ನು ಸನ್ಮಾನಿಸಿದರು. ಈ ವೇಳೆ ನಿರ್ದೇಶಕ ಎನ್.ಲಿಂಗಪ್ಪಾಜಿ, ಮಾಜಿ ಜಿಪಂ ಸದಸ್ಯ ಮಂಜುನಾಥನ್ ಇದ್ದರು.

ಉಯಿಗೊಂಡನಹಳ್ಳಿ ಗ್ರಾಪಂ ಅಧ್ಯಕ್ಷ, ಉಪಾಧ್ಯಕ್ಷರ ಚುನಾವಣೆ

ದೇವರಾಜ್ ಅಧ್ಯಕ್ಷ, ರುಕ್ಕಮ್ಮ ಉಪಾಧ್ಯಕ್ಷೆ



ನೂತನ ಅಧ್ಯಕ್ಷರು, ಉಪಾಧ್ಯಕ್ಷರನ್ನು ಕಾಂಗ್ರೆಸ್ ಮುಖಂಡರು ಅಭಿನಂದಿಸಿದರು.

ಹುಣಸೂರು, ಏ.2– ತಾಲೂಕಿನ ಉಯಿಗೊಂಡನಹಳ್ಳಿ ಗ್ರಾಪಂ ಅಧ್ಯಕ್ಷರಾಗಿ ಯು.ಡಿ.ದೇವರಾಜ್, ಉಪಾಧ್ಯಕ್ಷೆಯಾಗಿ ರುಕ್ಕಮ್ಮ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಈ ಹಿಂದಿನ ಅಧ್ಯಕ್ಷೆ ರತ್ನಮ್ಮ ಹಾಗೂ ಉಪಾಧ್ಯಕ್ಷೆ ಮಂಜುಳಾ ಅವರು ಆಂತರಿಕ ಒಪ್ಪಂದದಂತೆ ತಮ್ಮ ಸ್ಥಾನಗಳಿಗೆ ರಾಜೀನಾಮೆ ನೀಡಿದ ಹಿನ್ನಲೆಯಲ್ಲಿ ಅವರಿಂದ ತೆರವಾದ ಪರಿಶಿಷ್ಟ ಜಾತಿ ಮೀಸಲು ಕ್ಷೇತ್ರಕ್ಕೆ ಮೀಸಲಾಗಿದ್ದ ಅಧ್ಯಕ್ಷ ಸ್ಥಾನಕ್ಕೆ ಯು.ಡಿ.ದೇವರಾಜ್, ಉಪಾಧ್ಯಕ್ಷ ಸ್ಥಾನಕ್ಕೆ ರುಕ್ಕಮ್ಮ ಅವರನ್ನು ಹೊರತುಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸದ ಕಾರಣ ಅವಿರೋಧ ಆಯ್ಕೆಯನ್ನು ಚುನಾವಣಾಧಿಕಾರಿ ಪಿಆರ್‌ಇಡಿ ಎಇಇ ಪುಟ್ಟನಾಗರಾಜು ಘೋಷಿಸಿದರು. ಪಿಡಿಓ ತೇಜೇಂದ್ರನಾಥ ವರಪ್ರಸಾದ್, ಕಾರ್ಯದರ್ಶಿ ಕೃಷ್ಣ ಇದ್ದರು.

ಚುನಾವಣೆಯಲ್ಲಿ ಮಾಜಿ ಅಧ್ಯಕ್ಷೆ ಆಶಾ, ಸದಸ್ಯರಾದ ಸುಮತಿ, ರಾಮೇಗೌಡ, ರಾಧ, ಆಯುಬ್ ಪಾಷ, ಇಕ್ಬಾಲ್ ಪಾಷ, ರಾಘವೇಂದ್ರ, ರಾಜಪ್ಪ, ಹೆಚ್.ಆರ್.ಪ್ರಕಾಶ್, ಶೋಭಾ, ಶಾಂತ ಕುಮಾರ್, ರಮೇಶ್, ಬಸವರಾಜ್, ಕೆ.ಕೌಸರ್ ಭಾನು, ಕಲೀಂ ಪಾಷ ಸೇರಿದಂತೆ ಎಲ್ಲಾ 18 ಸದಸ್ಯರು ಭಾಗವಹಿಸಿದ್ದರು.

ನೂತನ ಅಧ್ಯಕ್ಷ ದೇವರಾಜ್ ಮಾತನಾಡಿ, ತಮ್ಮ ಗೆಲುವಿಗೆ ಸಹಕರಿಸಿದ ಗ್ರಾಪಂ ಸದಸ್ಯರು, ಮಾಜಿ ಶಾಸಕ ಹೆಚ್.ಪಿ.ಮಂಜುನಾಥ್, ಹುಡಾ ಅಧ್ಯಕ್ಷ ಹೆಚ್.ಪಿ.ಅಮರ್‌ನಾಥ್ ಸೇರಿದಂತೆ ಕಾಂಗ್ರೆಸ್ ಮುಖಂಡರಿಗೆ ಧನ್ಯವಾದ ತಿಳಿಸಿದ ಅವರು ಎಲ್ಲರ ಸಲಹೆ ಪಡೆದು ಗ್ರಾಪಂ ವ್ಯಾಪ್ತಿಯ ಗ್ರಾಮಗಳ ಅಭಿವೃದ್ಧಿಗೆ ಶ್ರಮಿಸುತ್ತೇನೆ ಎಂದರು.

ನೂತನ ಅಧ್ಯಕ್ಷ, ಉಪಾಧ್ಯಕ್ಷರು ಆಯ್ಕೆಯಾಗುತ್ತಿದ್ದಂತೆಯೇ ಕಾಂಗ್ರೆಸ್ ಮುಖಂಡರು ಹಾಗೂ ಕಾರ್ಯಕರ್ತರು ಪಟಾಕಿ ಸಿಡಿಸಿ, ಸಿಹಿ ಹಂಚಿ ವಿಜಯೋತ್ಸವ ಆಚರಿಸಿದರು. ಹುಡಾ ಅಧ್ಯಕ್ಷ ಹೆಚ್.ಪಿ.ಅಮರ್‌ನಾಥ್, ತಾಪಂ ಮಾಜಿ ಸದಸ್ಯರಾದ ದೇವರಾಜ್, ಧರ್ಮಾಪುರ ಗ್ರಾಪಂ ಅಧ್ಯಕ್ಷ ವಿ.ಮಹದೇವ್, ಕಿರಂಗೂರು ಗ್ರಾಪಂ ಅಧ್ಯಕ್ಷ ಹರೀಶ್, ಗ್ರಾಪಂ ಮಾಜಿ ಅಧ್ಯಕ್ಷರಾದ ಮಹದೇವಸ್ವಾಮಿ, ರಂಗರಾಜ್, ಕೆಂಡಗಣ್ಣೇಗೌಡ, ಮುಖಂಡರಾದ ಚಿಕ್ಕಸ್ವಾಮಿ, ದಿಲೀಪ್, ಪುಟ್ಟರಾಜು, ಗ್ಯಾರಂಟಿ ತಾಲೂಕು ಅಧ್ಯಕ್ಷ ರಘು, ಜಿಲ್ಲಾ ಯುವ ಕಾಂಗ್ರೆಸ್ ಮಾಜಿ ಅಧ್ಯಕ್ಷ ಕುಮಾರ್, ತಾಲೂಕು ಅಧ್ಯಕ್ಷ ದರ್ಶನ್, ಮಾಜಿ ಅಧ್ಯಕ್ಷ ಕುಮಾರಸ್ವಾಮಿ, ಮುಖಂಡರಾದ ಸ್ವಾಮಿದಾಸಯ್ಯ, ರಾಮೇಗೌಡ, ಬಲರಾಮೇಗೌಡ, ಗಣೇಶ್, ಪ್ರಕಾಶ್, ರಮೇಶ್.ಎಸ್, ಸಣ್ಣಸ್ವಾಮಿಗೌಡ, ಶಿವರಾಜು, ನರಸಿಂಹರಾಜು, ಮಹದೇವ, ಬೆಟ್ಟಪ್ಪ, ಸಂತೋಷ್ ಸೇರಿದಂತೆ ಅನೇಕರಿದ್ದರು.

ಸಲಕರಣೆ ವಿತರಣೆ

ನಂಜನಗೂಡು, ಏ.2– ತಾಲೂಕಿನ 16 ಮೀನುಗಾರರಿಗೆ ಮೀನು ಹಿಡಿಯುವ ಬಲೆ, ಹರಿಗೋಲು ವಿತರಿಸಲಾಗಿದೆ ಎಂದು ಶಾಸಕ ದರ್ಶನ್ ತಿಳಿಸಿದರು.

ನಗರದ ತಾಪಂ ಆವರಣದಲ್ಲಿ ಮೀನುಗಾರರಿಗೆ ಸಲಕರಣೆಗಳ ಕಿಟ್ ವಿತರಿಸಿ ಮಾತನಾಡಿದ ಅವರು, ತಾಲೂಕಿನಲ್ಲಿ 16 ಕೆರೆಗಳು ಹಾಗೂ ಗ್ರಾಪಂ ವ್ಯಾಪ್ತಿಯ 23 ಕೆರೆಗಳಲ್ಲಿ ಮೀನುಗಾರಿಕೆ ನಡೆಸಲಾಗುತ್ತಿದೆ. 4 ಮೀನುಗಾರರ ಸಹಕಾರ ಸಂಘಗಳಿದ್ದು, 1.5 ಸಾವಿರ ಮೀನುಗಾರರು ವೃತ್ತಿಯಲ್ಲಿ ತೊಡಗಿದ್ದಾರೆ. 8 ಹೆಕ್ಟೇರ್ ಪ್ರದೇಶದಲ್ಲಿ ಖಾಸಗಿಯಾಗಿ ಮೀನು ಸಾಕಾಣಿಕೆ ನಡೆಸಲಾಗುತ್ತಿದೆ. ಕೆರೆಗಳಿಗೆ 31 ಲಕ್ಷ ಮೀನಿನ ಮರಿಗಳನ್ನು ಬಿಡಲಾಗಿದ್ದು, ಮೀನುಗಾರರಿಗೆ ಪ್ರೋತ್ಸಾಹ ನೀಡಲು ಸಹಾಯಧನ, ಬಲೆ, ಹರಿಗೋಲು ವಿತರಿಸಲಾಗಿದೆ. ಕೃಷಿಕರು ಮೀನು ಗಾರಿಕೆಯನ್ನು ಉಪಕಸುಬಾಗಿ ಅಳವಡಿಸಿಕೊಂಡು ಆರ್ಥಿಕ ಲಾಭಗಳಿಸಬಹುದು ಎಂದರು.

ಕಾರ್ಯಕ್ರಮದಲ್ಲಿ ತಾಪಂ ಇಓ ಜೆರಾಲ್ಡ್ ರಾಜೇಶ್, ಮಾಜಿ ಶಾಸಕ ಕೇಶವಮೂರ್ತಿ, ಯುವ ಕಾಂಗ್ರೆಸ್ ಅಧ್ಯಕ್ಷ ವಿಜಯ್ ಕುಮಾರ್, ನಗರಸಭಾ ಸದಸ್ಯ ಕೆ.ಎಂ.ಬಸವರಾಜು, ಅಕ್ರಮ ಸಕ್ರಮ ಸಮಿತಿ ಸದಸ್ಯ ಜಯರಾಮ, ಮುಖಂಡರಾದ ನಾಗರಾಜು, ಮೀನುಗಾರಿಕೆ ಇಲಾಖೆ ಸಹಾಯಕ ನಿರ್ದೇಶಕಿ ಶ್ವೇತಾ ಉಪಸ್ಥಿತರಿದ್ದರು.

ಮಹನೀಯರ ಆದರ್ಶಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಿ

ಶ್ರೀದೇವರ ದಾಸಿಮಯ್ಯ ಜಯಂತಿಯಲ್ಲಿ ಮುಡಾ ಮಾಜಿ ಅಧ್ಯಕ್ಷ ವಿಜಯ್



ಹರದನಹಳ್ಳಿಯಲ್ಲಿ ದೇವರ ದಾಸಮಯ್ಯ ಜಯಂತಿ ನಡೆಯಿತು.

ಚುಂಚನಕಟ್ಟೆ, ಏ.2– ಮಹನೀಯರ, ದಾರ್ಶನಿಕರ ಹಾಗೂ ಗಣ್ಯರ ಆದರ್ಶ ಗುಣಗಳನ್ನು ಸರ್ವರು ತಮ್ಮ ಬದುಕಿನಲ್ಲಿ ಅಳವಡಿಸಿಕೊಳ್ಳಬೇಕು ಎಂದು ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷ ಹೆಚ್.ಎನ್.ವಿಜಯ್ ಸಲಹೆ ನೀಡಿದರು.

ಸಾಲಿಗ್ರಾಮ ತಾಲೂಕಿನ ಹರದನಹಳ್ಳಿ ಗ್ರಾಮದಲ್ಲಿ ಶ್ರೀಚೌಡೇಶ್ವರಿ ದೇವಾಂಗ ಸಂಘದಿಂದ ಆಯೋಜಿಸಿದ್ದ ಶ್ರೀದೇವರ ದಾಸಿಮಯ್ಯ ಅವರ 1046ನೇ ಜಯಂತೋತ್ಸವದಲ್ಲಿ ಮಾತನಾಡಿದ ಅವರು, ಮಹನೀಯರ ಜಯಂತಿಗಳನ್ನು ಕೇವಲ ಒಂದು ದಿನಕ್ಕೆ ಸೀಮಿತ ಮಾಡದೆ ಅವರು ನಡೆದು ಬಂದ ಹಾದಿ ಹಾಗೂ ಅವರು ಸಮಾಜಕ್ಕೆ ಕೊಟ್ಟ ಕೊಡುಗೆಗಳ ಬಗ್ಗೆ ಪ್ರತಿಯೊಬ್ಬರು ಅರಿಯಬೇಕು. ಅವರು ಹಾಕಿಕೊಟ್ಟ ಸನ್ಮಾರ್ಗದಲ್ಲಿ ನಡೆಯಬೇಕು. ಜೊತೆಗೆ ಅದರ ಬಗ್ಗೆ ಸಮಾಜದಲ್ಲಿ ಅರಿವು ಮೂಡಿಸುವಂತಹ ಕೆಲಸ ನಿರಂತರವಾಗಿ ನಡೆಯಬೇಕು ಎಂದರು.

ಗಣ್ಯರ ಜಯಂತಿಗಳನ್ನು ಆಚರಿಸುವ ಸಂದರ್ಭ ಸರ್ವ ಸಮುದಾಯಗಳು ಒಟ್ಟಾಗಿ ಸೇರಿ ಆಚರಿಸುವ ಮೂಲಕ ಗೌರವ ಸಲ್ಲಿಸಬೇಕು. ಆ ಹಾದಿಯಲ್ಲಿ ಹರದನ ಹಳ್ಳಿ ಗ್ರಾಮದ ಶ್ರೀಚೌಡೇಶ್ವರಿ ದೇವಾಂಗ ಸಂಘದವರು ಮಾಡುತ್ತಿರುವ ಕಾರ್ಯ ನಿಜಕ್ಕೂ ಇತರರಿಗೆ ಮಾದರಿಯಾಗಿದೆ ಎಂದ ಅವರು, ದೇವಾಂಗ ಸಮುದಾಯದ ಧಾರ್ಮಿಕ ಹಾಗೂ ಸಾಮಾಜಿಕ ಸೇವಾ ಕಾರ್ಯಗಳಿಗೆ ಸದಾ ನನ್ನ ಸಹಕಾರ ಇರುತ್ತದೆ ಎಂದರು.

ಇದೇ ವೇಳೆ ಗ್ರಾಮದ ಶ್ರೀಚೌಡೇಶ್ವರಿ ದೇವಸ್ಥಾನದಲ್ಲಿ ವಿಶೇಷ ಪೂಜಾ ಕಾರ್ಯಗಳನ್ನು ನೆರವೇರಿಸಿ ನಂತರ ಶ್ರೀದೇವರ ದಾಸಿಮಯ್ಯ ಅವರ ಭಾವಚಿತ್ರವನ್ನು ಬೆಳ್ಳಿ ಪಲ್ಲಕ್ಕಿಯಲ್ಲಿ ಪ್ರತಿಷ್ಠಾಪಿಸಿ ವಿಶೇಷ ಅಲಂಕಾರ ಮಾಡಿ ಹೆಣ್ಣು ಮಕ್ಕಳು ಹಾಗೂ ಮಹಿಳೆಯರು ಪೂರ್ಣ ಕುಂಭ ಕಳಸ ಹೊತ್ತು ವೀರಗಾಸೆ ಸೇರಿದಂತೆ ವಿವಿಧ ಕಲಾತಂಡಗಳೊಂದಿಗೆ ಗ್ರಾಮದ ಮುಖ್ಯ ರಸ್ತೆಯಲ್ಲಿ ಮೆರವಣಿಗೆ ಮಾಡುವ ಮೂಲಕ ಶ್ರೀದೇವರ ದಾಸಿಮಯ್ಯ ಜಯಂತಿಯನ್ನು ಅದ್ಧೂರಿಯಾಗಿ ಆಚರಣೆ ಮಾಡಲಾಯಿತು.

ಜಯಂತಿ ಅಂಗವಾಗಿ ಸಾರ್ವಜನಿಕರಿಗೆ ಪ್ರಸಾದ ವಿನಿಯೋಗ ಮಾಡಲಾಯಿತು. ಕಾರ್ಯಕ್ರಮದಲ್ಲಿ ಯಜಮಾನರಾದ ರಂಗಸ್ವಾಮಿ, ತಮ್ಮಯ್ಯಶೆಟ್ಟಿ, ಶಂಕರಶೆಟ್ಟಿ, ಟೈಲರ್ ತಿಮ್ಮಶೆಟ್ಟಿ, ಗೋವಿಂದಶೆಟ್ಟಿ, ರಾಜಶೆಟ್ಟಿ, ಕೃಷ್ಣಶೆಟ್ಟಿ, ತಾಪಂ ಮಾಜಿ ಅಧ್ಯಕ್ಷ ಹೆಚ್.ಟಿ.ಮಂಜಪ್ಪ, ಗ್ರಾಪಂ ಅಧ್ಯಕ್ಷೆ ಮಂಜುಳಾ, ಮಾಜಿ ಅಧ್ಯಕ್ಷರಾದ ತುಕಾರಾಂ, ಹೆಚ್.ಜೆ.ಗೋಪಾಲ, ದೀಪು, ನಂದಿನಿ, ಸದಸ್ಯರಾದ ಮಂಜುಳಾ, ಜಯರಾಂ, ಶೈಲಜಾ, ಮುಖಂಡರಾದ ತಿ.ನಾಗರಾಜಶೆಟ್ಟಿ, ಬೈಸುರೇಶ್, ಸುಂದರ, ರಾಮಶೆಟ್ಟಿ, ಅಶೋಕ್, ಪ್ರಭು, ವೆಂಕಟೇಶ್, ಶ್ಯಾಮಶೆಟ್ಟಿ, ಲಕ್ಷ್ಮಣ, ದೇವೇಗೌಡ, ಮಹದೇವ, ಕಿಟ್ಟಿ, ಗೋಪಾಲಶೆಟ್ಟಿ, ಹರೀಶ್, ಕು.ವೆಂಕಟೇಶ್, ರಾಜಶೆಟ್ಟಿ, ನಾಗಶೆಟ್ಟಿ, ರಾಮಣ್ಣ, ರಮೇಶ್, ಶ್ರೀಧರ್, ಶಿವಣ್ಣಶೆಟ್ಟಿ, ಶೇಖರ ಶೆಟ್ಟಿ, ಅಪ್ಪಸ್ವಾಮಿಶೆಟ್ಟಿ, ನರಸಿಂಹಶೆಟ್ಟಿ, ನಂದಕುಮಾರ್, ಮೂರ್ತಿ, ಶ್ರೀಚೌಡೇಶ್ವರಿ ಸಂಘದ ಯುವಕರು, ಮಹಿಳೆಯರು, ದೇವಾಂಗ ಸಮಾಜದವರು ಹಾಗೂ ಗ್ರಾಮಸ್ಥರು ಪಾಲ್ಗೊಂಡಿದ್ದರು.

ಐಪಿಎಲ್ ಹಂಗಾಮ

ಜಿಟಿ ವಿರುದ್ಧ ಸೋಲು: ಆರ್‌ಸಿಬಿ ಹ್ಯಾಟ್ರಿಕ್ ಗೆಲುವಿನ ಕನಸು ಭಗ್ನ



ಬೆಂಗಳೂರು, ಏ.2– ಜೋಸ್ ಬಟ್ಲರ್ ಅವರ ಅರ್ಧಶತಕ, ಮೊಹಮ್ಮದ್ ಸಿರಾಜ್ ಅವರ ಮಾರಕ ಬೌಲಿಂಗ್ ದಾಳಿ ನೆರವಿನಿಂದ ರಾಯಲ್ ಚಾಲೆಂಜರ್ಸ್ ಬೆಂಗಳೂರು ವಿರುದ್ಧ ಗುಜರಾತ್ ಟೈಟಾನ್ಸ್ 8 ವಿಕೆಟ್‌ಗಳ ಭರ್ಜರಿ ಗೆಲುವು ಸಾಧಿಸಿದೆ. ಆ ಮೂಲಕ ಆರಂಭಿಕ ಎರಡೂ ಪಂದ್ಯಗಳನ್ನು ಗೆದ್ದು ಹ್ಯಾಟ್ರಿಕ್ ಗೆಲುವಿನ ಕನಸು ಕಂಡಿದ್ದ ಆರ್‌ಸಿಬಿ ಆಸೆಗೆ ತಣ್ಣೀರು ಎರಚಿದೆ.

ಇಲ್ಲಿನ ಎಂ.ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಟಾಸ್ ಸೋತು ಮೊದಲು ಕ್ರೀಸ್‌ಗಿಳಿದಿದ್ದ ಆರ್‌ಸಿಬಿ 20 ಓವರ್‌ಗಳಲ್ಲಿ 8 ವಿಕೆಟ್ ನಷ್ಟಕ್ಕೆ 169 ರನ್ ಗಳಿಸಿತ್ತು. 170 ರನ್‌ಗಳ ಗುರಿ ಬೆನ್ನಟ್ಟಿದ ಗುಜರಾತ್ 17.5 ಓವರ್‌ಗಳಲ್ಲಿ 2 ವಿಕೆಟ್ ನಷ್ಟಕ್ಕೆ 13 ಎಸೆತಗಳು ಬಾಕಿ ಇರುವಂತೆಯೇ ಗೆಲುವು ಸಾಧಿಸಿತು.

ಆರಂಭದಲ್ಲಿ ನಿಧಾನಗತಿ ಬ್ಯಾಟಿಂಗ್ ನಡೆಸಿದ ಗುಜರಾತ್ 32 ರನ್ ಗಳಿಸಿದ್ದ ವೇಳೆ ನಾಯಕ ಶುಭ್‌ಮನ್ ಗಿಲ್ 14 ರನ್‌ಗಳಿಸಿ ವಿಕೆಟ್ ಒಪ್ಪಿಸಿದರು. 2ನೇ ವಿಕೆಟ್‌ಗೆ ಜೊತೆಯಾದ ಸಾಯಿ ಸುದರ್ಶನ್ ಹಾಗೂ ಜೋಸ್ ಬಟ್ಲರ್ 75 ರನ್‌ಗಳ ಜೊತೆಯಾಟವಾಡಿದರು. ಈ ವೇಳೆ 36 ಎಸೆತಗಳಲ್ಲಿ 1 ಸಿಕ್ಸರ್, 7 ಬೌಂಡರಿ ಒಳಗೊಂಡ 49 ರನ್ ಗಳಿಸಿ ನಿರ್ಗಮಿಸಿದರು. ನಂತರ ಬಂದ ರುದರ್‌ಫೋರ್ಡ್ 30 ರನ್ ಗಳಿಸಿದರೇ, ಕಳೆದ ಎರಡೂ ಪಂದ್ಯಗಳಲ್ಲಿ ಬ್ಯಾಟಿಂಗ್ ವೈಫಲ್ಯ ಅನುಭವಿಸಿದ್ದ ಜೋಸ್ ಬಟ್ಲರ್ ಆರ್‌ಸಿಬಿ ವಿರುದ್ಧ ಅಬ್ಬರಿಸಿ ಬೊಬ್ಬರಿದರು. ಅಂತಿಮವಾಗಿ 39 ಎಸೆತಗಳಲ್ಲಿ 5 ಬೌಂಡರಿ, 6 ಸಿಕ್ಸರ್ ಒಳಗೊಂಡ ಒಳಗೊಂಡ 73 ರನ್ ಗಳಿಸಿ ಅಜೇಯ ರಾಗುಳಿದರು. ಆರ್‌ಸಿಬಿ ಪರ ಜೋಸ್ ಹ್ಯಾಸೆಲ್‌ವುಡ್, ಭುವನೇಶ್ವರ್ ಕುಮಾರ್ ತಲಾ ಒಂದೊಂದು ವಿಕೆಟ್ ಉರುಳಿಸಿದರು.

ಇದಕ್ಕೂ ಮುನ್ನಾ ಮೊದಲು ಬ್ಯಾಟಿಂಗ್ ಮಾಡಿದ ಆರ್‌ಸಿಬಿ ಆರಂಭದಿಂದಲೇ ರನ್ ಗಳಿಸಲು ಒದ್ದಾಡಿತು. ಅಲ್ಲದೇ 42 ರನ್ ಆಗುವಷ್ಟರಲ್ಲಿ ಪ್ರಮುಖ 4 ವಿಕೆಟ್ ಕಳೆದುಕೊಂಡು ಸಂಕಷ್ಟಕ್ಕೆ ಸಿಲುಕಿತ್ತು. ಈ ವೇಳೆ ತಾಳ್ಮೆಯ ಆಟ ಆಡಿದ ಲಿಯಾಮ್ ಲಿವಿಂಗ್‌ಸ್ಟೋನ್ ಆಕರ್ಷಕ ಅರ್ಧಶತಕ ಸಿಡಿಸಿದರು. ಅಂತಿಮವಾಗಿ 40 ಎಸೆತಗಳಲ್ಲಿ 54 ರನ್ ಗಳಿಸಿ ವಿಕೆಟ್ ಒಪ್ಪಿಸಿದರು. ಇವರಿಗೆ ಉತ್ತಮ ಸಾಥ್ ನೀಡಿದ ಜಿತೇಶ್ ಶರ್ಮಾ 33 ರನ್ ಗಳಿಸಿ ಔಟಾಗಿ ಪೆವಿಲಿಯನ್‌ನತ್ತ ತೆರಳಿದರು. ಇನ್ನು ಕೊನೆಯಲ್ಲಿ ಸ್ಫೋಟಕ ಬ್ಯಾಟಿಂಗ್ ಮಾಡಿದ ಟಿಂ ಡೇವಿಡ್ 16 ರನ್ ಚಚ್ಚಿ 170 ರನ್‌ಗಳ ಗುರಿ ನೀಡುವಲ್ಲಿ ಯಶಸ್ವಿಯಾದರು.

ಗುಜರಾತ್ ಪರ ಬೌಲಿಂಗ್‌ನಲ್ಲಿ ಮೊಹಮ್ಮದ್ ಸಿರಾಜ್ 3, ಸಾಯಿ ಕಿಶೋರ್ 2, ಪ್ರಸಿದ್ ಕೃಷ್ಣ, ಅರ್ಷದ್ ಖಾನ್ ಮತ್ತು ಇಶಾಂತ್ ಶರ್ಮಾ ತಲಾ ಒಂದೊಂದು ವಿಕೆಟ್ ಪಡೆದು ಮಿಂಚಿದರು. ಮೊಹಮ್ಮದ್ ಸಿರಾಜ್ ಪಂದ್ಯಶ್ರೇಷ್ಠ ಪ್ರಶಸ್ತಿ ಪಡೆದರು.

ತಂಡದ ಅಂಕಪಟ್ಟಿ ವಿವರ

ತಂಡ	ಪಂದ್ಯಗಳು	ಗೆಲುವು	ಸೋಲು	ಡ್ರಾ	ಅಂಕ
ಪಂಜಾಬ್	2	2	0	0	4
ಡೆಲ್ಲಿ	2	2	0	0	4
ಬೆಂಗಳೂರು	3	2	1	0	4
ಗುಜರಾತ್	3	2	1	0	4
ಮುಂಬೈ	3	1	2	0	2
ಲಕ್ನೋ	3	1	2	0	2
ಚೆನ್ನೈ	3	1	2	0	2
ಹೈದರಾಬಾದ್	3	1	2	0	2
ರಾಜಸ್ಥಾನ್	3	1	2	0	2
ಕೋಲ್ಕತ್ತಾ	3	1	2	0	2

ಇಂದಿನ ಪಂದ್ಯ

ಕೋಲ್ಕತ್ತಾ ನೈಟ್ ರೈಡರ್ಸ್
v/s
ಸನ್‌ರೈಸರ್ಸ್ ಹೈದರಾಬಾದ್

ಸಮಯ: ಸಂಜೆ 7.30

ಸ್ಥಳ : ಈಡನ್ ಗಾರ್ಡನ್ ಕ್ರೀಡಾಂಗಣ, ಕೋಲ್ಕತ್ತಾ

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ವೀರ ಧೀರ ಶೂರನ್–2 (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಮನದ ಕಡಲು (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಸಿಕಂದರ್ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಬ್ಯಾಡ್ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಅಪ್ಪು (ಕ)	4 ಪ್ರದರ್ಶನಗಳು
ರಾಜಕಮಲ್	
L2 ಎಂಪುರಾನ್ (ತ)	4 ಪ್ರದರ್ಶನಗಳು
ಸಂಗಂ	
ಸಿಕಂದರ್ (ಹಿಂ)	4 ಪ್ರದರ್ಶನಗಳು
ಲಿಡೋ	
ಫಾರೆಸ್ಟ್(ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಭಗೀರಥ (ಕ)	4 ಪ್ರದರ್ಶನಗಳು
ಪ್ರಭಾ	
ಭಗೀರಥ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1 ಡಿಸ್ನಿ ಸ್ನೋ ವೈಟ್ (ಇಂ): ಬೆ.9.55ಕ್ಕೆ, ಮ.12.20ಕ್ಕೆ, ಮ.2.40ಕ್ಕೆ, ಸಂ.5ಕ್ಕೆ, ದಿ ಡಿಪ್ಲೊಮೆಟ್ (ಹಿಂ): ರಾ.7.20ಕ್ಕೆ, ಯಾರಿಯನ್ (ಹಿಂ): ರಾ.10.10ಕ್ಕೆ.

ಸ್ಕ್ರೀನ್ 2 ಬರ್ಗೆಟ್ ಬಸ್ಯಾ (ಕ): ಬೆ.10.20ಕ್ಕೆ, ಅಸ್ತ್ರಂ (ತ): ಮ.1.10ಕ್ಕೆ, ಕೋರ್ಟ್ ಸ್ಟೇಟ್ V/s ಎ ನೋಬಡಿ (ತೆ): ಮ.3.55ಕ್ಕೆ, ತುಮ್ಕೊ ಮೇರಿ ಕಸಮ್ (ಹಿಂ): ರಾ.7ಕ್ಕೆ, ರಾ.10.20ಕ್ಕೆ.

ಸ್ಕ್ರೀನ್ 3 ಬಳ್ಳಾರಿ ಜಿಲ್ಲೆ ಬಳ್ಳಾರಿ ತಾಲೂಕು ಗ್ರಾಮ ಯಾಳ್ಪಿ (ಕ): ಬೆ.10.35ಕ್ಕೆ, ಡ್ರ್ಯಾಗನ್ (ತ): ಮ.1.05ಕ್ಕೆ, ಪಿಂಟು ಕಿ ಪಪ್ಪಿ (ಹಿಂ): ಸಂ.4.15ಕ್ಕೆ, ಛಾವಾ (ಹಿಂ): ರಾ.7ಕ್ಕೆ, ಘಾತಕ್ (ಹಿಂ): ಬೆ.10.15ಕ್ಕೆ.

ಸ್ಕ್ರೀನ್ 4 ಡ್ರ್ಯಾಗನ್ (ತ): ಬೆ.10.20ಕ್ಕೆ, ಅಪ್ಪು (ಕ): ಮ.1.30ಕ್ಕೆ, ಷಣ್ಮುಖ (ತೆ): ಸಂ.4.15ಕ್ಕೆ, ರಾ.9.45ಕ್ಕೆ, ಡಿಸ್ನಿ ಸ್ನೋ ವೈಟ್ (ಇಂ): ರಾ.7.05ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1 ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.

ಸ್ಕ್ರೀನ್ 2 ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.

ಸ್ಕ್ರೀನ್ 3 ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.

ಸ್ಕ್ರೀನ್ 4 ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1 ಫಾರೆಸ್ಟ್ (ಕ): ಮ.1.45ಕ್ಕೆ, ಬಳ್ಳಾರಿ ಜಿಲ್ಲೆ ಬಳ್ಳಾರಿ ತಾಲೂಕು ಗ್ರಾಮ ಯಾಳ್ಪಿ (ಕ): ಸಂ.6.35ಕ್ಕೆ ಅಸ್ತ್ರಂ (ತ): ರಾ.7ಕ್ಕೆ, ಷಣ್ಮುಖ (ತೆ): ರಾ.9.15ಕ್ಕೆ.

ಸ್ಕ್ರೀನ್ 2 ಪಿಂಟು ಕಿ ಪಪ್ಪಿ (ಹಿಂ): ಮ.1.15ಕ್ಕೆ, ಮ.3.55ಕ್ಕೆ, ಛಾವಾ (ಹಿಂ): ಸಂ.6.30ಕ್ಕೆ, ತುಮ್ಕೊ ಮೇರಿ ಕಸಮ್ (ಹಿಂ): ರಾ.9.30ಕ್ಕೆ.

ಸ್ಕ್ರೀನ್ 3 ಡಿಸ್ನಿ ಸ್ನೋ ವೈಟ್ (ಇಂ): ಮ.1.30ಕ್ಕೆ, ಸಂ.4.05ಕ್ಕೆ, ರಾ.9.20ಕ್ಕೆ, ತುಮ್ಕೊ ಮೇರಿ ಕಸಮ್ (ಹಿಂ): ಸಂ.6.15ಕ್ಕೆ.

ಪಿವಿಆರ್ ಸಿನಿಮಾಸ್
PVR CINEMAS
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಬಂಡೀಪುರ ಹೆದ್ದಾರಿ ರಾತ್ರಿ ವಾಹನ ಸಂಚಾರ ನಿಷೇಧ ಮುಂದುವರಿಕೆಗೆ ಆಗ್ರಹಿಸಿ

ಏ.6ರಂದು ಪರಿಸರವಾದಿಗಳ ಪಾದಯಾತ್ರೆ



ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶ ದ್ವಾರ.

ಮೈಸೂರು, ಏ.2(ಎಂಟಿವೈ)–ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ನಡುವೆ ಹಾದು ಹೋಗಿರುವ ಎರಡು ರಾಷ್ಟ್ರೀಯ ಹೆದ್ದಾರಿಗಳಲ್ಲಿ ರಾತ್ರಿ ವಾಹನ ಸಂಚಾರಕ್ಕೆ ಹೇರಿರುವ ನಿರ್ಬಂಧ ತೆರವು ಮಾಡಿಸಲು ಕೇರಳ ಮತ್ತೊಮ್ಮೆ ಲಾಬಿ ಆರಂಭಿಸಿದ್ದು, ಕರ್ನಾಟಕ ಸರ್ಕಾರ ಯಾವುದೇ ಕಾರಣಕ್ಕೂ ರಾತ್ರಿ ಸಂಚಾರ ನಿರ್ಬಂಧ ಹಿಂಪಡೆಯದಂತೆ ಆಗ್ರಹಿಸಿ ಪರಿಸರವಾದಿಗಳು ಏ.6ರಂದು ಬೃಹತ್ ಪಾದಯಾತ್ರೆ ನಡೆಸಲು ಉದ್ದೇಶಿಸಿದ್ದಾರೆ.

ಈ ಎರಡು ರಸ್ತೆಯಲ್ಲಿ ರಾತ್ರಿ 9ಗಂಟೆಯಿಂದ ಬೆಳಗ್ಗೆ 6 ಗಂಟೆವರೆಗೆ ವಾಹನ ಸಂಚಾರ ನಿರ್ಬಂಧಿಸಲಾಗಿತ್ತು. ಈ ವಿವಾದ ಸುಪ್ರೀಂಕೋರ್ಟ್ ಮೆಟ್ಟಿಲೇರಿದ್ದರಿಂದ 2009ರಲ್ಲಿ ಸುಪ್ರೀಂಕೋರ್ಟ್ ರಾತ್ರಿ ವೇಳೆ ವಾಹನ ಸಂಚಾರ ನಿಷೇಧಿಸುವ ಮಹತ್ವದ ತೀರ್ಪು ನೀಡಿತ್ತು. ಆದರೂ ರಾತ್ರಿ ವಾಹನ ಸಂಚಾರಕ್ಕೆ ಅವಕಾಶ ಮಾಡಿಕೊಡುವಂತೆ ಕೇರಳ ಸರ್ಕಾರ ಪದೇ ಪದೆ ಒತ್ತಡ ಹೇರುತ್ತಿದ್ದು, ಇದೀಗ ಮತ್ತೊಮ್ಮೆ ರಾಜಕೀಯ ಪಗಡೆಯಾಟ ಆರಂಭಿಸಿದ್ದು, ಅದಕ್ಕೆ ರಾಜ್ಯ ಸರ್ಕಾರ ಸಮ್ಮತಿಸಬಹುದೆಂಬ ಅನುಮಾನ ಪರಿಸರವಾದಿಗಳಲ್ಲಿ ಮನೆ ಮಾಡಿರುವುದರಿಂದ ಇದೀಗ ಜನರಲ್ಲಿ ಜಾಗೃತಿ ಮೂಡಿಸಲು ಮುಂದಾಗಿದ್ದಾರೆ.

ಇತ್ತೀಚೆಗೆ ದೆಹಲಿಯಲ್ಲಿ ಅರಣ್ಯ ಸಚಿವ ಈಶ್ವರ್ ಬಿ.ಖಂಡ್ರೆ ಅವರು, 'ಬಂಡೀಪುರ ರಾತ್ರಿ ಸಂಚಾರ ನಿರ್ಬಂಧ ವಿಷಯ ಅತ್ಯಂತ ಸೂಕ್ಷ್ಮವಾಗಿದ್ದು, ಮುಖ್ಯಮಂತ್ರಿಯವರೊಂದಿಗೆ ಸಮಾಲೋಚಿಸಿ, ಕಾನೂನು ತಜ್ಞರ ಅಭಿಪ್ರಾಯ ಪಡೆದು ಸರ್ವಸಮ್ಮತ ನಿರ್ಧಾರ ಕೈಗೊಳ್ಳಲಾಗುವುದು. ಪ್ರಸ್ತುತ ಈ ಪ್ರಕರಣ ಸುಪ್ರೀಂಕೋರ್ಟ್‌ನಲ್ಲಿದ್ದು, ಪ್ರಸ್ತುತ ರಾತ್ರಿ 9ರಿಂದ ಬೆಳಗ್ಗೆ 6ಗಂಟೆಯವರೆಗೆ ನಿರ್ಬಂಧ ಜಾರಿಯಲ್ಲಿದೆ. ಹೊಸ ಪ್ರಕರಣಕ್ಕೆ ಸಂಬಂಧಿಸಿದಂತೆ ಎರಡೂ ರಾಜ್ಯಗಳ ಬಾಂಧವ್ಯವನ್ನು ಗಮನದಲ್ಲಿಟ್ಟುಕೊಂಡು, ಎಲ್ಲರೊಂದಿಗೆ ಚರ್ಚಿಸಿ ಸೂಕ್ತವಾದ ತೀರ್ಮಾನ ಮಾಡಲು ಕ್ರಮ ವಹಿಸಲಾಗುವುದು ಎಂದು ಹೇಳಿಕೆ ನೀಡಿದ್ದು, ರಾತ್ರಿ ಸಂಚಾರ ನಿಷೇಧ ಮುಂದುವರಿಕೆಗೆ ಸಂಬಂಧಿಸಿದಂತೆ ಮತ್ತೆ ಹೋರಾಟ ಆರಂಭವಾಗುತ್ತಿದೆ.

ಪಾದಯಾತ್ರೆ: ಬಂಡೀಪುರ ಅರಣ್ಯದಲ್ಲಿ ಹಾದು ಹೋಗಿರುವ ರಸ್ತೆಯಲ್ಲಿ ರಾತ್ರಿ 9 ಗಂಟೆಯಿಂದ ಬೆಳಗ್ಗೆ 6 ಗಂಟೆವರೆಗೆ ವಾಹನ ಸಂಚಾರ ನಿಷೇಧಿಸಿರುವ ಕ್ರಮವನ್ನು ಮುಂದುವರೆಸುವಂತೆ ಆಗ್ರಹಿಸಿ ಜನರಲ್ಲಿ ಜಾಗೃತಿ ಮೂಡಿಸಲು ಏ.6ರಂದು ಪಾದಯಾತ್ರೆ ನಡೆಸಲು ಪರಿಸರವಾದಿಗಳು ನಿರ್ಧರಿಸಿದ್ದಾರೆ. ರಾಷ್ಟ್ರೀಯ ಹೆದ್ದಾರಿ 766ನಲ್ಲಿರುವ ಗುಂಡ್ಲುಪೇಟೆ ತಾಲೂಕಿನ ಕಗ್ಗಲಗೂಡು ಗ್ರಾಮದ ಬಳಿಯಿಂದ ಮೂರು ಕಿ.ಮೀ ದೂರದಲ್ಲಿರುವ ಮದ್ದೂರು ಚೆಕ್‌ಪೋಸ್ಟ್‌ವರೆಗೂ ಪಾದಯಾತ್ರೆ ನಡೆಸಿ, ರಾತ್ರಿ ಸಂಚಾರ ನಿಷೇಧದ ಮಹತ್ವದ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸಲಿದ್ದಾರೆ. ಈ ಪಾದಯಾತ್ರೆಯಲ್ಲಿ ಮೈಸೂರು, ಬೆಂಗಳೂರು, ಗುಂಡ್ಲುಪೇಟೆ ತಾಲೂಕಿನ ವಿವಿಧೆಡೆಯಿಂದ ಪರಿಸರ ಪ್ರೇಮಿಗಳು ಆಗಮಿಸಲಿದ್ದಾರೆ. ಅಲ್ಲದೆ, ಕೇರಳದಿಂದಲೂ ಪರಿಸರವಾದಿಗಳು ಈ ಹೋರಾಟದಲ್ಲಿ ಪಾಲ್ಗೊಳ್ಳಲು ಬಯಸಿದ್ದಾರೆ.

ಕೆಎಸ್‌ಆರ್‌ಟಿಸಿ ಬಸ್ ಚಾಲಕನ ಮೇಲೆ ಹಲ್ಲೆ

ಮೈಸೂರು, ಏ.2(ಎಸ್‌ಪಿಎನ್)–ದಾರಿ ಬಿಡದೆ ಬೈಕಿನಲ್ಲಿ ಮುಂದೆ ಹೋಗಲು ಸತಾಯಿಸಿದ್ದನ್ನು ಪ್ರಶ್ನಿಸಿದ ಕೆಎಸ್‌ಆರ್‌ಟಿಸಿ ಬಸ್ ಚಾಲಕನ ಮೇಲೆ ಬೈಕ್ ಸವಾರ ಹಲ್ಲೆ ನಡೆಸಿರುವ ಘಟನೆ ಗನ್ ಹೌಸ್ ವೃತ್ತದ ಬಳಿ ನಡೆದಿದೆ.

ಕೆಎಸ್‌ಆರ್‌ಟಿಸಿ ಚಾಲಕ ಶೇಖರ್ ಹಲ್ಲೆಗೊಳಗಾದವರು. ಮಾ.29 ರಂದು ಮಧ್ಯಾಹ್ನ ಚಾಲಕ ಶೇಖರ್ ಕೆಎಸ್‌ಆರ್‌ಟಿಸಿ ಬಸ್ ಚಾಲನೆ ಮಾಡಿಕೊಂಡು ಪ್ರಯಾಣಿಕರನ್ನು ಕರೆದೊಯ್ಯುತ್ತಿದ್ದರು. ಈ ವೇಳೆ ನಂಜನಗೂಡು ರಸ್ತೆಯ ಅರಮನೆ ಮುಂಭಾಗ ಮಧು ಎಂಬಾತ ಬೈಕ್‌ನಲ್ಲಿ ತೆರಳುತ್ತಿದ್ದ. ಬಸ್‌ಗೆ ದಾರಿ ಬಿಡದೆ ಸತಾಯಿಸುತ್ತಿದ್ದ. ಹೀಗಾಗಿ ಚಾಲಕ ಶೇಖರ್ ಸತತವಾಗಿ ಹಾರನ್ ಮಾಡಿದ್ದಾರೆ. ಆದರೂ ಬೈಕ್ ಸವಾರ ಮಧು ಬಸ್ ಮುಂದೆ ಹೋಗಲು ಅನುವು ಮಾಡಿಕೊಡಲಿಲ್ಲ. ಮತ್ತೆ ಬಸ್ ಚಾಲಕ ಹಾರನ್ ಮಾಡಿದ್ದಕ್ಕೆ ಕೋಪಗೊಂಡ ಮಧು, ಬಸ್‌ಗೆ ಅಡ್ಡಲಾಗಿ ಬೈಕ್ ನಿಲ್ಲಿಸಿ, ಚಾಲಕ ನೊಂದಿಗೆ ಜಗಳಕ್ಕಿಳಿದಿದ್ದಾನೆ. ನಂತರ ಬೈಕ್ ಕೀಲಿ ಮೂಲಕ ಆತನ ಮೇಲೆ ಹಲ್ಲೆ ನಡೆಸಿದ್ದಾನೆ. ನಂತರ ನಿರ್ವಾಹಕ ಅರುಣ್ ಹಾಗೂ ಪ್ರಯಾಣಿಕರು ಮಧ್ಯ ಪ್ರವೇಶಿಸಿ ಜಗಳ ಬಿಡಿಸಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ. ಬಸ್ ಚಾಲಕ ಶೇಖರ್ ನೀಡಿದ ದೂರಿನ ಮೇರೆಗೆ ಶೇಖರ್ ವಿರುದ್ಧ ದೇವರಾಜ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಧನಗಳ್ಳಿ ಕೃಷಿ ಪತ್ತಿನ ಸಹಕಾರ ಸಂಘಕ್ಕೆ ಆಯ್ಕೆ



ಮಹದೇವು



ರವಿಕುಮಾರ್



ಪ್ರಭಾಕರ



ಮಾದನಾಯಕ

ಮೈಸೂರು, ಏ.2– ಮೈಸೂರು ತಾಲೂಕು ಜಯಪುರ ಹೋಬಳಿ ಧನಗಳ್ಳಿ ಕೃಷಿ ಪತ್ತಿನ ಸಹಕಾರ ಸಂಘದ ನಿರ್ದೇಶಕರಾಗಿ ದೊಡ್ಡಹುಂಡಿ ಮೊ.ಬಿ.ಮಹದೇವು, ಡಿ.ಸಾಲುಂಡಿ ಬಿ.ರವಿಕುಮಾರ್, ಪ್ರಭಾಕರ, ಮಾದನಾಯಕ ಆಯ್ಕೆಯಾಗಿದ್ದಾರೆ.

ನಿವೃತ್ತ ಪ್ರಾಧ್ಯಾಪಕ ಪ್ರೊ.ರಮೇಶ್ ಅವರಿಗೆ ಅಭಿನಂದನೆ



ನಿವೃತ್ತರಾದ ಮೈಸೂರು ವಿವಿ ಕಾನೂನು ಅಧ್ಯಯನ ವಿಭಾಗದ ಹಿರಿಯ ಪ್ರಾಧ್ಯಾಪಕ ಡಾ.ರಮೇಶ್ ಅವರನ್ನು ಹಿರಿಯ ವಿದ್ಯಾರ್ಥಿಗಳು ಅಭಿನಂದಿಸಿದರು.

ಮೈಸೂರು, ಏ.2– ಮೈಸೂರು ವಿಶ್ವವಿದ್ಯಾನಿಲಯ ಕಾನೂನು ಅಧ್ಯಯನ ಮತ್ತು ಸಂಶೋಧನಾ ವಿಭಾಗದ ಹಿರಿಯ ಪ್ರಾಧ್ಯಾಪಕ ಡಾ.ರಮೇಶ್ ಸೇವೆಯಿಂದ ವಯೋನಿವೃತ್ತಿ ಹೊಂದಿದ ಹಿನ್ನೆಲೆಯಲ್ಲಿ ಹಳೆಯ ವಿದ್ಯಾರ್ಥಿಗಳು ಹಾಗೂ ಸಂಶೋಧನಾ ವಿದ್ಯಾರ್ಥಿಗಳ ತಂಡ ಮತ್ತು ಕಾನೂನು ಅಧ್ಯಯನ ವಿಭಾಗದ ಸಹಯೋಗದೊಂದಿಗೆ ಇಂದು ಮಾನಸಗಂಗೋತ್ರಿಯ ವಿಜ್ಞಾನಭವನದಲ್ಲಿ ಸನ್ಮಾನಿಸಿದರು.

ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿದ್ದ ಕರ್ನಾಟಕ ಹೈಕೋರ್ಟ್‌ನ ನಿವೃತ್ತ ನ್ಯಾಯಾಧೀಶರು ಮತ್ತು ಕರ್ನಾಟಕ ಭೂಕಬಳಿಕೆ ನಿಷೇಧ ವಿಶೇಷ ನ್ಯಾಯಾಲಯಗಳ ಗೌರವಾನ್ವಿತ ನ್ಯಾಯಮೂರ್ತಿಗಳಾದ ಬಿ.ಎ.ಪಾಟೀಲ್‌ರು, ಪ್ರಾಧ್ಯಾಪಕ ಡಾ. ರಮೇಶ್‌ರವರ ಸೇವಾ ಕಾರ್ಯಗಳನ್ನು ಶ್ಲಾಘಿಸಿ, ಮೆಚ್ಚುಗೆ ವ್ಯಕ್ತಪಡಿಸಿದರು.


ವಿದ್ಯಾರ್ಥಿಗಳು ಕಾನೂನಿನ ಅರಿವು ಮತ್ತು ನೆರವನ್ನು ಹೆಚ್ಚು ಹೆಚ್ಚು ತಿಳಿದುಕೊಂಡು ಸಮಾಜಕ್ಕೆ ತಿಳಿಯಪಡಿಸಬೇಕೆಂದು ಹೇಳಿದರು. ಪ್ರಸ್ತುತ ದಿನಗಳಲ್ಲಿ ಕಾನೂನು ಎಲ್ಲರಿಗೂ ಗೊತ್ತಿರಬೇಕು. ಅದನ್ನು ತಿಳಿಸಲು ಹಕ್ಕು ಕಾನೂನು ವಿಭಾಗ ಮತ್ತು ಕಾನೂನು ಪಡೆದ ಪದವೀಧರರು ಮುಂದಾಗಬೇಕೆಂದು ಅಭಿಪ್ರಾಯಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ. ಲೋಕನಾಥ್.ಎನ್.ಕೆ ವಹಿಸಿದ್ದರು.

ಆಹಾರ ಮತ್ತು ನಾಗರಿಕ ಸರಬರಾಜು ನಿವೃತ್ತ ಜಿಲ್ಲಾ ವ್ಯವಸ್ಥಾಪಕ ಸಿ.ಎಂ. ವೆಂಕಟರಾಮು, ಕಾಡಾ ಮಾಜಿ ಅಧ್ಯಕ್ಷ ದೇವನೂರು ಶಿವಮಲ್ಲು ಅತಿಥಿಗಳಾಗಿ ಉಪಸ್ಥಿತರಿದ್ದರು. ಕರ್ನಾಟಕ ಹೈಕೋರ್ಟ್‌ನ ವಕೀಲರು ಮತ್ತು ಅಭಿನಂದನಾ ಸಮಿತಿಯ ಅಧ್ಯಕ್ಷ ಡಾ.ಜಗದೀಶ್ ಹಾಲಶೆಟ್ಟಿ ಸ್ವಾಗತ ಭಾಷಣ ಮಾಡಿದರು. ಕಾರ್ಯಕ್ರಮದಲ್ಲಿ ವಿದ್ಯಾವರ್ಧಕ ಕಾನೂನು ಕಾಲೇಜಿನ ಸಹಾಯಕ ಪ್ರಾಧ್ಯಾಪಕರಾದ ಡಾ.ಪ್ರಕೃತಿ.ಎ ಹಾಗೂ ಹೊಳೇನರಸೀಪುರ ಸರ್ಕಾರಿ ಕಾನೂನು ಕಾಲೇಜಿನ ಸಹ ಪ್ರಾಧ್ಯಾಪಕರಾದ ಡಾ.ಮಡಿವಾಲಪ್ಪ ಮಟ್ಟೋಳಿ ರಚಿಸಿದ ವಿಶೇಷ ಕಾನೂನು ಪುಸ್ತಕಗಳನ್ನು ಬಿಡುಗಡೆಗೊಳಿಸಲಾಯಿತು.

ವಿದ್ಯಾವಿಕಾಸ ಕಾನೂನು ಕಾಲೇಜಿನ ಸಹಾಯಕ ಪ್ರಾಧ್ಯಾಪಕರಾದ ಶ್ರೀಮತಿ ಭಾಗ್ಯಮ್ಮ.ಜಿ ಬರೆದಿರುವ 'ದಿ ಅಕಾಡೆಮಿಕ್ ಬಯೋಗ್ರಫಿ ಆಫ್ ಡಾಕ್ಟರ್ ರಮೇಶ್' ಸಂಶೋಧನಾ ಗ್ರಂಥವನ್ನು ಬಿಡುಗಡೆ ಮಾಡಲಾಯಿತು. ಪ್ರೊ.ಮಡಿವಾಲಪ್ಪಮಟ್ಟೋಳಿ. ಡಾ.ರಮೇಶ್, ಹೈಕೋರ್ಟ್ ವಕೀಲರಾದ ಶ್ರೀಮತಿ ಸಹನಾ ಗೋಪಾಲ್, ವಿದ್ಯೋದಯ ಕಾನೂನು ಕಾಲೇಜಿನ ಸಹಾಯಕ ಪ್ರಾಧ್ಯಾಪಕ ಡಾ.ಎನ್. ಮುದ್ದುರಾಜು ಇತರರು ಉಪಸ್ಥಿತರಿದ್ದರು.

ಮೈಸೂರಲ್ಲಿ ಗುಡುಗು–ಮಿಂಚಿನೊಂದಿಗೆ ಆರಂಭದಲ್ಲಿ ಆರ್ಭಟಿಸಿ ಮರೆಯಾದ ಮಳೆ



ಮೈಸೂರಿನ ವಿಶ್ವಮಾನವ ಜೋಡಿ ರಸ್ತೆಯಲ್ಲಿ ಬುಧವಾರ ರಾತ್ರಿ ಮಳೆ ನಡುವೆ ಸಾಗುತ್ತಿರುವ ವಾಹನ ಸವಾರರನ್ನು ಚಿತ್ರದಲ್ಲಿ ಕಾಣಬಹುದು.

ಮೈಸೂರು, ಏ.2(ಪಿಎಂ)– ನಗರದ ಹೃದಯ ಭಾಗವಾದ ಕೆಆರ್ ವೃತ್ತದ ಸುತ್ತಮುತ್ತ ಸೇರಿದಂತೆ ವಿವಿಧ ಬಡಾವಣೆಗಳಲ್ಲಿ ಬುಧವಾರ ರಾತ್ರಿ ಸುಮಾರು 20 ನಿಮಿಷಗಳ ಕಾಲ ಮಳೆಯಾಗಿದ್ದು, ಬೇಸಿಗೆ ಬಿಸಿಲಿನ ತಾಪದಿಂದ ಬಸವಳಿದಿರುವ ನಗರದ ಜನತೆಗೆ ಒಂದಿಷ್ಟು ತಣ್ಣನೆಯ ಅನುಭವ ನೀಡಿ ವರುಣ ಮರೆಯಾಗಿದ್ದಾನೆ. ರಾತ್ರಿ ಸುಮಾರು 8 ಗಂಟೆ ವೇಳೆಗೆ ಗಡುಗು ಮಿಂಚಿನಿಂದ ಆರಂಭಗೊಂಡ ಮಳೆ, ಆರಂಭದಲ್ಲಿ ರಭಸದಿಂದ ಸುರಿದಿದೆ. ಇನ್ನೇನು ಭಾರಿ ಮಳೆಯಾಗುತ್ತದೆ ಎಂದು ಕೊಳ್ಳುವಷ್ಟರಲ್ಲೇ ತುಂತುರು ಹನಿಗಳ ಹಾಕಿ ಮಾಯವಾಗಿದೆ. ತಾಪಮಾನ ದಿನೇ ದಿನೆ ಏರಿಕೆಯಾಗುತ್ತಿದ್ದು, ಬಿಸಿಲಿನ ಬೇಗೆಯಿಂದ ಕಂಗಾಲಾಗಿರುವ ನಗರದ ಜನತೆಯು ಮಳೆಯ ಆರಂಭದ ಆರ್ಭಟ ನೋಡಿ ಭಾರೀ ಮಳೆಯಾಗುವ ಮೂಲಕ ತಂಪೆರೆಯಲಿದೆ ಎಂಬ ನಿರೀಕ್ಷೆ ಹೊಂದಿದ್ದರು. ಆದರೆ ಅದು ಹುಸಿಯಾಗಿದೆ.

ಮುಂದಿನ ಎರಡು ದಿನಗಳಲ್ಲಿ ಜಿಲ್ಲೆಯಲ್ಲಿ ಮಳೆಯಾಗುವ ಬಗ್ಗೆ ಹವಾಮಾನ ಇಲಾಖೆ ಮುನ್ಸೂಚನೆ ನೀಡಿತ್ತು. ಅಂತೆಯೇ ಇಂದು ರಾತ್ರಿ ಹಗುರ ಮಳೆಯಾಗಿದೆ. ಮಧ್ಯಾಹ್ನದಿಂದಲೂ ಆಗಾಗ್ಗೆ ಮೋಡ ಕವಿದ ವಾತಾವರಣ ನಿರ್ಮಾಣವಾಗುತ್ತಿದ್ದರೂ ರಾತ್ರಿಯವರೆಗೆ ಮಳೆ ಬಂದಿರಲಿಲ್ಲ. ಆದರೆ ರಾತ್ರಿ ಹೊತ್ತಿಗೆ ಬಂದ ಮಳೆಯು ನಗರದ ಕೆಲ ಭಾಗಗಳಲ್ಲಿ ರಸ್ತೆಯಲ್ಲಿ ನೀರು ನಿಲ್ಲುವಷ್ಟು ಸುರಿದಿದೆ. ಜನತಾನಗರ, ಟಿ.ಕೆ.ಬಡಾವಣೆ, ಸರಸ್ವತಿಪುರಂ, ಕುವೆಂಪುನಗರ, ವಿದ್ಯಾರಣ್ಯಪುರಂ, ಸಿದ್ಧಾರ್ಥ ಬಡಾವಣೆ, ಆಲನಹಳ್ಳಿ, ಯರಗನಹಳ್ಳಿ ಸೇರಿದಂತೆ ನಗರದ ಬಹುತೇಕ ಭಾಗದಲ್ಲಿ ಮಳೆಯಾಗಿದೆ.

ಏ.6ರವರೆಗೆ ಮಳೆ: ಮೈಸೂರು, ಕೊಡಗು, ಮಂಡ್ಯ ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ಏ.6ರವರೆಗೆ ಮೋಡ ಕವಿದ ವಾತಾವರಣ ಇರಲಿದ್ದು, ತುಂತುರು ಮಳೆ ಬರುವ ಸಾಧ್ಯತೆ ಇದೆ ಎಂದು ಭಾರತೀಯ ಹವಾಮಾನ ಇಲಾಖೆ ಮುನ್ಸೂಚನೆ ನೀಡಿರುವುದಾಗಿ ನಾಗನಹಳ್ಳಿ ಕೃಷಿ ಹವಾಮಾನ ಕ್ಷೇತ್ರ ವಿಭಾಗದ ಪ್ರಕಟಣೆ ತಿಳಿಸಿದೆ.

ಐಚರ್‌ಗೆ ಕಾರು ಡಿಕ್ಕಿ: ಇಬ್ಬರು ಸಾವು

ಬೆಂಗಳೂರು–ಮೈಸೂರು ರಸ್ತೆಯಲ್ಲಿ ದುರಂತ

ಮೈಸೂರು, ಏ.2(ಎಸ್‌ಪಿಎನ್)– ಐಚರ್ ವಾಹನಕ್ಕೆ ಕಾರು ಡಿಕ್ಕಿ ಹೊಡೆದ ಪರಿಣಾಮ ಕಾರಿನ ಚಾಲಕ ಸೇರಿ ಇಬ್ಬರು ಸಾವನ್ನಪ್ಪಿ, ಮತ್ತೊಬ್ಬರು ಗಾಯಗೊಂಡಿರುವ ಘಟನೆ ಮೈಸೂರು–ಬೆಂಗಳೂರು ರಸ್ತೆಯ ಕಳಸ್ತವಾಡಿ ಗೇಟ್ ಬಳಿ ನಡೆದಿದೆ.

ಗುಜರಾತ್ ಮೂಲದ ಮುಕುಂದ್(30), ಸಂದೀಪ್(30) ಮೃತಪಟ್ಟವರು. ಕಾರಿನಲ್ಲಿದ್ದ ಮತ್ತೋರ್ವ ಪೂಜಾ ಸಹಾನಿ(26) ಕಣ್ಣಿಗೆ ಗಾಜಿನ ಚೂರು ತಾಗಿ ಗಾಯಗಳಾಗಿದ್ದು, ಮೈಸೂರಿನ ಖಾಸಗಿ ಆಸ್ಪತ್ರೆಯಲ್ಲಿ ಶಸ್ತ್ರಚಿಕಿತ್ಸೆಗೆ ಒಳಗಾಗಿದ್ದಾರೆ ಎಂದು ಎನ್.ಆರ್.ಸಂಚಾರ ಠಾಣೆ ಇನ್ಸ್‌ಪೆಕ್ಟರ್ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ಮಾ.28 ರಂದು ಬೆಳಿಗ್ಗೆ ಮುಕುಂದ್ ಹಾಗೂ ಇನ್ನಿತರರು ಹುಂಡೈ ಅಸೆಂಟ್ ಕಾರಿನಲ್ಲಿ ಬೆಂಗಳೂರು ಕಡೆಯಿಂದ ಮೈಸೂರಿಗೆ ಬರುತ್ತಿದ್ದರು. ಈ ವೇಳೆ ಕಾರು ಚಾಲಕನ ನಿಯಂತ್ರಣ ತಪ್ಪಿ ಐಚರ್ ವಾಹನಕ್ಕೆ ಡಿಕ್ಕಿ ಹೊಡೆದಿದೆ. ಇದರಿಂದಾಗಿ ಕಾರಿನಲ್ಲಿದ್ದ ಮೂವರಿಗೂ ಗಂಭೀರ ಗಾಯಗಳಾಗಿದ್ದವು. ತಲೆಯ ಭಾಗಕ್ಕೆ ಪೆಟ್ಟಾದ ಕಾರಣ ಮುಕುಂದ್ ಸ್ಥಳದಲ್ಲೇ ಮೃತಪಟ್ಟರೇ, ಸಂದೀಪ್ ಬೆಂಗಳೂರಿನ ಆಸ್ಪತ್ರೆಗೆ ಸಾಗಿಸುವ ಮಾರ್ಗ ಮಧ್ಯೆ ಮೃತಪಟ್ಟಿದ್ದಾರೆ. ವಾರದ ರಜೆ ಕಳೆಯಲು ಈ ಮೂವರು ಟೆಕ್ಕಿಗಳು ಮೈಸೂರಿಗೆ ಆಗಮಿಸಿದ್ದ ವೇಳೆ ಈ ಘಟನೆ ನಡೆದಿದೆ. ಈ ಸಂಬಂಧ ಎನ್.ಆರ್. ಸಂಚಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ರೈತರಿಗೆ ಶ್ರೇಷ್ಠ ಕೃಷಿಕ ಪ್ರಶಸ್ತಿಗಳಿಗೆ ಅರ್ಜಿ ಆಹ್ವಾನ

ಮೈಸೂರು,ಏ.2– 2024–25 ನೇ ಸಾಲಿನಲ್ಲಿ ಆತ್ಮ ಯೋಜನೆಯಡಿ ಜಿಲ್ಲಾ, ತಾಲೂಕು ಮಟ್ಟದ ಶ್ರೇಷ್ಠ ಕೃಷಿಕ ಪ್ರಶಸ್ತಿಗಳನ್ನು ಕೃಷಿ ಹಾಗೂ ಕೃಷಿ ಸಂಬಂಧಿತ ಕ್ಷೇತ್ರಗಳಲ್ಲಿ ಉತ್ತಮ ಸಾಧನೆ ಮಾಡಿರುವ ರೈತರಿಗೆ ನೀಡಲಾಗುತ್ತಿದೆ.

ಕೃಷಿ ಕ್ಷೇತ್ರ : ಕೃಷಿಯಲ್ಲಿ ಸಮಗ್ರ ಬೆಳೆ ಪದ್ಧತಿ, ಸಮಗ್ರ ನೀರು ನಿರ್ವಹಣೆ, ಸಾವಯುವ ಕೃಷಿ ಅಭಿವೃದ್ಧಿ, ವೈಜ್ಞಾನಿಕ ಯಂತ್ರೋಪಕರಣಗಳ ಬಳಕೆ, ಕೃಷಿ ಸಂಸ್ಕರಣೆ ಇತ್ಯಾದಿ.

ತೋಟಗಾರಿಕೆ ಕ್ಷೇತ್ರ : ಸಮಗ್ರ ತೋಟಗಾರಿಕೆ, ಹೈಟೆಕ್ ತಂತ್ರಜ್ಞಾನ ಅಳವಡಿಕೆ (ಹಸಿರು ಮನೆ, ಕಸಿ ಅಭಿವೃದ್ಧಿ, ಸಸ್ಯ ಕಾಶಿ ಇತ್ಯಾದಿ)

ಪಶುಸಂಗೋಪನೆ ಕ್ಷೇತ್ರ : ಹೈನುಗಾರಿಕೆ, ಆಡು, ಕುರಿ, ಮೊಲ, ಕೋಳಿ, ಹಂದಿ ಸಾಕಾಣಿಕೆ ಇತ್ಯಾದಿ ಸಾಕಾಣಿಕೆ ಚಟುವಟಿಕೆಗಳು ಮೀನುಗಾರಿಕೆ, ರೇಷ್ಮೆ ಕೃಷಿ, ಅರಣ್ಯ ಕೃಷಿ.

ರಾಜ್ಯಮಟ್ಟದ ಕೃಷಿ ಪಂಡಿತ, ಶ್ರೇಷ್ಠ ಕೃಷಿಕ ಪ್ರಶಸ್ತಿಗಳನ್ನು ಆಯ್ಕೆಯಾದ ರಾಜ್ಯದ 10 ರೈತರಿಗೆ (ತಲಾ ರೂ. 50,000/– ದಂತೆ), ಜಿಲ್ಲಾಮಟ್ಟದ ಶ್ರೇಷ್ಠ ಕೃಷಿಕ ಪ್ರಶಸ್ತಿಗಳನ್ನು ಜಿಲ್ಲೆಯ 10 ರೈತರಿಗೆ (ಒಂದು ಕ್ಷೇತ್ರಕ್ಕೆ 2 ರಂತೆ) ತಲಾ ರೂ.25,000/– ಹಾಗೂ ತಾಲೂಕು ಮಟ್ಟದ ಪ್ರಶಸ್ತಿಗಳನ್ನು ಆಯ್ಕೆಯಾದ ತಾಲೂಕಿನ 5 ರೈತರಿಗೆ (ಆಯ್ಕೆಯಾದ 5 ಕ್ಷೇತ್ರಗಳಲ್ಲಿ ಒಬ್ಬರಂತೆ) ತಲಾ ರೂ.10,000 ರಂತೆ ಆಯ್ಕೆ ಸಮಿತಿಯ ತೀರ್ಮಾನದಂತೆ ನೀಡಲಾಗುವುದು.

ಅರ್ಹ ಆಸಕ್ತ ರೈತರು, ರೈತ ಮಹಿಳೆಯರು ಸಂಬಂಧಪಟ್ಟ ತಾಲೂಕಿನ ಸಹಾಯಕ ಕೃಷಿ ನಿರ್ದೇಶಕರ ಕಛೇರಿಯಿಂದ ಅರ್ಜಿ ನಮೂನೆಗಳನ್ನು ಪಡೆದು ಭರ್ತಿ ಮಾಡಿದ ಅರ್ಜಿಗಳನ್ನು ಏ.21 ರೊಳಗಾಗಿ ತಾಲೂಕು ಸಹಾಯಕ ಕೃಷಿ ನಿರ್ದೇಶಕರ ಕಚೇರಿಗೆ ಆಸಕ್ತಿಯುಳ್ಳ ಪ್ರಗತಿಪರ ರೈತರು, ರೈತ ಮಹಿಳೆಯರು ಸಲ್ಲಿಸಬಹುದು ಎಂದು ಜಂಟಿ ಕೃಷಿ ನಿರ್ದೇಶಕ ಯೋಜನಾ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸರ್ಕಾರಿ ಆಸ್ಪತ್ರೆಗಳಲ್ಲೂ ಆಯುಷ್ ಸೇವೆ ದೊರೆಯುವಂತೆ ಮಾಡುವ ಚಿಂತನೆ

ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಹೇಳಿಕೆ

ಮೈಸೂರು, ಏ.2(ಎಂಕೆ)– ತಾಲೂಕು ಮತ್ತು ಜಿಲ್ಲಾ ಮಟ್ಟದ ಸರ್ಕಾರಿ ಆಸ್ಪತ್ರೆಗಳಲ್ಲಿಯೂ ಆಯುಷ್ ಸೇವೆ ದೊರೆಯುವಂತೆ ಸರ್ಕಾರ ಚಿಂತನೆ ನಡೆಸಿದೆ. ಅಲ್ಲದೆ ಪ್ರಮುಖ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿಯೂ ಸೇವೆ ನೀಡುವ ಚಿಂತನೆ ನಡೆದಿದೆ ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಹೇಳಿದರು.



ಆಯುರ್ ವೈದ್ಯ ಸಮ್ಮೇಳನದಲ್ಲಿ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಮಾತನಾಡಿದರು.

ಮೈಸೂರಿನ ಜೆ.ಕೆ.ಮೈದಾನದ ಮೈಸೂರು ಮೆಡಿಕಲ್ ಕಾಲೇಜಿನ ಅಮೃತ ಮಹೋತ್ಸವ ಸಭಾಂಗಣದಲ್ಲಿ ಬುಧವಾರ ನಡೆದ ನ್ಯಾಷನಲ್ ಇಂಟಿಗ್ರೇಟೆಡ್ ಮೆಡಿಕಲ್ ಅಸೋಸಿಯೇಷನ್‌ನ ಆಯುರ್ ವೈದ್ಯ ಸಮ್ಮೇಳನದಲ್ಲಿ ಮಾತನಾಡಿದ ಅವರು, ಪ್ರತಿಯೊಂದು ಕ್ಷೇತ್ರದಲ್ಲಿಯೂ ಒಂದಲ್ಲಾ ಒಂದು ಸಮಸ್ಯೆ ಇದ್ದೆ ಇರುತ್ತವೆ. ಅಂತೆಯೇ ಆರೋಗ್ಯ ಇಲಾಖೆಯಲ್ಲಿಯೂ ಸಮಸ್ಯೆಗಳಿದ್ದು, ಬಗೆಹರಿಸುವ ನಿಟ್ಟಿನಲ್ಲಿ ಸರ್ಕಾರ ಕೆಲಸ ಮಾಡುತ್ತಿದೆ ಎಂದರು.

ವರ್ಗಾವಣೆ ಸಂಬಂಧ ಶಿಕ್ಷಣ ಇಲಾಖೆಯಂತೆಯೇ ಆರೋಗ್ಯ ಇಲಾಖೆಯಲ್ಲಿಯೂ ಕೌನ್ಸಿಲಿಂಗ್ ಮೂಲಕ ವರ್ಗಾವಣೆ ನೀತಿಯನ್ನು ಜಾರಿಗೆ ತರಲಾಗುವುದು. ಎಲ್ಲೆಡೆಯೂ ಆಯುಷ್ ಸೇವೆ ದೊರೆಯಬೇಕು ಎಂಬ ಉದ್ದೇಶದಿಂದ ಆಯುಷ್‌ನಲ್ಲಿ ಕೆಲಸ ಮಾಡುವ ವೈದ್ಯರು, ಸಿಬ್ಬಂದಿಗಳ ವರ್ಗಾವಣೆ ಮೇಲೆ ಹೆಚ್ಚು ಗಮನ ಹರಿಸಲಾಗುವುದು ಎಂದು ತಿಳಿಸಿದರು.

ಅಲೋಪತಿ ಮತ್ತು ಆಯುರ್ವೇದ ವೈದ್ಯರ ನಡುವೆ ಕೆಲ ಭಿನ್ನಾಭಿಪ್ರಾಯಗಳಿವೆ. ಅಲೋಪತಿ, ಆಯುರ್ವೇದ ಹಾಗೂ ಹೋಮಿಯೋಪತಿಯಲ್ಲಿಯೂ ಒಳ್ಳೆ ಅಂಶಗಳಿದ್ದು, ಜನರಿಗೆ ಅನುಕೂಲವಾಗುವ ನಿಟ್ಟಿನಲ್ಲಿ ಜಾರಿಗೊಳಿಸಬೇಕಿದೆ. ಈ ನಿಟ್ಟಿನಲ್ಲಿ ಮುಂದಿನ ವಾರ ಅಥವಾ ಹತ್ತು ದಿನಗಳಲ್ಲಿ ಪ್ರಮುಖ ಸಭೆ ನಡೆಸಿ, ಗೊಂದಲಗಳನ್ನು ಬಗೆಹರಿಸುವ ಸೂಕ್ತ ನಿರ್ಣಯಗಳನ್ನು ತೆಗೆದುಕೊಳ್ಳಲಾಗುವುದು. ಆದರೆ, ಆಯಾ ಚಿಕಿತ್ಸಾ ವ್ಯಾಪ್ತಿಗೆ ಸೀಮಿತವಾಗಿರುವಂತೆಯೂ ಸ್ಪಷ್ಟ ನಿರ್ಣಯಗಳನ್ನು ತೆಗೆದುಕೊಳ್ಳುವ ಸಾಧ್ಯತೆಗಳಿವೆ ಎಂದರು.

ಜೀವನಶೈಲಿ ಬದಲಾಗಬೇಕು: ಪ್ರಸ್ತುತ ದಿನಮಾನಗಳಲ್ಲಿ ನಮ್ಮ ಜೀವನ ಶೈಲಿಯಿಂದ ಬಹುತೇಕ ಕಾಯಿಲೆಗಳು ಬರುತ್ತಿವೆ ಆರೋಗ್ಯ ನೋಡಿಕೊಂಡರಷ್ಟೇ ನಮ್ಮಲ್ಲಿರುವ ಪ್ರತಿಭೆಯನ್ನು ಸದ್ಬಳಕೆ ಮಾಡಿಕೊಂಡು ಸಮಾಜಕ್ಕೆ ಏನಾದರೂ ಕೊಡುಗೆ ನೀಡಲು ಸಾಧ್ಯ. ನಮ್ಮ–ನಡೆ ನುಡಿಯಲ್ಲಿ ಆರೋಗ್ಯವಂತರಾಗಿ, ಆಯಸ್ಸು ಇರುವಂತಹರಾಗಬೇಕು. ಈ ನಿಟ್ಟಿನಲ್ಲಿ ಪ್ರತಿಯೊಬ್ಬರು ಆರೋಗ್ಯದ ಕಡೆ ಗಮನಹರಿಸಬೇಕು. ಹಾಗಾಗಿ ಜನರಿಗೆ ತಿಳುವಳಿಕೆ ನೀಡಿ ಬದಲಾವಣೆಯತ್ತ ಕರೆತರುವಲ್ಲಿ ಆಯುಷ್ ಜವಾಬ್ದಾರಿ ಹೆಚ್ಚಿದೆ ಎಂದು ತಿಳಿಹೇಳಿದರು.

ಕೇಂದ್ರದ ಬೆಲೆ ಏರಿಕೆ ವಿರುದ್ಧವೂ ಪ್ರತಿಭಟಿಸಲಿ

ಮೈಸೂರು, ಏ.2(ಎಂಕೆ)–ಕೇಂದ್ರ ಸರ್ಕಾರ ಮಾಡಿರುವ ಬೆಲೆ ಏರಿಕೆ ವಿರುದ್ಧವೂ ರಾಜ್ಯ ಬಿಜೆಪಿಯವರು ಪ್ರತಿಭಟನೆ ಮಾಡಲಿ ಎಂದು ಸಚಿವ ದಿನೇಶ್ ಗುಂಡೂರಾವ್ ಹೇಳಿದರು.

ಮೈಸೂರಿನಲ್ಲಿ ಬುಧವಾರ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ ಅವರು, ಬೆಲೆ ಏರಿಕೆ ವಿರೋಧಿಸಿ ಬಿಜೆಪಿಯವರು ಪ್ರತಿಭಟನೆ ಮಾಡಲಿ. ಅದರ ಜೊತೆಗೆ ಕೇಂದ್ರ ಸರ್ಕಾರದ ಬೆಲೆ ಏರಿಕೆ ನೀತಿಯನ್ನೂ ಸೇರಿಸಿಕೊಂಡು ಪ್ರತಿಭಟನೆ ಮಾಡಲಿ ಎಂದರು.

ಬಿಜೆಪಿ ಶಾಸಕರ ಅಮಾನತಿಗೆ ಪ್ರತಿಕ್ರಿಯಿಸಿ, ಸದನಕ್ಕೆ ಅಗೌರವ ತೋರಿದ ಶಾಸಕರನ್ನು ಸ್ಪೀಕರ್ ಅಮಾನತು ಮಾಡಿದ್ದಾರೆ. ಮುಂದೆ ಯಾರೂ ಈ ರೀತಿ ಮಾಡಬಾರದು ಅಂತ ಈ ರೀತಿ ಮಾಡಿದ್ದಾರೆ. ಸ್ಪೀಕರ್ ಕ್ರಮ ಸರಿಯಿದೆ. ಮೋದಿ ಸರ್ಕಾರ ಎಷ್ಟೋ ಜನರನ್ನ ಅಮಾನತು ಮಾಡಿತ್ತು. ಇದೆಲ್ಲವನ್ನೂ ಬಿಜೆಪಿ ಮರೆತಂತಿದೆ ಎಂದು ಟಾಂಗ್ ಕೊಟ್ಟರು.

ಕೇಂದ್ರದಿಂದ ಅಧಿಕಾರ ಕಿತ್ತುಕೊಳ್ಳುವ ಕೆಲಸ: ಕೇಂದ್ರ ಸರ್ಕಾರದಿಂದ ವಕ್ಫ್ ಬಿಲ್ ಮಂಡನೆ ವಿಚಾರ ಕುರಿತು ಪ್ರತಿಕ್ರಿಯಿಸಿದ ಸಚಿವರು, ಒಕ್ಕೂಟ ವ್ಯವಸ್ಥೆಗೆ ಧಕ್ಕೆ ತರುವಂತಹ ಸರ್ವಾಧಿಕಾರಿ ಧೋರಣೆಯಾಗಿದೆ. ಧಾರ್ಮಿಕ ಸಂಸ್ಥೆಗಳ ವಿಚಾರ ರಾಜ್ಯಕ್ಕೆ ಸೀಮಿತವಾಗಿದ್ದು, ಕೇಂದ್ರ ಸರ್ಕಾರಕ್ಕೆ ಹಸ್ತಕ್ಷೇಪ ಮಾಡುವ ಅಧಿಕಾರ ಇಲ್ಲ. ಸಂವಿಧಾನಕ್ಕೆ ವಿರುದ್ಧವಾಗಿ, ರಾಜ್ಯ ಸರ್ಕಾರದ ಅಧಿಕಾರವನ್ನು ಕಿತ್ತುಕೊಳ್ಳುವ ಕೆಲಸವನ್ನು ಕೇಂದ್ರ ಸರ್ಕಾರ ಮಾಡುತ್ತಿದೆ. ಪಾರ್ಲಿಮೆಂಟ್‌ನಲ್ಲಿ ದಬ್ಬಾಳಿಕೆ ಮಾಡಿ ವಕ್ಫ್ ಬಿಲ್ ಪಾಸ್ ಮಾಡಿದ್ದು, ಈ ವಿಚಾರ ಸುಪ್ರೀಂಕೋರ್ಟ್ ಮೆಟ್ಟಿಲೇರುವ ಸಾಧ್ಯತೆ ಇದೆ ಎಂದರು.

ದಾಖಲೆ ನೀಡಲಿ: ವಕ್ಫ್ ಆಸ್ತಿ ಕಾಂಗ್ರೆಸ್‌ನವರಿಗೆ ಸೇರಿದೆ ಎಂದಿರುವ ಮಾಜಿ ಸಿಎಂ ಬಸವರಾಜ ಬೊಮ್ಮಾಯಿ ಹೇಳಿಕೆಗೆ ಪ್ರತಿಕ್ರಿಯಿಸಿ, ಅವರೇ 4 ವರ್ಷ ಸಿಎಂ ಆಗಿದ್ದಾಗ ಏನು ಮಾಡಿದರು. ಈ ರೀತಿ ಆರೋಪ ಮಾಡುವುದು ಸುಲಭ ತಪ್ಪನ್ನು ಯಾರು ಕೂಡ ರಕ್ಷಣೆ ಮಾಡಲು ಹೋಗುವುದಿಲ್ಲ. ವಕ್ಫ್‌ನಲ್ಲಿ ಭ್ರಷ್ಟಾಚಾರ ಆಗಿದ್ದರೇ ಸೂಕ್ತ ಕ್ರಮ ಆಗಲಿ. ವಕ್ಫ್ ಆಸ್ತಿ ಕಾಂಗ್ರೆಸ್‌ನವರದ್ದು ಎಂಬುದಕ್ಕೆ ಒಂದು ದಾಖಲೆ ಕೊಡಲಿ ಎಂದು ಸವಾಲೆಸೆದರು.

13ನೇ ವರ್ಷದ ಸವಿನೆನಪು



ನೀವು ನಮ್ಮನ್ನಗಲಿ ಇಂದಿಗೆ 13 ವರ್ಷ ಕಳೆದರೂ ಸದಾ ನಿಮ್ಮ ನೆನಪು ನಮ್ಮ ಮನದಲ್ಲಿ ಹಚ್ಚ ಹಸಿರಾಗಿದೆ. ನಿಮ್ಮ ಆತ್ಮಕ್ಕೆ ಚಿರಶಾಂತಿ ಕೋರುವ,

ದುಃಖಿತರು:
ಲಕ್ಷ್ಮಿ, ಕೃಷ್ಣ ಹಾಗೂ ಕುಟುಂಬವರ್ಗದವರು, ಕೆ.ಜಿ. ಕೊಪ್ಪಲ್, ಜಯನಗರ, ಮೈಸೂರು.

ಶ್ರೀ ಸುರೇಶ್
ನಿಧನ: 3–4–2012

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ: ಮೈಸೂರು ಗ್ರಾಮಾಂತರ ವಿಭಾಗ: ಮೈಸೂರು

ಸಂ: ಕರಾಸಾ/ಮೈವಿ/ಸಂ/ವಾ/6337/6338/6339/2024–25 ದಿನಾಂಕ: 26–03–2025

ಇ–ಟೆಂಡರ್/ಮ್ಯಾನ್ಯುಲ್ ಟೆಂಡರ್ ಮತ್ತು ಸಂಧಾನ ಪ್ರಕಟಣೆ ಸಂ: 05/2024–25
(ಇ–ಟೆಂಡರ್, ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)

ಕ.ರಾ.ರ.ಸಾ.ನಿಗಮ ಮೈಸೂರು ಗ್ರಾಮಾಂತರ ವಿಭಾಗಕ್ಕೆ ಸೇರಿದ ಕೆ.ಆರ್.ನಗರ ಬಸ್ ನಿಲ್ದಾಣ, ಹುಣಸೂರು ಹೊಸ/ಗ್ರಾಮಾಂತರ ಬಸ್ ನಿಲ್ದಾಣ, ಭೇರ್ಯ ಬಸ್ ನಿಲ್ದಾಣ, ಸಾಲಿಗ್ರಾಮ ಬಸ್ ನಿಲ್ದಾಣ, ಮೈಸೂರು ಕೇಂದ್ರೀಯ ಬಸ್ ನಿಲ್ದಾಣ, ಪಿರಿಯಾಪಟ್ಟಣ ಬಸ್ ನಿಲ್ದಾಣ, ಬಿಳಿಕೆರೆ ಬಸ್ ನಿಲ್ದಾಣ, ಬೆಟ್ಟದಪುರ ಬಸ್ ನಿಲ್ದಾಣ ಅಲ್ಲದೆ ಮಿರ್ಲೆ, ಚಂಚನಕಟ್ಟೆ, ಕಟ್ಟೆಮಳಲವಾಡಿ, ರಾವಂದೂರು, ಕಿತ್ತೂರು, ಸರಗೂರು ಬಸ್ ನಿಲ್ದಾಣಗಳಲ್ಲಿ ಖಾಲಿಯಿರುವ, ಮುಂದೆ ಖಾಲಿಯಾಗುವ ಜನರಲ್ ಮಳಿಗೆಗಳು, ಉಪಹಾರಗೃಹ, ಪಾರ್ಕಿಂಗ್ ತೆರೆದ ಸ್ಥಳ, ಮುಂತಾದ ವಾಣಿಜ್ಯ ಸ್ಥಳಗಳಿಗೆ ಪರವಾನಗಿದಾರರ ಆಯ್ಕೆಗಾಗಿ ಇ–ಟೆಂಡರ್/ಮ್ಯಾನ್ಯುಲ್ ಟೆಂಡರ್ ಮತ್ತು ಸಂಧಾನ ಪ್ರಕಟಣೆಗಳನ್ನು ಹೊರಡಿಸಲಾಗಿದೆ.

1) **ಇ–ಟೆಂಡರ್:** ಡಿಜಿಟಲ್–ಕೀ ಹೊಂದಿರುವ ಆಸಕ್ತರು ಮಾತ್ರ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಇ–ಟೆಂಡರ್‌ನಲ್ಲಿ ಭಾಗವಹಿಸಬಹುದಾಗಿದೆ. **ದಿನಾಂಕ: 02–04–2025 ರಿಂದ 22–04–2025, 17.00 ಘಂಟೆವರೆಗೆ** ಇ–ಟೆಂಡರ್ ದಾಸ್ತಾವೇಜುಗಳನ್ನು ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್: https://kppp.karnataka.gov.in ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು ಹಾಗೂ ಬಿಡ್ ಸಲ್ಲಿಸಬಹುದು. ಇ–ಟೆಂಡರ್‌ನ ಆರ್ಥಿಕ ಬಿಡ್ಡನ್ನು **ದಿನಾಂಕ: 28–04–2025, 12–00 ಘಂಟೆಗೆ** ತೆರೆಯಲು ನಿಗದಿಗೊಳಿಸಲಾಗಿದೆ.(ತಾಂತ್ರಿಕ ತೊಂದರೆ ಇಲ್ಲದೆ ಇದ್ದಲ್ಲಿ)

2) **ಸಂಧಾನ ಪ್ರಕಟಣೆ:** ಸಂಧಾನದ ಅರ್ಜಿಗಳನ್ನು **ದಿನಾಂಕ: 02–04–2025 ರಿಂದ 22–04–2025, 17.00 ಘಂಟೆವರೆಗೆ** ವಿಭಾಗೀಯ ಕಚೇರಿಯಲ್ಲಿ ನೀಡಲಾಗುತ್ತದೆ. **ದಿನಾಂಕ: 24–04–2025, 17.00 ಘಂಟೆವರೆಗೆ** ದಾಖಲಾತಿಗಳನ್ನು ಟೆಂಡರ್ ಪೆಟ್ಟಿಗೆಗೆ ಹಾಕುವುದು. **ದಿನಾಂಕ: 25–04–2025 ಸಮಯ: 11.00 ಘಂಟೆ** ನಂತರ ಸಂಧಾನ ಸಭೆಯನ್ನು ನಡೆಸಲಾಗುವುದು.

3) **ಮ್ಯಾನ್ಯುಲ್ ಟೆಂಡರ್ ಪ್ರಕಟಣೆ:** ಟೆಂಡರ್ ಅರ್ಜಿಗಳನ್ನು **ದಿನಾಂಕ: 02–04–2025 ರಿಂದ 22–04–2025, 17.00 ಘಂಟೆವರೆಗೆ** ವಿಭಾಗೀಯ ಕಚೇರಿಯಲ್ಲಿ ನೀಡಲಾಗುತ್ತದೆ. **ದಿನಾಂಕ: 24–04–2025, 17.00 ಘಂಟೆವರೆಗೆ** ದಾಖಲಾತಿಗಳನ್ನು ಟೆಂಡರ್ ಪೆಟ್ಟಿಗೆಗೆ ಹಾಕುವುದು. **ದಿನಾಂಕ: 25–04–2025 ಸಮಯ: 11.00 ಘಂಟೆ** ನಂತರ ಮ್ಯಾನ್ಯುಲ್ ಟೆಂಡರ್ ಸಭೆಯನ್ನು ನಡೆಸಲಾಗುವುದು.

ಸಂಧಾನಕ್ಕೆ/ಮ್ಯಾನ್ಯುಲ್ ಟೆಂಡರ್‌ಗೆ ಗೊತ್ತುಪಡಿಸಿರುವ ವಾಣಿಜ್ಯ ಮಳಿಗೆಗಳಿಗೆ ಭಾಗವಹಿಸಲು ಉದ್ದೇಶಿಸಿರುವ ಆಸಕ್ತರು ಅರ್ಜಿ ಪಡೆಯಲು ಡಿ.ಡಿ ಸಲ್ಲಿಸಿ, ವಿಭಾಗೀಯ ಕಚೇರಿಯಿಂದ ಅರ್ಜಿಯನ್ನು ಪಡೆದು ಈ ಕೆಳಗೆ ಸಹಿ ಮಾಡಿರುವವರ ಪದನಾಮಕ್ಕೆ ಇ.ಎಂ.ಡಿ ಮೊತ್ತವನ್ನು ಸಹ ಡಿ.ಡಿ ಮುಖೇನ ಸಲ್ಲಿಸುವುದು ಜೊತೆಗೆ ವಿಳಾಸ ದೃಢೀಕರಣ ಪತ್ರಕ್ಕೆ ಆಧಾರ್ ಕಾರ್ಡ್ ಜೊತೆಗೆ ಕಡ್ಡಾಯವಾಗಿ ಪಾನ್ ಕಾರ್ಡ್ ಹಾಗೂ ಮೊಬೈಲ್ ಸಂಖ್ಯೆಯನ್ನು ನೀಡಿ ಭಾಗವಹಿಸಬಹುದಾಗಿದೆ. ಅರ್ಜಿ ಪಡೆಯುವ ವಿಚಾರವಾಗಿ ಹಾಗೂ ಇತರೆ ವಿಚಾರವಾಗಿ ಹೆಚ್ಚಿನ ವಿವರಗಳಿಗೆ ವಿಭಾಗೀಯ ಕಚೇರಿ, ಕರಾರಸಾಸಂ, ಮೈಸೂರು ವಿಭಾಗ, ಹನುಮಂತನಗರ, ಮೈಸೂರು ಇಲ್ಲಿ ಕಛೇರಿ ಅವಧಿಯಲ್ಲಿ ಸಂಪರ್ಕಿಸಲು ಕೋರಲಾಗಿದೆ.

ಹೆಚ್ಚಿನ ವಿವರಗಳಿಗೆ ಸ.ಸಂ.ವ್ಯರ ದೂ.ಸಂ:7760990811 ಹಾಗೂ ವಿಷಯ ನಿರ್ವಾಹಕರ ದೂ ಸಂ: 9740661585 ಗಳನ್ನು ಸಂಪರ್ಕಿಸಬಹುದು.

ಸಹಿ/–
ವಿಭಾಗೀಯ ನಿಯಂತ್ರಣಾಧಿಕಾರಿ,
ಮೈಸೂರು (ಗ್ರಾ) ವಿಭಾಗ, ಮೈಸೂರು

ವಾಸಾಸಂಇ/ವಾ.ಪ್ರ/038/ಎಂಎಎ/2025–26

ಹೆಸರು ಬದಲಾವಣೆ

ಮನೆ ನಂ. 337, "ಚಂದನ" ನವಿಲು ರಸ್ತೆ, ಎ ಮತ್ತು ಬಿ ಬ್ಲಾಕ್, ಕುವೆಂಪುನಗರ, ಮೈಸೂರು ಸಿಟಿಯಲ್ಲಿ ವಾಸವಾಗಿರುವ ಸಿ. ಚೌಡಯ್ಯ ರವರ ಮಗ ಕಿರಣ್. ಸಿ ಆದ ನಾನು, ನನ್ನ ಹೆಸರನ್ನು ಕಿರಣ್ ಚೌಡ ಎಂದು ಸ್ವಇಚ್ಛೆಯಿಂದ ಬದಲಾಯಿಸಿಕೊಂಡಿರುತ್ತೇನೆ. ಇನ್ನು ಮುಂದೆ ನನ್ನ ಹೆಸರನ್ನು ಕಿರಣ್ ಚೌಡ ಎಂದು ನನ್ನ ಸಂಬಂಧಿಕರು, ಸಹಪಾಠಿಗಳು, ಗೆಳೆಯರು ನನ್ನನ್ನು ಕರೆಯಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ. ಇನ್ನು ಮುಂದೆ ನನ್ನ ಎಲ್ಲಾ ವ್ಯವಹಾರಗಳು ಮತ್ತು ದಾಖಲಾತಿಗಳಲ್ಲಿ ನನ್ನ ಹೆಸರು ಕಿರಣ್ ಚೌಡ ಎಂದು ಆಗಿರುತ್ತದೆ. ಆದರೆ ನನ್ನ ಸಹಿಯನ್ನು ಈ ಹಿಂದೆ ಯಾವ ರೀತಿಯಲ್ಲಿ ಮಾಡುತ್ತಿದ್ದೇನೋ ಅದನ್ನೇ ಮುಂದುವರೆಸಿಕೊಂಡು ಹೋಗುತ್ತೇನೆ. ಈ ಮೇಲ್ಕಂಡ ಎಲ್ಲಾ ಅಂಶಗಳನ್ನು ನೋಟರಿ ಆದ ವೆಂಕಟೇಶ್ ಪಟವರ್ಧನ್ ಅವರ ಮುಂದೆ ದಿನಾಂಕ: 10-1-2025 ರಂದು ಅಫಿಡವಿಟ್ ಮಾಡಿರುತ್ತೇನೆ.

ಮೈಸೂರು ಮಿತ್ರ
ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
–ಜಾಹೀರಾತು ವ್ಯವಸ್ಥಾಪಕರು

ಮೈಸೂರು ಮಿತ್ರ
ವಾರ್ಷಿಕೋತ್ಸವ ವಿಶೇಷ ಸಂಚಿಕೆ

"ಮೈಸೂರು ಮಿತ್ರ" ತನ್ನ ಓದುಗರು ಹಾಗೂ ಜಾಹೀರಾತುದಾರರ ಸೇವೆಯಲ್ಲಿ ಏಪ್ರಿಲ್ 16, 2025ಕ್ಕೆ 45 ವರ್ಷಗಳನ್ನು ಯಶಸ್ವಿಯಾಗಿ ಪೂರ್ಣಗೊಳಿಸಿ, 46ನೇ ವರ್ಷಕ್ಕೆ ಕಾಲಿಡುತ್ತಿರುವ ಈ ಸುಸಂದರ್ಭದಲ್ಲಿ ವರ್ಣರಂಜಿತ ವಿಶೇಷಾಂಕವನ್ನು ಹೊರತರಲಾಗುತ್ತಿದೆ. ಹಾಗಾಗಿ ಜಾಹೀರಾತುದಾರರಿಗೆ ಇದೊಂದು ಸುಸಮಯ. ಮುದ್ರಣದ ದೃಷ್ಟಿಯಿಂದ ತಮ್ಮ ಜಾಹೀರಾತುಗಳು ಏಪ್ರಿಲ್ 10, 2025 ರೊಳಗೆ ತಲುಪುವಂತೆ ಮಾಡಲು ಕಳಕಳಿಯ ಮನವಿ.

ಪ್ರಧಾನ ಕಛೇರಿ
0821-2496522, 2496523, 0821-2496520 (5 ಲೈನುಗಳು)
ಮರಿಯ ಫರ್ನಾಂಡೀಸ್, ಜಾಹೀರಾತು ವ್ಯವಸ್ಥಾಪಕರು: 9448525060
ಜಾಯ್ ಆಂಥೋಣಿ ಡೋವ್: 8951668960
ಪ್ರೇಮಾ: 9880549879
ಕೆ.ಆರ್. ಸರ್ಕಲ್ ಕಚೇರಿ: 0821-2431774
ದೇವರಾಜ ಅರಸ್ ರಸ್ತೆ ಕಚೇರಿ: 0821-2428695

ಕೊಡಗು – ಪ್ರಸಾದ್, ಸೀತಾ ನಿಲಯ, ಮಡಿಕೇರಿ ರೇಂಜ್ ಫಾರೆಸ್ಟ್ ಹತ್ತಿರ, ಹೊಸ ಬಡಾವಣೆ, ಮಡಿಕೇರಿ 9731469871

ಮಂಡ್ಯ – ಕೆ. ಮೋಹನ್‌ರಾಜ್ 8762960325

ಶ್ರೀರಂಗಪಟ್ಟಣ – ವಿನಯ್ ಕಾರೇಕುರ, ಶ್ರೀರಂಗಪಟ್ಟಣ 9686893234

ಹುಣಸೂರು – ಕೆ. ಕೃಷ್ಣ (ಕೆ.ಕೆ.), EWS 204, KHB ಕಾಲೋನಿ, ಕಲ್ಕುಣಿಕೆ, ಹುಣಸೂರು. 9448720626

ಚಾಮರಾಜನಗರ – ಸಿದ್ದಲಿಂಗಸ್ವಾಮಿ, ಸಿ.ಹೆಚ್.ಆರ್. ಕಾಂಪ್ಲೆಕ್ಸ್, ಸರ್ಕಾರಿ ಆಸ್ಪತ್ರೆ ಎದುರು, ಚಾಮರಾಜನಗರ 9242265657

ಟಿ.ನರಸೀಪುರ – ಕುಮಾರ್, ಸಾರ್ವಜನಿಕ ಆಸ್ಪತ್ರೆ ರಸ್ತೆ, ಆರ್ಯ ಮಹಲ್ ಛತ್ರದ ಎದುರು, ಟಿ. ನರಸೀಪುರ. 9986719590

ಗುಂಡ್ಲುಪೇಟೆ – ಸೋಮಶೇಖರ್, ದ.ರಾ. ಬೇಂದ್ರೆ ನಗರ, ಅಶ್ವಿನಿ ಲೇಔಟ್, ಗುಂಡ್ಲುಪೇಟೆ. 9845995426

ಕೆ.ಆರ್. ನಗರ – ಮಂಜುನಾಥ, ವಾರ್ಡ್ ನಂ.17, ಕನಕನಗರ Extn. ಮುಳ್ಳೂರು ರಸ್ತೆ, ಕೆ.ಆರ್.ಟೌನ್ 9483084345

ಮಳವಳ್ಳಿ – ಶಿವಶಂಕರ, ನಂ.47, 1ನೇ ಕ್ರಾಸ್, ಎನ್.ಇ.ಎಸ್ ಮಳವಳ್ಳಿ ಟೌನ್–571430 9632407806

ಕೊಳ್ಳೇಗಾಲ – ಎಸ್.ರಾಜು, ಮೈಸೂರು ಮಿತ್ರ ರಿಪೋರ್ಟರ್ #101, ಹುರುಳಿಕೇರಿ ಬೀದಿ, ಕೊಳ್ಳೇಗಾಲ 9916621007

ಹಾಸನ – ಆರ್.ಎನ್.ಸೋಮೇಶ್‌ಗೌಡ, ಹೋಲಿ ಚಿಲ್ಡ್ರನ್ ಶಾಲೆ ಹತ್ತಿರ, ಜಯನಗರ, 1ನೇ ಹಂತ, 2ನೇ ಕ್ರಾಸ್, ಹಾಸನ. 9448401175

ಕುಶಾಲನಗರ – ರಘು ಹೆಬ್ಬಾಲೆ, ಮೈಸೂರು ಮಿತ್ರ ರಿಪೋರ್ಟರ್ C/o ಮನು ಪ್ರೆಸ್, ಐ.ಬಿ.ರಸ್ತೆ, ಕುಶಾಲನಗರ 9845698401

ಜಯಪುರ – ಬಿಳಿಗಿರಿ, ಜಯಪುರ 9945479288

ಪಿರಿಯಾಪಟ್ಟಣ – ವಿರೇಶ್, ಪಿರಿಯಾಪಟ್ಟಣ 8660057128

ವಿರಾಜಪೇಟೆ – ಮಂಜುನಾಥ, ವಿರಾಜಪೇಟೆ 9900949353

ಯಳಂದೂರು – ವಿ.ನಾಗರಾಜು, ಮೈತ್ರಿ ಮೆಡಿಕಲ್ಸ್, ಬಳೆಪೇಟೆ, ಯಳಂದೂರು 9844349191

ಕೆ.ಆರ್.ಪೇಟೆ – ಶ್ರೀನಿವಾಸ, ಅಗ್ರಹಾರ ಬಾಚಹಳ್ಳಿ, ಕೆ.ಆರ್.ಪೇಟೆ 9449326847, 7022757438

ಹೆಚ್.ಡಿ.ಕೋಟೆ – ಮಂಜುನಾಥ ಎಸ್., ಹೆಚ್.ಡಿ.ಕೋಟೆ 9483574452

ಕೆ.ಎಂ.ದೊಡ್ಡಿ – ಸತೀಶ್ ಎ.ಎಲ್, ಕೆ.ಎಂ.ದೊಡ್ಡಿ 9242120338

ನಂಜನಗೂಡು – ರಂಗಸ್ವಾಮಿ, ನಂ.4565, ಕಬಿನಿ ಕಾಲೋನಿ ಹಿಂಭಾಗ, ನೀಲಕಂಠ ನಗರ, ನಂಜನಗೂಡು ಟೌನ್–571301 9901602226

ಹುಣಸೂರು – ಹೆಚ್.ಆರ್. ಕೃಷ್ಣಕುಮಾರ್ (ಜನ್ ರಾಮೇಗೌಡ), ನಂದಿನಿ ಮಾರಾಟ ಕೇಂದ್ರ, ಮಾರುತಿ ಪೆಟ್ರೋಲ್ ಬಂಕ್ ಹತ್ತಿರ ಹಳೆಯ ಬಿ.ಎಂ. ರಸ್ತೆ ಹತ್ತಿರ, ಹುಣಸೂರು 9060406093

ಕೊಳ್ಳೇಗಾಲ – ನಾಗೇಂದ್ರ ಸ್ವಾಮಿ, ನಂ.7ಎ, 684, 14 ನೇ ಕ್ರಾಸ್, ಬಸವೇಶ್ವರ ನಗರ, ಕೊಳ್ಳೇಗಾಲ 9448576247, 7899849858